
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಅಕ್ಟೋಬರ್ 13, 2010 ರೂ. 12/-

ವೀರಶೈವ ಮಹಾಸಭಾ ಯಡ್ಡಿ ಆಸ್ತೀನಾ?



KIADB ದರೋಡೆ



...ಟ್ಟಾ ಮಗ ಕೆಟ್ಟ
...ಎಂ ಮಗ ಕಂಗೆಟ್ಟ

ರವಿಪೂಜಾರಿ ಜೊತೆ ಬೆಂಗಳೂರು ರೌಡಿಗಳು





ಬಿಜೆಪಿ ಖಜಾಂಚಿ ಲೆಹರ್ ಸಿಂಗ್ ವಂಚಕ ಪುರಾಣ

ಅದಿರು ಕಳ್ಳರ ಜೊತೆ ಎನ್‌ಕೌಂಟರ್ ದಯಾನಾಯಕ್

ಏನಪ್ಪಾ ಹೊಸ ರಗಳೆ?

ಹುಬ್ಬಳ್ಳಿ: ಚೌರಾದ್ಕರ್ ಹೆಸರಲ್ಲಿ 4 ಕೋಟಿ ವಸೂಲಿ

ಜನತೆಯ ದಂಡನಾಯಕ ಸಂಗೊಳ್ಳಿ ರಾಯಣ್ಣನನ್ನು

ತಮ್ಮ ಸೈನಿಕನನ್ನಾಗಿ ಮಾಡಿಕೊಳ್ಳುತ್ತಿರುವವರನ್ನು ಉದ್ದೇಶಿಸಿ....



ಸಾಕೇತ್ ರಾಜನ್‌ರವರು ಸ್ಪಷ್ಟಪಡಿಸುವಂತೆ "ಸಮುದಾಯದ ಎಲ್ಲಾ ವರ್ಗಗಳ ಜನರನ್ನು ರಾಯಣ್ಣ ಸೇರಿಸಿದ್ದರೂ, ಅವರ್‍ಯಾರೂ ಜಮೀನ್ದಾರರಾಗಿರಲಿಲ್ಲ ಎಂಬ ಅಂಶ ಆತನ ಹೋರಾಟವು ಯಾರ ಪರವಾಗಿತ್ತು ಎಂಬುದನ್ನು ಸೂಚಿಸುತ್ತದೆ. ಆದರೆ ರಾಯಣ್ಣನ ಹೋರಾಟ ಕೇವಲ ಭೂರಹಿತರ ಪರವಾಗಿ ಇರಲಿಲ್ಲ. ಆತ ವರ್ಗ, ಜಾತಿ ಭೇದವನ್ನು ಅಳಿಸಲು ಅನ್ನ ದಾಸೋಹ ಪದ್ಧತಿಯನ್ನೂ ಜಾರಿಗೆ ತಂದಿದ್ದ. ಹೀಗೆ ಮಾಡುವ ಮೂಲಕ ಭೂರಹಿತರ ಹೋರಾಟಕ್ಕೆ ಉಳಿಗಮಾನ್ಯ ವ್ಯವಸ್ಥೆಯ ವಿರುದ್ಧದ ತಿರುವನ್ನು ನೀಡಿದ ರಾಯಣ್ಣ. ಈ ಸಂಗ್ರಾಮ ಜಮೀನ್ದಾರಿ ಅಧಿಪತ್ಯದಲ್ಲಿದ್ದಿದ್ದರೆ ಅದರಲ್ಲಿ ಈ ಸಾಧ್ಯತೆಗಳಾಗಲೀ, ಅಂಶಗಳಾಗಲೀ ಅರಳಲು ಅಸಾಧ್ಯವಾಗುತ್ತಿತ್ತು."

ಅಂತೂಇಂತೂ ಬೆಂಗಳೂರು ನಗರದ ಮಧ್ಯಭಾಗದಲ್ಲಿ ಎರಡು ವರ್ಷಗಳಿಂದ ಮುಸುಕು ಹೊದ್ದು ನಿಂತಿದ್ದ ಸಂಗೊಳ್ಳಿ ರಾಯಣ್ಣನ ಪ್ರತಿಮೆಗೆ ಸೆಪ್ಟೆಂಬರ್ 28ರ ಮಂಗಳವಾರ ಮುಕ್ತಿ ಸಿಕ್ಕಿದೆ. ಮುಖ್ಯಮಂತ್ರಿ ಯಡಿಯೂರಪ್ಪ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯರಾದಿಯಾಗಿ ಈ ಕಾಲದ ಎಲ್ಲಾ ಪ್ರಭುಗಳು ಒಟ್ಟು ಸೇರಿ ರಾಯಣ್ಣನ ಪ್ರತಿಮೆಯನ್ನೇನೋ ಅನಾವರಣ ಮಾಡಿದರು. ಆದರೆ ಜಾತಿ-ಮತಗಳ ಹಂಗಿಲ್ಲದೆ ಇಡೀ ರೈತಾಪಿಯನ್ನು ದೇಶೀ ಮತ್ತು ವಿದೇಶೀ ದೊರೆಗಳ ವಿರುದ್ಧ ಸಂಘಟಿಸಿ ಹೋರಾಡುತ್ತಲೇ ಪ್ರಾಣಕೊಟ್ಟ ಈ ಜನನಾಯಕನಿಗೆ ಈ ಆಧುನಿಕ ದೊರೆಗಳು ಕೊಟ್ಟ ಮರ್ಯಾದೆಯೇನು? ಈ ಪ್ರತಿಮೆ, ಅಲ್ಲಿ ಅವರು ರಾಯಣ್ಣನನ್ನು ನೆನಪಿಸಿಕೊಂಡ ರೀತಿ ಎಲ್ಲವೂ ಜನತೆಯ ಅಂದಿನ ದಂಡನಾಯಕನನ್ನು ಇಂದಿನ ತಮ್ಮ ಸೈನಿಕನನ್ನಾಗಿ ಮಾಡಿಕೊಳ್ಳಲು ನಡೆಸಿದ ಹುನ್ನಾರದಂತೆಯೇ ಇತ್ತು. ಮೊದಲನೆಯದಾಗಿ ಈ ಆಧುನಿಕ ಯುಗದ ಜಾತಿಪ್ರೇರಿತ ರಾಜಕಾರಣವು ಆಕಾಶದೆತ್ತರದ ನಾಯಕರನ್ನೂ ಜಾತಿ-ಮತಗಳ ಸೀಮಿತ ಪರಿಧಿಗೆ ಕುಗ್ಗಿಸಿಬಿಡುತ್ತಿದೆ. ಆ ಮೂಲಕ ತಮ್ಮ ಸಮಕಾಲೀನ ಅಗತ್ಯಗಳಿಗಾಗಿ ಇತಿಹಾಸ ಮತ್ತು ವರ್ತಮಾನ ಎರಡಕ್ಕೂ ದ್ರೋಹ ಬಗೆಯುತ್ತದೆ. ಅಪ್ರತಿಮ ಸ್ವಾತಂತ್ರ್ಯ ಸಮರವೀರರಾದ ಟಿಪ್ಪೂ ಸುಲ್ತಾನ್ ಕೇವಲ ಮುಸ್ಲಿಂ ನಾಯಕನಾಗುವುದು, ಸಂಗೊಳ್ಳಿ ರಾಯಣ್ಣನನ್ನು ಕೇವಲ ಕುರುಬರು ಮಾತ್ರ ನಾಯಕನೆಂದು ಗುರುತಿಸುವುದು, ಅಂಬೇಡ್ಕರ್ ಕೇವಲ ದಲಿತರ ನಾಯಕ ಎಂದು ಬಿಂಬಿಸಲ್ಪಡುವುದು- ಎಲ್ಲವೂ ಈ ಹೀನಾಯ ಅವಕಾಶವಾದಿ ರಾಜಕಾರಣದ ಪರಿಣಾಮಗಳು. ಹೀಗಾಗಿಯೇ ಸಮುದಾಯಗಳ ಶೋಷಣೆಯನ್ನು ಮಾಡುವ ಆಧುನಿಕ ಪ್ರಭುಗಳೇ ಆಯಾ ಸಮುದಾಯದವರು ತಮ್ಮ ನಾಯಕರೆಂದು ಒಪ್ಪಿಕೊಳ್ಳುವ ಐತಿಹಾಸಿಕ ಪುರುಷರ ಪ್ರತಿಮೆಗಳನ್ನು ಸ್ಥಾಪಿಸಿ ತಾವು ಆ ಸಮುದಾಯದ ಪರವೆಂಬ ಭ್ರಾಂತಿ ಬಿತ್ತುವ ಕಪಟ ತಂತ್ರವನ್ನು ನಡೆಸುತ್ತವೆ. ಈ ಸಂಚಿನ ಭಾಗವಾಗಿಯೇ ಸಂಗೊಳ್ಳಿ ರಾಯಣ್ಣನನ್ನು ಕೇವಲ ಕುರುಬರ ನಾಯಕನನ್ನಾಗಿ ಈ ಆಧುನಿಕ ದೊರೆಗಳು ಬಿಂಬಿಸುತ್ತಿದ್ದಾರೆ.



ಚಾರ್ವಾಕ

▶ ಶಿವಸುಂದರ್

ಸಂಗೊಳ್ಳಿ ರಾಯಣ್ಣ ಕೇವಲ ಕುರುಬರ ನಾಯಕನಲ್ಲ, 1857ರ ಭಾರತದ ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಾಗುವ ಮೂರು ದಶಕಗಳ ಮುಂಚೆಯೇ ಕರ್ನಾಟಕದ ಕಿತ್ತೂರು ಪ್ರಾಂತ್ಯದಲ್ಲಿ ಕುರುಬ, ಬೇಡ, ಜೈನ, ಲಿಂಗಾಯತ, ಸಿದ್ಧಿ, ಮುಸ್ಲಿಂ, ಪಂಚಮಸಾಲಿ ಸೇರಿದಂತೆ ಆಗಿನ ಉಳಿಗಮಾನ್ಯ ಭೂಮಾಲೀಕ ದೊರೆಗಳ ಶೋಷಣೆಗೆ ಬಲಿಯಾಗಿದ್ದ ಎಲ್ಲರನ್ನೂ ಒಂದು ಮಾಡಿ ಬ್ರಿಟಿಷರೇ ಬೆಚ್ಚುವಂಥಾ ಹೋರಾಟ ಮಾಡಿದ್ದ ಮಹಾನ್ ಜನನಾಯಕ. ರಾಷ್ಟ್ರವೀರ. ಆತನಿಗೆ ಮುಂಚೆ ಇದೇ ಹೋರಾಟದಲ್ಲಿ ಪ್ರಾಣತೆತ್ತ ಟಿಪ್ಪೂ, ಹೈದರಾಲಿ, ಧೋಂಡಿಯಾವಾಘ್‌ರೂ ಸಹ ಆಯಾ ಜಾತಿ ಮತ್ತು ಧರ್ಮದ ನಾಯಕರಲ್ಲ, ಇಡೀ ಶೋಷಿತ ಸಮಾಜದ ನಾಯಕರು.

ಕರ್ನಾಟಕದ ಇತಿಹಾಸವನ್ನು ಜನಪರ ದೃಷ್ಟಿಯಿಂದ ಅತ್ಯಂತ ಶ್ರಮವಹಿಸಿ ಅಧ್ಯಯನ ಮಾಡಿ ಇವರಂತೆಯೇ ಜನರಿಗಾಗಿ ಹೋರಾಡುತ್ತಾ ರಣರಂಗದಲ್ಲೇ ಪ್ರಾಣತೆತ್ತ ಮಹಾನ್ ಮೇಧಾವಿ ಸಾಕೇತ್ ರಾಜನ್‌ರು ತಮ್ಮ "Making History" ಎಂಬ ಉದ್ಗ್ರಂಥದ ಎರಡನೇ ಭಾಗದಲ್ಲಿ ಸಂಗೊಳ್ಳಿ ರಾಯಣ್ಣನ ಹೋರಾಟ ಮತ್ತು ಜೀವನದ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಅವರ ಅಧ್ಯಯನ ಸ್ಪಷ್ಟಪಡಿಸುವಂತೆ ರಾಯಣ್ಣನೊಂದಿಗೆ ಎಲ್ಲ ಜಾತಿಯ ಜನರೂ ಇದ್ದರು. ಅವನ ಹೋರಾಟದ ಅಂತಿಮ ಗಳಿಗೆಯಲ್ಲಿ ಆತನೊಂದಿಗೆ ಬಂಧಿತರಾಗಿದ್ದ ಹನ್ನೆರಡು ಮಂದಿಯಲ್ಲಿ; ಐವರು ಬೇಡ ಜನಾಂಗದವರು, ಇಬ್ಬರು ಲಿಂಗಾಯತರು, ಓರ್ವ ಪಂಚಮಸಾಲಿ, ಓರ್ವ ಮುಸ್ಲಿಂ, ಒಬ್ಬ ಮರಾಠ, ಒಬ್ಬ ನಾರ್ವೇಕರ, ಓರ್ವ ಜೈನ ಸಮುದಾಯಕ್ಕೆ ಸೇರಿದವರಾಗಿದ್ದರು. ಹಾಗೆಯೇ ಜನಪದ ಹಾಡುಗಳಲ್ಲಿ ವ್ಯಕ್ತವಾಗಿರುವಂತೆ ಅವನೊಂದಿಗೆ ಬೋವಿ ಜಾತಿಯವರಲ್ಲದೆ, ಪೋರ್ಚುಗೀಸರು ಮೊಜಾಂಬಿಕ್‌ನಿಂದ ಗೋವಾಗೆ ಅಡಿಯಾಳುಗಳಾಗಿ ತಂದಿದ್ದ ಸಿದ್ಧಿ ಜನಾಂಗದವರೂ ಇದ್ದರು. ಕಿತ್ತೂರಿನ ಪಶ್ಚಿಮ ಭಾಗದಲ್ಲಿ ವಾಸಿಸುತ್ತಿದ್ದ ಈ ಸಿದ್ಧಿಗಳು ರಾಯಣ್ಣನ ಅಂಗರಕ್ಷಕರಾಗಿದ್ದರು. ಗಜಾವೀರಾ ಎಂಬ ಸಿದ್ಧಿಯಂತೂ ರಾಯಣ್ಣನ ಸಾವಿನ ಸುದ್ದಿ ಕೇಳಿ ಆತ್ಮಹತ್ಯೆ ಮಾಡಿಕೊಂಡ.

ಸಾಕೇತ್ ರಾಜನ್‌ರವರು ಸ್ಪಷ್ಟಪಡಿಸುವಂತೆ "ಸಮುದಾಯದ ಎಲ್ಲಾ ವರ್ಗಗಳ ಜನರನ್ನು ರಾಯಣ್ಣ ಸೇರಿಸಿದ್ದರೂ, ಅವರ್‍ಯಾರೂ ಜಮೀನ್ದಾರರಾಗಿರಲಿಲ್ಲ ಎಂಬ ಅಂಶ ಆತನ ಹೋರಾಟವು ಯಾರ ಪರವಾಗಿತ್ತು ಎಂಬುದನ್ನು ಸೂಚಿಸುತ್ತದೆ. ಆದರೆ ರಾಯಣ್ಣನ ಹೋರಾಟ ಕೇವಲ ಭೂರಹಿತರ ಪರವಾಗಿ ಇರಲಿಲ್ಲ, ಆತ ವರ್ಗ, ಜಾತಿ ಭೇದವನ್ನು ಅಳಿಸಲು ಅನ್ನ ದಾಸೋಹ ಪದ್ಧತಿಯನ್ನೂ ಜಾರಿಗೆ ತಂದಿದ್ದ. ಹೀಗೆ ಮಾಡುವ ಮೂಲಕ ಭೂರಹಿತರ ಹೋರಾಟಕ್ಕೆ ಉಳಿಗಮಾನ್ಯ ವ್ಯವಸ್ಥೆಯ ವಿರುದ್ಧದ ತಿರುವನ್ನು ನೀಡಿದ ರಾಯಣ್ಣ, ಈ ಸಂಗ್ರಾಮ ಜಮೀನ್ದಾರಿ ಅಧಿಪತ್ಯದಲ್ಲಿದ್ದಿದ್ದರೆ ಅದರಲ್ಲಿ ಈ ಸಾಧ್ಯತೆಗಳಾಗಲೀ, ಅಂಶಗಳಾಗಲೀ ಅರಳಲು ಅಸಾಧ್ಯವಾಗುತ್ತಿತ್ತು."

ಇದೂ ಸಂಗೊಳ್ಳಿ ರಾಯಣ್ಣನ ಜಾತಿ-ಮತ ಮೀರಿದ ಜನಪರತೆಗೆ ಸಾಕ್ಷಿ. ಆದರೆ ನಮ್ಮ ಆಧುನಿಕ ಪ್ರಭುಗಳು ಅವರನ್ನು ಕೇವಲ ಕುರುಬರ ನಾಯಕನನ್ನಾಗಿ ಮಾಡಲು ಹೊರಟಿದ್ದಾರೆ.

ಆದರೆ ಇದಕ್ಕಿಂತ ಘೋರವಾದದ್ದು ಸಂಗೊಳ್ಳಿ ರಾಯಣ್ಣನ ಪ್ರತಿಮೆ ಅನಾವರಣದ ದಿನ ಈ ಅವಕಾಶವಾದಿ ರಾಜಕಾರಣಿಗಳು ರಾಯಣ್ಣನಿಗೆ ನೀಡಿದ ಗುಣವಿಶೇಷಣಗಳು ಮತ್ತು ಈ ಅಪ್ರತಿಮ ಜನನಾಯಕನನ್ನು ನೆನೆಸಿಕೊಳ್ಳಲು ಈ ದೊರೆಗಳು ಆಯ್ಕೆ ಮಾಡಿಕೊಂಡ ಮಾರ್ಗಗಳು. ಯಡಿಯೂರಪ್ಪನವರು ಪ್ರತಿಮೆ ಅನಾವರಣ ಮಾಡುತ್ತಾ "ಪೊಲೀಸ್ ಇಲಾಖೆಯಲ್ಲಿ ಅಪ್ರತಿಮ ಸೇವೆ ಮಾಡಿದ ಅಧಿಕಾರಿಗಳಿಗೆ ರಾಯಣ್ಣನ ಹೆಸರಲ್ಲಿ ಪ್ರಶಸ್ತಿ ನೀಡುವ ಮೂಲಕ ರಾಣಿ ಕಿತ್ತೂರು ಚೆನ್ನಮ್ಮಳ ಬಂಟನಾದ ರಾಯಣ್ಣನ ತ್ಯಾಗ, ಬಲಿದಾನ, ರಾಜನಿಷ್ಠೆಗಳನ್ನು ಅಳವಡಿಸಿಕೊಳ್ಳುವಂತೆ ಮಾಡಲಾಗುವುದು" ಎಂದು ಹೇಳಿದ್ದಾರೆ. ಇದು 'ಸೈನಿಕ' ಸಂಗೊಳ್ಳಿ ರಾಯಣ್ಣನಲ್ಲಿ 'ದೊರೆ' ಯಡಿಯೂರಪ್ಪನವರು ಮೆಚ್ಚಿಕೊಂಡ ಗುಣ.

ಇದಕ್ಕಿಂತ ಕೀಳಾಗಿ ಒಬ್ಬ ಜನನಾಯಕ, ಸ್ವಾತಂತ್ರ ವೀರನನ್ನು ಅವಮಾನ ಮಾಡಲು ಸಾಧ್ಯವೇ?

▶▶ 16

ನೋ ಕಾಮೆಂಟ್ಸ್

"ಇವೆಲ್ಲಕ್ಕಿಂತಲೂ ಹೆಚ್ಚಾಗಿ ಸ್ವಾವಲಂಬಿಯಾಗಿ ಆತ್ಮಾಭಿಮಾನದಿಂದ ಬದುಕುತ್ತಿದ್ದ ಜನರನ್ನು ನೆರೆಹಾವಳಿ ಅಕ್ಷರಶಃ ಪರಾವಲಂಬಿಯಾಗಿ ಆತ್ಮಾಭಿಮಾನ ಶೂನ್ಯರನ್ನಾಗಿ ಮಾಡಿದೆ. ಸರ್ಕಾರ ಕೂಡಾ ಸಂತ್ರಸ್ತರನ್ನು ದಾನಿಗಳ ಋಣಭಾರದಲ್ಲಿ ಹಾಕಿ ಬೇಡುವವರನ್ನಾಗಿ ಮಾಡಿದೆ. ಊರ ಕಡೆಗೆ ಯಾವುದೋ ಕಾರು ಬರುತ್ತಿರುವುದನ್ನು ಕಂಡಕೂಡಲೇ ಮಕ್ಕಳೆಲ್ಲಾ ಓಡಿಬರುತ್ತವೆ. ತಿನ್ನಲು, ಉಣ್ಣಲು, ಉಡಲು ಏನಾದರೂ ತಂದಿರಬಹುದೇ ಎಂಬ ನಿರೀಕ್ಷೆಯಿಂದ. 'ಅನ್ನ ನೀಡುತ್ತಾ ಬಂದ ಜನರನ್ನು ಈ ನೆರೆ ಮತ್ತು ಸರ್ಕಾರ ಭಿಕ್ಷುಕರನ್ನಾಗಿ ಮಾಡಿದೆ' ಎಂದು ಕೂಡಲಸಂಗಮದಲ್ಲಿ ಭೇಟಿಯಾಗಿದ್ದ ಬಸವ ಜಯಮೃತ್ಯುಂಜಯ ಸ್ವಾಮಿಗಳು ಹೇಳುತ್ತಿದ್ದರು. ನೆರೆ ಸಂತ್ರಸ್ತರನ್ನು ನೋಡಿದಾಗ ಹಾಗೆಯೇ ಅನಿಸುತ್ತದೆ."

- ದಿನೇಶ್ ಅಮೀನ್ ಮಟ್ಟು

"ಸರ್ಕಾರ ನಕ್ಸಲರನ್ನು ಭಯೋತ್ಪಾದಕರೆಂದು ಕರೆಯುತ್ತಿದ್ದರೂ ನಕ್ಸಲರ ಪ್ರಾಬಲ್ಯವಿದ್ದ ತೆಲಂಗಾಣದಲ್ಲಿ ಈಗಲೂ ನಕ್ಸಲರ ಬಗ್ಗೆ ಅಪಾರವಾದ ಸಹಾನುಭೂತಿ ಇದೆಯೆಂಬುದನ್ನು ಆ ಪ್ರದೇಶದಲ್ಲಿ ಟೈಮ್ಸ್ ಆಫ್ ಇಂಡಿಯಾ ಮತ್ತು IMRB ಜಂಟಿಯಾಗಿ ನಡೆಸಿದ ಸರ್ವೆಯಲ್ಲಿ ಸ್ಪಷ್ಟಗೊಂಡಿದೆ. ಸರ್ವೇ ಮಾಡಿದ ಪ್ರದೇಶಗಳಲ್ಲಿ ಶೇ.64ಕ್ಕೂ ಹೆಚ್ಚು ಜನ ನಕ್ಸಲರನ್ನು ದರೋಡೆಕೋರರೆಂತಲೋ, ಭಯೋತ್ಪಾದಕರೆಂದೋ ಭಾವಿಸುವುದಿಲ್ಲ. ಶೇ.64ರಷ್ಟು ಜನ ಸರ್ಕಾರದ ವಿರುದ್ಧ ನಕ್ಸಲರು ಬಂಡೆದ್ದಿರುವ ರೀತಿಯನ್ನು ಸಮರ್ಥಿಸುತ್ತಾರೆ. ನಕ್ಸಲ್ ಎನ್‌ಕೌಂಟರ್ ಬಗ್ಗೆ ಸರ್ಕಾರದ ಹೇಳಿಕೆಗಳನ್ನು ಶೇ.60ರಷ್ಟು ಜನ ಸುತಾರಾಂ ನಂಬುವುದಿಲ್ಲ. ಶೇ.85ರಷ್ಟು ಜನ ನಕ್ಸಲರಿಗೆ ನ್ಯಾಯಬದ್ಧ ಮತ್ತು ಆದರ್ಶ ಗುರಿಗಳಿವೆಯೆಂದು ನಂಬುತ್ತಾರೆ ಮತ್ತು ಶೇ.53ರಷ್ಟು ಜನ ಅವರು ಜನರ ಅಭಿವೃದ್ಧಿಗಾಗಿ ಹೋರಾಡಿದರೆಂದು ಭಾವಿಸುತ್ತಾರೆ ಹಾಗೂ ಶೇ.58ರಷ್ಟು ಜನ ಸರ್ಕಾರಕ್ಕಿಂತ ನಕ್ಸಲರೇ ವಾಸಿ ಎಂದು ಭಾವಿಸುತ್ತಾರೆ."

- ಟೈಮ್ಸ್ ಆಫ್ ಇಂಡಿಯಾ, ಸೆಪ್ಟೆಂಬರ್ 28ರ ಮುಖಪುಟ ವರದಿ

"ಕೇಂದ್ರದ ಗೃಹ ಕಾರ್ಯದರ್ಶಿಯವರು ಮುಂದಿನ 5 ವರ್ಷಗಳಲ್ಲಿ 1,75,000 ಪೊಲೀಸರನ್ನು ನೇಮಿಸುವುದಾಗಿ ಹೇಳಿದ್ದಾರೆ. ಇದು ಉದ್ಯೋಗ ನೀಡುವ ಒಳ್ಳೆಯ ಮಾದರಿ. ಒಟ್ಟು ಜನಸಂಖ್ಯೆಯ ಅರ್ಧದಷ್ಟು ಜನರಿಗೆ ಉಳಿದ ಅರ್ಧದಷ್ಟು ಜನರನ್ನು ಸಾಯಿಸಿಬಿಡಲು ಉದ್ಯೋಗ ನೀಡುವುದು."

- ಅರುಂಧತಿರಾಯ್

"ಯಾವುದೇ ಕಲಾವಿದನ ಕಲೆಯನ್ನು ವಿಮರ್ಶೆಗೊಳಪಡಿಸುವ ಮೊದಲು ಆ ಕಲಾವಿದ ಬದುಕಿದ ಕಾಲ, ಸಾಂಸ್ಕೃತಿಕ ಹಿನ್ನೆಲೆ ಹಾಗೂ ಸಾಮಾಜಿಕ ವಾತಾವರಣವನ್ನು ಗಣನೆಗೆ ತೆಗೆದುಕೊಳ್ಳಬೇಕು."

- ಡಾ. ಪ. ಶೆಟ್ಟರ್

"ಪ್ರಪಂಚದ ಒಟ್ಟಾರೆ ಹಸಿವನ್ನು ನೀಗಿಸಲು ಕೇವಲ ಒಂದು ಟ್ರಿಲಿಯನ್ ಡಾಲರ್ ಸಾಕು. ಆದರೆ ಅದಕ್ಕೆ ಯಾವ ದೇಶದ ಬಳಿಯೂ ದುಡ್ಡಿಲ್ಲ. ಜಗತ್ತಿನಿಂದಲೇ ಹಸಿವನ್ನು ಹೊಡೆದೋಡಿಸುವ ಉದ್ದುದ್ದನೆಯ ಆಶಯವನ್ನು ಘೋಷಿಸುವ ವಿಶ್ವಸಂಸ್ಥೆ ಸಹ ಹಣದ ಕೊರತೆಯ ಬಗ್ಗೆ ಮಾತನಾಡುತ್ತದೆ. ಆದರೆ 2008ರಲ್ಲಿ ದೊಡ್ಡ ಬ್ಯಾಂಕಿಂಗ್ ಉದ್ಯಮಿಗಳು ತಮ್ಮ ಲಾಭದ ದುರಾಸೆಯಿಂದಾಗಿ ಹಣಕಾಸು ಬಿಕ್ಕಟ್ಟನ್ನು ತಂದುಕೊಂಡರು. ಬಡವರ ಹಸಿವನ್ನು ನೀಗಿಸಲು ಹಣವೇ ಇಲ್ಲವೆನ್ನುತ್ತಿದ್ದ ಸರ್ಕಾರಗಳು ಈ ಉದ್ಯಮಿಗಳನ್ನು ರಕ್ಷಿಸಲು 20 ಟ್ರಿಲಿಯನ್ ಡಾಲರ್ ಕೊಟ್ಟಿದ್ದನ್ನು ಏನೆಂದು ಅರ್ಥಮಾಡಿಕೊಳ್ಳಬೇಕು?"

- ದೇವಿಂದರ್ ಶರ್ಮ, ಕೃಷಿ ತಜ್ಞ

"ನಾನು ಒಮ್ಮೆ ಪೇಜಾವರ ಸ್ವಾಮಿಗಳೊಡನೆ ಮಾತನಾಡುವಾಗ ಅವರು ನೀವು ಹಿಂದೂ ಆಗಿ ನನ್ನನ್ನು ಏಕೆ ದ್ವೇಷಿಸುವಿರಿ ಎಂದು ಕೇಳಿದರು. ಅದಕ್ಕೆ ನಾನು ನಿಮ್ಮ ಬಗ್ಗೆ ನನಗೆ ವ್ಯಕ್ತಿಗತವಾಗಿ ಏನೂ ಕೆಟ್ಟ ಭಾವನೆ ಇಲ್ಲ ಸ್ವಾಮಿಗಳೇ..ಆದರೆ ನಾನು ಎಲ್ಲಾ ಮನುಷ್ಯತ್ವ ವಿರೋಧಿಗಳನ್ನು ದ್ವೇಷಿಸುತ್ತೇನೆ ಎಂದು ಹೇಳಿದೆ. ಅವರು ಮುಂದುವರೆದು ಇಂದು ನೋಡಿ ಈ ದೇಶಕ್ಕೆ ಎಂಥಾ ಗಂಡಾಂತರ ಕಾದಿದೆ. ಮುಸ್ಲಿಮರ ಬಳಿ AK-47, AK-56 ಎಲ್ಲಾ ಇದೆ ಎಂದರು.. ಅದಕ್ಕೆ ನಾನು ಬಿಡಿ ಸ್ವಾಮೀಜಿ ನಿಮ್ಮ ಮೆದಿಳಿನ ಮುಂದೆ AK-47, AK-56 ಅವೆಲ್ಲಾ ಏನೂ ಕೆಲಸಕ್ಕೆ ಬರಲ್ಲ ಅಂಥಾ ಹೇಳಿದೆ.?

- ಡಾ. ಸಿ.ಎಸ್. ದ್ವಾರಕಾನಾಥ್


ನಂಬಿದ್ರೆನಂಬಿ ಬಿಟ್ರೆಬಿಡಿ

"ಅಪರಾಧ ಕೃತ್ಯ ಎಸಗಿ ನಗರದ ನೆಮ್ಮದಿ ಹಾಳು ಮಾಡಲು ಯತ್ನಿಸುವವರಿಗೆ ಉಳಿಗಾಲವಿಲ್ಲ. ಬೆಂಗಳೂರಿನ ಜನರು ಯಾವುದೇ ಕಾರಣಕ್ಕೂ ಭಯ ಬೀಳುವ ಅಗತ್ಯವಿಲ್ಲ."

- ಶಂಕರ್ ಬಿದರಿ

ಟ್ಟ ನಾಗಾಗಳ ಟ್ಟ ಸೌಂದರ್ಯದ ಹಳ್ಳಿ ೊನೊಮಾ

ಣಿಪುರ ರಾಜ್ಯಕ್ಕೆ ಬರುವ ಮುನ್ನ ಬಾಲಿವುಡ್ ಮು ಮತ್ತು ಹಿಂದಿ ಟಿವಿ ಚಾನೆಲ್‌ಗಳು ಇಲ್ಲಿನ ನತೆಯ ಮೇಲೆ ತಮ್ಮ ಪ್ರಭಾವವನ್ನು ಬೀರುವ ಅವರನ್ನು ಭಾರತದ 'ಮುಖ್ಯವಾಹಿನಿ'ಗೆ ಕರೆ ದೆ ಎಂದು ಭಾವಿಸಿದ್ದೆ, ಮಾತ್ರವಲ್ಲ ಬಾಲಿವುಡ್ ತ್ಯ ಉದ್ಯಮ ಮಣಿಪುರದಂತಹ ರಾಜ್ಯದಲ್ಲಿನ ್ರೋದ್ಯಮವನ್ನೇ ನುಚ್ಚುನೂರಾಗಿಸುತ್ತದೆ ಎಂದೂ . ಆದರೆ ಇಲ್ಲಿಗೆ ಬಂದ ಮೇಲೆ ಇಲ್ಲಿನ ವಾಸ್ತವವೇ ದು ಗೊತ್ತಾಯಿತು.



ಕೊನೊಮಾ ಗ್ರಾಮದಲ್ಲಿ....

ಮೊದಲನೆಯದಾಗಿ, ಮಣಿಪುರದಂತಹ ಪುಟ್ಟ ರಾಜ್ಯದ ಪುಟ್ಟ ಚಿತ್ರೋದ್ಯಮದ ಮೇಲೆ ಪ್ರಭಾವಿ ಬಾಲಿವುಡ್ ಬೀರಲಿರುವ ಪರಿಣಾಮವನ್ನು ಅರಿತು ಇಲ್ಲಿನ ಸರ್ಕಾರ ಹಿಂದಿ ಸಿನಿಮಾಗಳ ಮೇಲೆ ನಿಷೇಧವನ್ನು ಹೇರಿದೆ. ಅಂದರೆ, ಇಲ್ಲಿ ಹಿಂದಿ ಚಿತ್ರಗಳು ಬಿಡುಗಡೆ ಆಗುವುದೇ ಇಲ್ಲ. ಆದರೇನಂತೆ, ಖಂಡಿತವಾಗಿಯೂ ಇಲ್ಲಿನ ಜನ ಹಿಂದಿ ಸಿನಿಮಾಗಳ ಸೀಡಿಗಳನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಕೊಂಡು ನೋಡುತ್ತಿರಬಹುದು ಎಂದು ಭಾವಿಸಿದ್ದೆ. ಆದರೆ ನನ್ನ ಈ ಅನಿಸಿಕೆಯೂ ತಪ್ಪಾಗಿತ್ತು, ಏಕೆಂದರೆ ಇಲ್ಲಿನ ಕೆಲವರು 'ಥ್ರೀ ಈಡೆಯಟ್ಸ್' ತರಹದ ಹಿಟ್ ಹಿಂದಿ ಸಿನಿಮಾಗಳ ಸೀಡಿಗಳನ್ನು ಬ್ಲಾಕ್ ಮಾರ್ಕೆಟ್ ನಲ್ಲಿ ಕೊಂಡು ನೋಡುತ್ತಾರಾದರೂ ಅವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿನ ಜನ ದಕ್ಷಿಣ ಕೊರಿಯಾ ದೇಶದ ಸಿನಿಮಾಗಳ ಸೀಡಿಗಳನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಕೊಂಡು ವೀಕ್ಷಿಸುತ್ತಾರೆ. ಇಂಫಾಲಿನಲ್ಲಿ ನನ್ನ ಮಾರ್ಗದರ್ಶಿಯಾಗಿದ್ದ ಮಣಿಪುರದ ಯುವತಿ ಅಂಜುಲಿಕ ಹೇಳಿದಂತೆ "ಇಲ್ಲಿ ಕೊರಿಯಾದ ಸಿನಿಮಾಗಳು ಮಾತ್ರವಲ್ಲ, ಆ ದೇಶದ ಟಿವಿ ಚಾನೆಲ್‌ಗಳು ಪ್ರಸಾರ ಮಾಡುವ ಮೆಗಾ ಧಾರಾವಾಹಿಗಳೂ ಜನಪ್ರಿಯವಾಗಿವೆ. ಎಷ್ಟರಮಟ್ಟಿಗೆ ಅಂದರೆ ನೂರಾರು ಗಂಟೆಗಳಷ್ಟು ಸುದೀರ್ಘವಾಗಿರುವ ಆ ಮೆಗಾಧಾರಾವಾಹಿಗಳನ್ನು ಇಲ್ಲಿನ ಜನ ದಿನಗಟ್ಟಲೆ ನೋಡುತ್ತಾರೆ. ಅವುಗಳು ಎಂತಹ ಪರಿಣಾಮ ಬೀರಿವೆ ಎಂದರೆ ಇಲ್ಲಿನ ಯುವ ಜನತೆ ಇವತ್ತು ಕೊರಿಯಾ ಭಾಷೆಯಲ್ಲಿ 'ಗುಡ್ ಮಾರ್ನಿಂಗ್', 'ಐ ಲವ್ ಯು'ದಂತಹ ಪದಪುಂಜಗಳನ್ನು ತಮ್ಮ ಸ್ನೇಹಿತರೊಂದಿಗೆ ಸುಲಭವಾಗಿ ಪ್ರಯೋಗಿಸುತ್ತಾರೆ."

ಇದೆಲ್ಲ ನನಗೆ ವಿಚಿತ್ರವಾಗಿ ಕಂಡರೆ ನನ್ನ ನಾಗಾ ಸ್ನೇಹಿತೆ ಗ್ರೀಸ್ ಜಾಜೋಳಿಗೆ ಇದೆಲ್ಲ ಸಹಜವಾಗಿತ್ತು. ಆಕೆ ಹೇಳಿದಂತೆ "ಹಿಂದಿ ಸಿನಿಮಾಗಳ ನಟ ನಟಿಯರು ನಮ್ಮಂತೆ ಕಾಣಿಸುವುದಿಲ್ಲ, ಅವರ ಹಾಸ್ಯ, ಡೈಲಾಗ್, ಸೆಂಟಿಮೆಂಟ್‌ಗಳು ನಮಗೆ ಅರ್ಥವಾಗುವುದಿಲ್ಲ. ಅವರುಗಳಿಗೆ ಹೋಲಿಸಿ ನೋಡಿದರೆ ಕೊರಿಯಾದ ನಟನಟಿಯರು ನಮ್ಮಂತೆ ಕಾಣಿಸುತ್ತಾರೆ, ನಮ್ಮಂತೆ ವರ್ತಿಸುತ್ತಾರೆ. ಅವರ ಸಿನಿಮಾಗಳು ನಮಗೆ ಹತ್ತಿರವಾಗಿವೆ. ಅವರ ಕಥಾವಸ್ತುಗಳೊಂದಿಗೆ ನಾವು ಸ್ಪಂದಿಸುತ್ತೇವೆ.??

ಇದೆಲ್ಲದರ ಪರಿಣಾಮವೆಂಬಂತೆ ಈ ಪ್ರದೇಶಗಳ ಯುವಜನತೆ ದಕ್ಷಿಣ ಕೊರಿಯಾದ ನಟನಟಿಯರ ಹೇರ್ ಸ್ಟೈಲ್, ಫ್ಯಾಶನ್‌ಗಳನ್ನು ಅನುಸರಿಸುತ್ತಾರೆ. ಅಲ್ಲಿನ ನಟರ ವೇಷಭೂಷಣಗಳನ್ನೇ ತಮ್ಮ ಬದುಕಿನ ಅಂಗವಾಗಿಸಿಕೊಳ್ಳುತ್ತಿದ್ದಾರೆ. ನಾನು ಮತ್ತು ಗ್ರೇಸ್ ಹಲವು ನಗರಗಳಲ್ಲಿ ಸುತ್ತಾಡುತ್ತಿದ್ದಾಗ ಇಲ್ಲಿನ ಹುಡುಗರು ಮತ್ತು ಹುಡುಗಿಯರು ಅನುಸರಿಸುತ್ತಿರುವ ಸ್ಟೈಲ್‌ಗಳನ್ನು, ಕೈಗಳಿಗೆ ತೊಟ್ಟಿದ್ದ ಆಭರಣಗಳನ್ನು, ಅವರು ಧರಿಸಿದ್ದ ಜೀನ್ಸ್‌ಗಳ ರೂಪಗಳನ್ನು ತೋರಿಸುತ್ತಾ ಅವೆಲ್ಲ ಬಂದಿರುವುದು ಕೊರಿಯಾ ಸಿನಿಮಾಗಳಿಂದ ಎಂದು ಗ್ರೇಸ್ ವಿವರಿಸಿದಳು.

ಅಂದಹಾಗೆ, ಅಸ್ಸಾಮ್ ಮತ್ತು ಅರುಣಾಚಲ ಪ್ರದೇಶದಂತಹ ರಾಜ್ಯಗಳಲ್ಲಿ ಮಾತ್ರ ಹಿಂದಿ ಸಿನಿಮಾಗಳು ಮತ್ತು ಹಿಂದಿಗೆ ಡಬ್ ಆಗಿರುವ ತಮಿಳು ಮತ್ತು ತೆಲುಗು ಚಿತ್ರಗಳು ಜನ ಮನ್ನಣೆ ಪಡೆದಿವೆ. ಎಷ್ಟರಮಟ್ಟಿಗೆ ಅಂದರೆ ಇಲ್ಲಿನ ಜನರಿಗೆ ತೆಲುಗು ಚಿತ್ರರಂಗದ ಸೂಪರ್ ಸ್ಟಾರ್ ಚಿರಂಜೀವಿ ಪರಿಚಿತನಲ್ಲದೆ ಇದೀಗ ಈ ರಾಜ್ಯಗಳಲ್ಲಿನ ಜನರೂ ತಮಿಳುನಾಡಿನ ಜನರಷ್ಟೇ ಕಾತರದಿಂದ ರಜನೀಕಾಂತ್ ನಟಿಸಿರುವ 'ಎಂದಿರನ್' ಸಿನಿಮಾದ ಬಿಡುಗಡೆಗಾಗಿ ಕಾದಿದ್ದಾರೆ!

ಆದರೆ ಈ ಎರಡು ರಾಜ್ಯಗಳನ್ನು ಹೊರತುಪಡಿಸಿದರೆ ಇತರೆ ಕಡೆಗಳಲ್ಲಿ ಕೊರಿಯಾ ಸಿನಿಮಾಗಳದ್ದೇ ದರ್ಬಾರು. ಇದನ್ನು ಕೊರಿಯಾ ಚಿತ್ರೋದ್ಯಮ ಅರ್ಥಮಾಡಿಕೊಂಡಿದೆ. ಆದ್ದರಿಂದಲೇ ಇತ್ತೀಚೆಗೆ ಕೊರಿಯಾ ಸಿನಿಮಾ ರಂಗದ ಮುಖ್ಯ ತಾರೆಗಳು ಇಲ್ಲಿನ ರಾಜ್ಯಗಳಿಗೆ ಭೇಟಿ ನೀಡುತ್ತಿದ್ದಾರೆ, ಆ ಮೂಲಕ ತಮ್ಮ ಚಿತ್ರಗಳಿಗೆ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಮಣಿಪುರದಲ್ಲಿನ ಚಿತ್ರೋದ್ಯಮ ಕುರಿತಂತೆ ಮತ್ತೊಂದು ವಿಸ್ಮಯಕಾರಿ ಸಂಗತಿಯನ್ನು ಹೇಳಲೇಬೇಕು. ನಿಮಗೆ ಗೊತ್ತಿರಬಹುದು: ಇವತ್ತು ಒಂದು ಮಾಮೂಲಿ ಕನ್ನಡ ಸಿನಿಮಾದ ಬಡ್ಜೆಟ್ ಕನಿಷ್ಠವೆಂದರೂ ಒಂದೂವರೆ ಕೋಟಿ ರೂಪಾಯಿಗಳು. ಆದರೆ ಮಣಿಪುರದಲ್ಲಿ ಇತ್ತೀಚೆಗೆ ನಿರ್ಮಿಸಲಾಗುತ್ತಿರುವ ಸಿನಿಮಾಗಳ ಬಡ್ಜೆಟ್ ಕೇವಲ ಆರು ಅಥವಾ ಏಳು ಲಕ್ಷ ರೂಪಾಯಿಗಳು! ನಾನು ತಮಾಷೆ ಮಾಡುತ್ತಿಲ್ಲ.

ನಾನು ಮಣಿಪುರದಲ್ಲಿದ್ದಾಗ ರಾಜಧಾನಿ ಇಂಫಾಲ್‌ನಲ್ಲಿ ರಾಜ್ಯ ಚಲನಚಿತ್ರೋತ್ಸವ ನಡೆಯುತ್ತಿತ್ತು, ಆ ರಾಜ್ಯದಲ್ಲಿ ಎಂತಹ ಚಿತ್ರಗಳು ನಿರ್ಮಾಣವಾಗುತ್ತಿವೆ ಎಂದು ಅರಿತುಕೊಳ್ಳಲು ನಾನು ಚಿತ್ರೋತ್ಸವ ನಡೆಯುತ್ತಿದ್ದಲ್ಲಿಗೆ ಹೋದೆ. ಚಿತ್ರೋತ್ಸವದ ಉಸ್ತುವಾರಿಯನ್ನು ವಹಿಸಿಕೊಂಡಿದ್ದ ಲಲಿತ್ ಕುಮಾರ್ ಅವರನ್ನು ಭೇಟಿ ಆದಾಗ ಅವರು ಕಡಿಮೆ ವೆಚ್ಚದಲ್ಲಿ ಮಣಿಪುರಿ ಚಿತ್ರಗಳ ನಿರ್ಮಾಣದ ಒಗಟನ್ನು ತೆರೆದಿಟ್ಟರು.

ಲಲಿತ್ ಕುಮಾರ್ ಅವರು "ಮಣಿಪುರಿ ಚಿತ್ರೋದ್ಯಮ ಚಿಕ್ಕದ್ದು. ನಮ್ಮ ಭಾಷೆಯನ್ನು ಮಾತನಾಡುವ, ಅದನ್ನು ಅರ್ಥಮಾಡಿಕೊಳ್ಳುವ ಜನರ ಸಂಖ್ಯೆ ಕೂಡ ಚಿಕ್ಕದು. ಆದ್ದರಿಂದ ನಮ್ಮ ಚಿತ್ರ ನಿರ್ಮಾಪಕರು ಇತರರಂತೆ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿ ಚಿತ್ರಗಳನ್ನು ನಿರ್ಮಿಸಿದರೆ ಲಾಭವಿರಲಿ ಅಸಲು ಕೂಡ ಬರುವುದು ಕಷ್ಟ. ಇಂತಹ ಪರಿಸ್ಥಿತಿ ಎದುರಾಗಿದ್ದರಿಂದಲೇ 2002ರಲ್ಲೇ ನಮ್ಮ ಚಿತ್ರೋದ್ಯಮದವರು ಮಾಮೂಲಿ ಫಿಲ್ಮ್ ರೀಲ್ ಬದಲಾಗಿ ಡಿಜಿಟಲ್ ವೀಡಿಯೋದ ಮೊರೆ ಹೋದದ್ದು" ಎಂದು ಹೇಳಿದರು. ಅಂದು ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ 'ನೊಬಾಪ್' ಎಂಬ ಚಿಕ್ಕದಾದ, ಚೊಕ್ಕದಾಗ ಸಿನಿಮಾವೊಂದನ್ನು ನೋಡಿದೆ. ಮಣಿಪುರದ ಇಬ್ಬರು ಜನಪ್ರಿಯ ಹೀರೋಗಳು, ಅಪಾರ ಬೇಡಿಕೆ ಪಡೆದಿರುವ ಹಿರೋಯಿನ್ ಮತ್ತು ಇತರರು ನಟಿಸಿದ್ದ ಚಿತ್ರವಾಗಿದ್ದ 'ನೊಬಾಪ್' ಕೂಡ ಡಿಜಿಟಲ್ ವೀಡಿಯೋನಲ್ಲಿ ನಿರ್ಮಿಸಲಾಗಿತ್ತು. (ಚಿತ್ರೋತ್ಸವ ಮುಗಿದನಂತರ ಈ ಚಿತ್ರ ಅತ್ಯುತ್ತಮ ಚಿತ್ರ ಎಂದು ರಾಜ್ಯ ಪ್ರಶಸ್ತಿಯನ್ನು ಪಡೆಯಿತು.)

ಚಿತ್ರ ಮುಗಿದನಂತರ ಅದರ ನಿರ್ಮಾಪಕ ಸುರೀಶ್ ಹಿಡಾಂಗ್ ಅವರನ್ನು ಮಾತನಾಡಿಸಿ "ಈ ಚಿತ್ರವನ್ನು ಎಲ್ಲಿ ಪ್ರದರ್ಶಿಸುತ್ತೀರಿ, ನಿಮಗೆ ಹೇಗೆ ಹಣ ಬರುತ್ತದೆ?" ಎಂದೆಲ್ಲ ಕೇಳಿದೆ. "ನೋಡಿ ನಮ್ಮಲ್ಲಿ ದೊಡ್ಡ ದೊಡ್ಡ ಥಿಯೇಟರ್‌ಗಳಿಲ್ಲ. ಆದ್ದರಿಂದ ನಾವು ನಮ್ಮ ಸಿನಿಮಾದ ಸೀಡಿ ಮತ್ತು ಪ್ರೊಜೆಕ್ಟರ್ ಅನ್ನು ತೆಗೆದುಕೊಂಡು ಚಿಕ್ಕಪುಟ್ಟ ಊರುಗಳಿಗೂ ಹೋಗುತ್ತೇವೆ, ಅಲ್ಲಿನ ಸಮುದಾಯ ಭವನಗಳಲ್ಲಿ ಸಿನಿಮಾವನ್ನು ಪ್ರದರ್ಶಿಸುತ್ತೇವೆ. ಜನ ಟಿಕೆಟ್ ಕೊಂಡು ಚಿತ್ರ ನೋಡುತ್ತಾರೆ. ಹೀಗೆ ನಮ್ಮ ಚಿಕ್ಕ ಬಡ್ಜೆಟ್ಟಿನ ಚಿತ್ರಕ್ಕೆ ಚಿಕ್ಕ ಪ್ರಮಾಣದಲ್ಲೇ ಹಣ ಹಿಂದೆ ಬರುತ್ತದೆ" ಎಂದು ವಿವರಿಸಿದರು.



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

" 'ನೊಬಾಪ್' ಸ್ವಲ್ಪ ಆರ್ಟ್ ಸಿನಿಮಾದಂತಿದೆ. ನೀವು ನಿರ್ಮಿಸಿದ ಮೊದಲನೆ ಸಿನಿಮಾ ಹೇಗಿತ್ತು?"

"ಅದು ಪಕ್ಕಾ ಮಸಾಲಾ ಚಿತ್ರವಾಗಿತ್ತು. ಅದರಲ್ಲಿ ಐದು ಹಾಡುಗಳು, ನಾಲ್ಕು ಫೈಟ್‌ಗಳು, ಹೀರೋ ಮತ್ತು ಹೀರೋಯಿನ್ ನಡುವೆ ಲವ್.. ಎಲ್ಲವೂ ಇತ್ತು. ಆ ಚಿತ್ರವನ್ನೂ ನಾನು ಐದು ಲಕ್ಷ ರೂಪಾಯಿಗಳಲ್ಲಿ ನಿರ್ಮಿಸಿದ್ದೆ. ಅದು ಸೂಪರ್ ಹಿಟ್ ಆಗಿ ನನಗೆ 25 ಲಕ್ಷದಷ್ಟು ಲಾಭ ತಂದಿತ್ತು" ಎಂದರು ಹಿಡಾಂಗ್ ಜೋರಾಗಿ ನಗುತ್ತಾ.


ಇಷ್ಟು ಕಡಿಮೆ ವೆಚ್ಚದಲ್ಲಿ ಸಿನಿಮಾಗಳು ನಿರ್ಮಾಣವಾಗುತ್ತಿರುವುದರಿಂದ ಇತ್ತೀಚೆಗೆ ಇಲ್ಲಿ ತಯಾರಾದ ಸಿನಿಮಾಗಳ ಸಂಖ್ಯೆ ಹೆಚ್ಚಾಗಿದೆ (ಕಳೆದ ವರ್ಷ 60ಕ್ಕಿಂತಲೂ ಹೆಚ್ಚು ಮಣಿಪುರಿ ಸಿನಿಮಾಗಳು ಬಿಡುಗಡೆಗೊಂಡಿದ್ದವು). ಅದಕ್ಕಿಂತ ಮುಖ್ಯವಾಗಿ ಇಲ್ಲಿನ ಕಥೆಗಾರರು ಮತ್ತು ನಿರ್ದೇಶಕರು ಹೊಸ ವಸ್ತುಗಳನ್ನು ಆಯ್ಕೆಮಾಡಿಕೊಳ್ಳುವ ಧೈರ್ಯವನ್ನು ಪ್ರದರ್ಶಿಸುತ್ತಿದ್ದಾರೆ. ಅಷ್ಟರಮಟ್ಟಿಗೆ ಇಲ್ಲಿನ ಚಿತ್ರೋದ್ಯಮ ಹೊಸ ಚಿಂತನೆ ಮತ್ತು ಕ್ರಿಯಾಶೀಲತೆಯಿಂದ ಗಟ್ಟಿಗೊಳ್ಳುತ್ತಿದೆ.

ಈ ವರ್ಷದಿಂದ ಕೇಂದ್ರ ಸರ್ಕಾರವು ಸಿನಿಮಾ ಪ್ರಶಸ್ತಿಗಳಿಗೆ ಡಿಜಿಟಲ್ ಸಿನಿಮಾಗಳನ್ನೂ ಪರಿಗಣಿಸಲಾಗುವುದು ಎಂದು ಹೇಳಿರುವುದೂ ಗಮನಾರ್ಹ. ಅಂದಹಾಗೆ, ಫಿಲ್ಮಂ ರೀಲ್‌ನಲ್ಲಿ ತಯಾರಾದ ಸಿನಿಮಾಗಿಂತ ಡಿಜಿಟಲ್ ಸಿನಿಮಾಗಳೇನೂ ಕಳಪೆ ಆಗಿರುವುದಿಲ್ಲ, ಏಕೆಂದರೆ ಇತ್ತೀಚೆಗೆ ಡಿಜಿಟಲ್ ತಂತ್ರಜ್ಞಾನದಲ್ಲಿ ಮಹತ್ತರ ಬೆಳವಣಿಗೆಳು ಕಂಡುಬಂದಿದೆ.


ಇದನ್ನೆಲ್ಲ ಇಷ್ಟು ದೀರ್ಘವಾಗಿ ಹೇಳಿದ್ದಕ್ಕೆ ಕಾರಣ ಇದೆ. ಅದೇನೆಂದರೆ ನಮ್ಮ ಕನ್ನಡ ಚಿತ್ರೋದ್ಯಮ ಕೂಡ ಡಿಜಿಟಲ್ ಸಿನಿಮಾಗಳತ್ತ ಗಮನ ಹರಿಸಿ ಕಡಿಮೆ ವೆಚ್ಚದಲ್ಲಿ ಉತ್ತಮ ಸಿನಿಮಾಗಳನ್ನು ಮಾಡುವಂತಾಗಲಿ ಎಂಬ ನನ್ನ ಆಶೆ.

ನಾಗಾಲ್ಯಾಂಡ್ ರಾಜ್ಯದಲ್ಲಿರುವ ಕೊನೊಮಾ ಎಷ್ಟು ಸುಂದರವೋ ಅಷ್ಟೇ ರಕ್ತಸಿಕ್ತ ಇತಿಹಾಸವನ್ನು ಹೊಂದಿರುವ ಹಳ್ಳಿ. ಖೊಹಿಮಾ ನಗರದಿಂದ ಕೇವಲ 17 ಕಿ.ಮೀ ದೂರದಲ್ಲಿದ್ದರೂ ಕೊನೊಮಾ ತಲುಪಲು ದಟ್ಟ ಅರಣ್ಯಕಿತ್ತು ಹೋಗಿರುವ ರಸ್ತೆ ಭಯ ಹುಟ್ಟಿಸುವ ಸೇತುವೆಗಳನ್ನು ದಾಟಿಹೋಗಬೇಕು. ಸೆಪ್ಟೆಂಬರ್ ತಿಂಗಳಲ್ಲೂ ಮಳೆ ಬೀಳುತ್ತಿರುವರಿಂದ ಹಲವೆಡೆ ರಸ್ತೆಗೆ ಅಡ್ಡಲಾಗಿ ತೊರೆಯಂತೆ ಮಳೆ ನೀರು ಹರಿಯುತ್ತಿದ್ದರೆ ಇನ್ನೂ ಕೆಲಕಡೆ ಕಲ್ಲು ಬಂಡೆಗಳು ಉದುರಿ ಬಿದ್ದಿದ್ದವು.

▶▶ 5



ಯಡ್ಡಿಯ ಡೀಲು ಬ್ರೋಕರ್ ಲೆಹರ್‌ಸಿಂಗ್



ರಾಜ್ಯ ಬಿಜೆಪಿಯ ಅನೇಕ ನಾಯಕರಾಗಲಿ ಸಣ್ಣಪುಟ್ಟ ಕಾರ್ಯಕರ್ತರಾಗಲಿ ಈ ಹೆಸರನ್ನು ಕೇಳಿರಲಿಕ್ಕಿಲ್ಲ, ಬಿಜೆಪಿಯ ರಾಷ್ಟ್ರಮಟ್ಟದ ಕೆಲವೇ ಕೆಲವು ನಾಯಕರ ಹೊರತಾಗಿ ಬಹುತೇಕರು ಈತನ ಮುಖ ಕೂಡ ನೋಡಿರಲಿಕ್ಕಿಲ್ಲ, ಆದರೆ ಈ ಲೆಹರ್‌ಸಿಂಗ್ ರಾಜ್ಯದ ಹಣೆಬರಹವನ್ನೇ ಬದಲಾಯಿಸುವಷ್ಟು ಶಕ್ತಿಶಾಲಿ ಮತ್ತು ಪ್ರಭಾವಿ. ಅಂಥಾ ಜಿಂದಾಲ್ ಕಂಪೆನಿಯನ್ನೇ ಧಿಕ್ಕರಿಸಿ ಲಕ್ಷ್ಮಿ ಮಿತ್ತಲ್‌ನಂಥ ಕಬ್ಬಿಣದ ಚಕ್ರಾಧಿಪತಿಗೆ ಬಳ್ಳಾರಿಯನ್ನು ಬರೆದುಕೊಡುವಂತೆ ಮುಖ್ಯಮಂತ್ರಿ ಯಡ್ಡಿಯನ್ನು ಪಳಗಿಸಿದವನು ಇದೇ ಲೆಹರ್‌ಸಿಂಗ್.

ಕಲ್ಲಿದ್ದಲು ಖರೀದಿ ಕರ್ಮಕಾಂಡಕ್ಕೆ ಕಾರಣನಾಗಿ ರಾಯಚೂರು ಥರ್ಮಲ್ ವಿದ್ಯುತ್ ಕೇಂದ್ರವನ್ನೇ ಕುಲಗೆಡಿಸಿ ಇವತ್ತು ಅರ್ಧ ಕರ್ನಾಟಕವನ್ನು ಕತ್ತಲಲ್ಲಿ ಮುಳುಗಿಸಿದವನು ಇದೇ ಲೆಹರ್‌ಸಿಂಗ್!

ಯಾವುದೇ ಐಟಿ ಕಂಪೆನಿಗಾಗಿ ರೈತರ ನೂರಾರು ಎಕರೆ ಬಲಿಯಾಯಿತೆಂದರೆ, ನಕಲಿ ಕೈಗಾರಿಕೆಯೊಂದರ ಹೆಸರಲ್ಲಿ ಕೆಐಎಡಿಬಿ ರೈತರನ್ನು ಬೀದಿಪಾಲು ಮಾಡಿತೆಂದರೆ, ನಂದಗುಡಿಯ ಎಸ್‌ಇಜೆಡ್‌ಗಾಗಿ ರೈತರ ಸಾವಿರಾರು ಎಕರೆ ಕಿತ್ತುಕೊಳ್ಳಲು ಸರ್ಕಾರ ನೋಟೀಸು ಹೊರಡಿಸಿತೆಂದರೆ, ಮಂತ್ರಿ ಟೌನ್‌ಶಿಪ್ಪಿಗಾಗಿ ಪಾಲಿಕೆ ಆಸ್ತಿ ಕಬಳಿಸಲ್ಪಟ್ಟರೆ, ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟನಲ್ಲಿ ಇಂಟರ್‌ನ್ಯಾಷನಲ್ ಮಟ್ಟದ ಕಂಪೆನಿಗಳ ಡೀಲು ಕುದುರುತ್ತದೆಯೆಂದರೆ–

ಅಲ್ಲಿ ಲೆಹರ್‌ಸಿಂಗ್ ಎಂಬ ಹೆಸರೊಂದು ಕೇಳಿ ಬರಲೇಬೇಕು. ಯಾರು ಈ ಲೆಹರ್‌ಸಿಂಗ್?

ಹಿಂದೆಲ್ಲಾ ಮುಖ್ಯಮಂತ್ರಿಗಳಾಗಿದ್ದವರ ಹಿಂದೆ ಈ ಥರದ ಡೀಲರ್ ಅಥವಾ ಡೀಲು ಬ್ರೋಕರ್ ಇದ್ದರೋ ಇಲ್ಲವೋ ಗೊತ್ತಿಲ್ಲ, ಆದರೆ ಯಡ್ಡಿ ಮುಖ್ಯಮಂತ್ರಿಯಾದ ಮೇಲೆ ಲೆಹರ್‌ಸಿಂಗ್ ಎಂಬ ಡೀಲು ಬ್ರೋಕರ್ ಓರ್ವ ಸದ್ದಿಲ್ಲದೇ ಅವತರಿಸಿದ್ದಾನೆ. ಕೆಐಎಡಿಬಿ ರೈತರಿಂದ ವಶಪಡಿಸಿಕೊಂಡ ನೂರಾರು ಎಕರೆ ಭೂಮಿಯನ್ನು ಕ್ಷಣ ಮಾತ್ರದಲ್ಲಿ ಈತ ಡೀನೋಟಿಫಿಕೇಷನ್ ಮಾಡಿಸಬಲ್ಲ; ಬಿಡಿಎ ವಶಪಡಿಸಿಕೊಂಡ ತನ್ನ ಆಸ್ತಿಯನ್ನು ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ನೆಲಗಳ್ಳರಿಗೆ ಬಿಡಿಸಿಕೊಡಬಲ್ಲ ದೇಶಪಾಂಡೆಯಂಥ ಕಾಂಗ್ರೆಸ್ ಕುಬೇರನಿಂದ ಹಿಡಿದು ಕರಂದ್ಲಾಜೆ, ಯಡ್ಡಿ ಮಗಳು ಅರುಣಾ, ಉಮಾ ಕೂಡಿಟ್ಟ ಕಪ್ಪು ಹಣವನ್ನು ಜೋಪಾನ ಮಾಡಬಲ್ಲ.

ಯಾವುದೇ ಅಧಿಕಾರಿಯ ಟ್ರಾನ್ಸ್‌ಫರ್, ಯಾವುದೇ ಕಂಪೆನಿಗೆ ಕಾಂಟ್ರಾಕ್ಟ್, ಏನೇ ಪ್ರಾಜೆಕ್ಟಿಗೆ ಅಪ್ರೂವಲ್ ಇತ್ಯಾದಿ ಏನೇ ಡೀಲುಗಳಾಗಬೇಕೆಂದರೂ ಅದನ್ನು ಈತನಿಗೊಪ್ಪಿಸಿಬಿಟ್ಟರೆ ಆ ಬ್ರಹ್ಮ ಬಂದರೂ ಅದನ್ನು ತಡೆಗಟ್ಟಲಾರದಷ್ಟು ನಿಸ್ಸೀಮ ಈ ಲೆಹರ್‌ಸಿಂಗ್.

ಇಂಥ ತಾಕತ್ತನ್ನು ಕಂಡೇ ಈತನನ್ನು ರಾಜ್ಯ ಬಿಜೆಪಿಯ ಖಜಾಂಚಿಯನ್ನಾಗಿ ನೇಮಿಸಿದ್ದಾರೆ ಮುಖ್ಯಮಂತ್ರಿ ಯಡ್ಡಿ. ಸಾಲದೆಂಬಂತೆ ಈತನನ್ನು ಇತ್ತೀಚೆಗಷ್ಟೇ ಎಮ್ಮೆಲ್ಸಿಯನ್ನಾಗಿಯೂ ಮಾಡಿದ್ದಾರೆ. ಬಹುಶಃ ಮುಂದೆಂದಾದರೂ ಮತ್ತೆ ಯಡ್ಡಿ ಸಂಪುಟ ಪುನರಾಚನೆಗೊಂಡಿತೆಂದರೆ ಗಣಿ ರೆಡ್ಡಿಗಳೇ ನಾಚುವಂತೆ ಲೆಹರ್‌ಸಿಂಗ್ ಮಂತ್ರಿಯಾಗಬಲ್ಲ.


ಅಷ್ಟಕ್ಕೂ, ಈತ ಬಿಜೆಪಿ ಕಾರ್ಯಕರ್ತನಲ್ಲ. ಕರ್ನಾಟಕದವನಂತೂ ಅಲ್ಲವೇ ಅಲ್ಲ, ಹೆಸರೇ ಹೇಳುವಂತೆ ಈತ ರಾಜಸ್ತಾನದ ಪಕ್ಕಾ ಡೀಲುಕೋರ ಮಾರ್ವಾಡಿ ಎಂಬುದನ್ನು ಬಿಟ್ಟರೆ ಕರ್ನಾಟಕಕ್ಕೂ, ಇಲ್ಲಿನ ಬಿಜೆಪಿಗೂ ಲೆಹರ್‌ಸಿಂಗ್ ಎಂಬಾತನಿಗೂ ಏನೇನೂ ಸಂಬಂಧವಿಲ್ಲ, ಒಂದೇ ಮಾತಲ್ಲಿ ಹೇಳಬೇಕೆಂದರೆ ಲೆಹರ್‌ಸಿಂಗ್ ಮುಖ್ಯಮಂತ್ರಿ ಯಡ್ಡಿಯ ಕಪ್ಪು ಹಣದ ರಖಾವುದಾರ ಮತ್ತು ಬೇನಾಮಿ!

ಮೂಲತಃ ರಾಜಸ್ತಾನದ ಲೆಹರ್‌ಸಿಂಗ್ ಬೆಂಗಳೂರಿಗೆ ಕಾಲಿಟ್ಟದ್ದು 1970 ರಲ್ಲಿ. 1972 ರಲ್ಲಿ ತಾನು ಬಿಜೆಪಿಯ ಸ್ಥಾನೀಯ ಸಮಿತಿಯ ಕೋಶಾಧ್ಯಕ್ಷನಾಗಿದ್ದೆ ಎಂದು ಕತೆ ಕಟ್ಟುತ್ತಾನೆ. 80 ರಲ್ಲಿ ನಗರ ಬಿಜೆಪಿ ಯುವ ಮೋರ್ಛಾದ ನಗರ ಘಟಕಕ್ಕೆ ಪ್ರಧಾನ ಕಾರ್ಯದರ್ಶಿಯಾಗಿದ್ದನಂತೆ. 88 ರಲ್ಲಿ ತಾನು ರಾಜ್ಯ ಕಾರ್ಯಕಾರಿಣಿಗೆ ಆಯ್ಕೆಯಾದೆ ಎನ್ನುತ್ತಾನೆ. 2002ರಲ್ಲಿ ರಾಷ್ಟ್ರೀಯ ಬಿಜೆಪಿಯ ಕಾರ್ಯಕಾರಿಣಿಯಲ್ಲಿದ್ದನಂತೆ. ಆದರೆ ಲೆಹರ್‌ಸಿಂಗ್ ಚಾಲ್ತಿಗೆ ಬಂದಿದ್ದು ರಾಜ್ಯ ಬಿಜೆಪಿಯ ಖಜಾಂಚಿಯಾಗಿ ...

ಈತನನ್ನು ಈ ಹುದ್ದೆಗೆ ತಂದಿದ್ದೇ ಯಡ್ಡಿ ಎಂ... ಎಲ್ಲರಿಗೂ ಗೊತ್ತಿರುವ ಸಂಗತಿ. ಹೆಸರಿಗಷ್ಟೇ ಬ... ಖಜಾಂಚಿಯಾಗಿದ್ದರೂ ಬಿಜೆಪಿ ಅಧಿಕಾರಕ್ಕೆ ... ಮುನ್ನವೇ ಲೆಹರ್‌ಸಿಂಗ್ ನಡೆಸುವ ಡೀಲುಗಳು ... ಬಂದಿದ್ದವು. ದೇಶಪಾಂಡೆ ಕೃಷ್ಣರ ಸಂಪುಟದಲ್ಲಿ ಕೈಗಾರಿಕಾ ಮಂತ್ರಿಯಾಗಿದ್ದಾಗ ಅಗರದ ಕೆರೆಯನ್ನೇ ಬಿಲ್ಡರುಗಳಿಗೆ ಬರೆದುಕೊಡುವಂತೆ ಲೆಹರ್‌ಸಿಂಗ್ ಕುದುರಿಸಿದ್ದ.

ಈಗ ಕೇಂದ್ರ ವಿಮಾನಯಾನ ಖಾತೆಯ ಮಂತ್ರಿ... ರುವ ಪ್ರಫುಲ್ ಪಟೇಲ್‌ರ ಮಗಳನ್ನು ದೇಶಪಾಂಡ... ಪ್ರಶಾಂತ್‌ಗೆ ಕೊಟ್ಟು ಮದುವೆ ಮಾಡಿಸಿದ್ದಕ್ಕೆ ... ಸೂತ್ರಧಾರಿಯಾಗಿದ್ದ. ದೇಶಪಾಂಡೆ ದೋಚಿದ್ದ ... ದೊಡ್ಡ ಪಾಲನ್ನು ಈತನೇ ನಿಂತು ಷೇರು ಮಾ... ಹಾಕಿದ್ದು ಮುಂಬಯಿ ಮತ್ತು ದೆಹಲಿಯಲ್ಲಿ ದೇಶ... ಖರೀದಿಸಿದ ಐಷಾರಾಮಿ ಹೋಟೆಲುಗಳಿಗೆ ... ಬ್ರೋಕರಿಕೆ ಮಾಡಿದ್ದು ಈತನ ಡೀಲುದಾರಿಕೆಗ... ಯಂತಿತ್ತು.

ಮಲ್ಲೇಶ್ವರದ ಮಂತ್ರಿಮಾಲ್‌ಗೆ ಪ್ರಮೋದ್ ಮಹ... ಕೃಷ್ಣರ ಅಳಿಯ ಸಿದ್ದಾರ್ಥ, ವೆಂಕಯ್ಯ ನಾಯ್ಡು ... ಅನಂತ್‌ಕುಮಾರ್‌ರಿಂದ ಕೋಟಿಗಟ್ಟಲೇ ಬ್ಲ್ಯಾಕ್‌ಮ... ಯುವಂತೆ ಮಾಡಿದ್ದು ಕೂಡ ಇದೇ ಲೆಹರ್‌...




ಹಿಂದೆಲ್ಲಾ ಮುಖ್ಯಮಂತ್ರಿಗಳಾಗಿದ್ದವರ ಹಿಂದೆ ಈ ಥರದ ಡೀಲರ್ ಅಥವಾ ಡೀಲು ಬ್ರೋಕರ್ ಇದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ ಯಡ್ಡಿ ಮುಖ್ಯಮಂತ್ರಿಯಾದ ಮೇಲೆ ಲೆಹರ್‌ಸಿಂಗ್ ಎಂಬ ಡೀಲು ಬ್ರೋಕರ್ ಓರ್ವ ಸದ್ದಿಲ್ಲದೇ ಅವತರಿಸಿದ್ದಾನೆ. ಕಲ್ಲಿದ್ದಲು ಖರೀದಿ ಕರ್ಮಕಾಂಡಕ್ಕೆ ಕಾರಣನಾಗಿ ರಾಯಚೂರು ಥರ್ಮಲ್ ವಿದ್ಯುತ್ ಕೇಂದ್ರವನ್ನೇ ಕುಲಗೆಡಿಸಿ ಇವತ್ತು ಅರ್ಧ ಕರ್ನಾಟಕವನ್ನು ಕತ್ತಲಲ್ಲಿ ಮುಳುಗಿಸಿದವನು ಇದೇ ಲೆಹರ್‌ಸಿಂಗ್! ಮಿತ್ತಲ್ ಕಂಪೆನಿಗಿಂತಲೂ ಹೆಚ್ಚು ಮೊತ್ತದ ಲಾಭವನ್ನು ಜಿಂದಾಲ್ ಕಂಪೆನಿ ಕೊಡುತ್ತೇನೆಂದರೂ ಅದನ್ನು ಧಿಕ್ಕರಿಸಿ ಆರ್ಸೆಲರ್ ಕಂಪೆನಿಗೇ ಅವಕಾಶ ಕಲ್ಪಿಸಿದ ಯಡ್ಡಿಯ ಮನೆಹಾಳು ನಿರ್ಧಾರಕ್ಕೆ ಕಾರಣನಾದವನೇ ಲೆಹರ್‌ಸಿಂಗ್!



ಲೆಹರ್ ಬಂಗಲೆಯ ನರಕ ಮತ್ತು ಸೊಸೆ ರಾಧಾಳ ಹತ್ಯೆಯು ಭಯಾನಕ

ಲೆಹರ್‌ಸಿಂಗ್ ಎಂಥ ಕ್ರೂರಿ ಮತ್ತು ಕೃಪಣಿ ಎಂಬುದಕ್ಕೆ ಆತನ ಸೊಸೆ ರಾಧಾಳ ನಿಗೂಢ ಸಾವೊಂದೇ ಸಾಕಷ್ಟು ಪುರಾವೆ ಕಲ್ಪಿಸುತ್ತದೆ. ಈತನ ಹಿರಿಯ ಮಗ ದೀಪಕ್ ಕಲಾಸಿಪಾಳ್ಯದ ಸಂದೀಪ್ ಏಜೆನ್ಸಿ ಎಂಬ ಸ್ಟ್ರಾಪ್ ಮಳಿಗೆಗೆ ದಣಿಯಷ್ಟೆ. ಈ ದೀಪಕ್ ಮತ್ತು ಮೈಸೂರಿನ ರತನ್‌ಲಾಲ್ ಮಗಳು ರಾಧಾ ಮದುವೆಯಾದದ್ದು 1994ರ ಮೇ 6ರಂದು. ಅದೂ ರಾಜಸ್ತಾನದ ಉದಯ್‌ಪುರ ಜಿಲ್ಲೆಯ ರತನ್‌ಲಾಲ್‌ನ ಸ್ವಂತ ಊರಾದ ಭೀಮ್ ಎಂಬ ಪುಟ್ಟ ಪಟ್ಟಣದಲ್ಲಿ, ಪಕ್ಕದ ಬಿಲ್‌ವಾಡಾದ ಕೊರ್ಚಿ ಕವಾರಿಯಾ ಲೆಹರ್‌ಸಿಂಗ್‌ನ ಹುಟ್ಟೂರಾಗಿದ್ದರಿಂದ ಲೆಹರ್‌ನ ಸಡ್ಡಕ ಗೌತಮ್ ಚಂದ್ ಎಂಬಾತನೇ ರತನ್ ಲಾಲ್ ಮಗಳ ಜೊತೆ ಸಂಬಂಧಕ್ಕೆ ಮುತುವರ್ಜಿ ವಹಿಸಿದ್ದ.



ಹೇಗೂ ರಾಜ್ಯ ಬಿಜೆಪಿಯ ಖಜಾಂಚಿ, ರಾಜಕೀಯವಾಗಿ ಪ್ರಭಾವಿ ಎಂದೇ ಭ್ರಮಿಸಿದ ರತನ್‌ಲಾಲ್ ದೀಪಕ್‌ಗೆ ತನ್ನ ಮಗಳನ್ನು ಕೊಡಲು ಖುಷಿಯಾಗೇ ಒಪ್ಪಿಕೊಂಡಿದ್ದ. ಲಕ್ಷಗಟ್ಟಲೇ ವರದಕ್ಷಿಣೆಯನ್ನೂ ಕೊಟ್ಟಿದ್ದ. ಮದುವೆ ಮುಗಿದು ಮಗಳು ಡಾಲರ್ಸ್ ಕಾಲೋನಿಯ ಲೆಹರ್‌ಸಿಂಗ್‌ನ ಬಂಗಲೆಗೆ ಬರುತ್ತಿದ್ದಂತೆ ತಂದೆ ರತನ್‌ಲಾಲ್‌ಗೆ ತನ್ನ ತಪ್ಪಿನ ಅರಿವಾಗತೊಡಗಿತ್ತು, ಲೆಹರ್‌ನದ್ದು ಸರಬರಾಜು ದಂಧೆ!


ಮುಂಬಯಿ, ದೆಹಲಿ, ಕೊಲ್ಕತ್ತಾ, ಲಕ್ನೋ ಇತ್ಯಾದಿ ನಗರಗಳಷ್ಟೇ ಅಲ್ಲದೆ ದುಬೈ, ಸಿಂಗಾಪೂರ್, ಬ್ಯಾಂಕಾಕ್‌ತನಕ ಶ್ರೀಮಂತರು, ಶೋಕಿಲಾಲರು ಮತ್ತು ರಾಜಕಾರಣಿಗಳಿಗೆ ಸಕಲ ಸರಂಜಾಮು ಕಲ್ಪಿಸುವ ಎಸ್ಕಾರ್ಟಿಂಗ್ ಜಾಲವೊಂದಕ್ಕೆ ಲೆಹರ್ ಪಾಲುದಾರನಾಗಿದ್ದ. ದುಬೈ ಮೂಲದ ಭೂಗತ ಹವಾಲುಕೋರರ ಜೊತೆಗೂ ಆತನಿಗೆ ವ್ಯವಹಾರಗಳಿದ್ದವು. ಪತ್ನಿ ಶಾಂತಾಬಾಯಿಯ ತಮ್ಮ ಮಹಾವೀರ್ ಚಂದ್ ಬೊಹರಾನ ಬಾಮೈದ ಕೊಠಾರಿ ಎಂಬಾತನ ಮೂಲಕ ಲೆಹರ್‌ಸಿಂಗ್ ಮುಂಬಯಿಯಲ್ಲಿ ಸಿಕ್ಕಾಪಟ್ಟೆ ಆಸ್ತಿ ಮಾಡಿದ್ದ.

ಬಿಜೆಪಿಗೆ ರಾಜ್ಯ ಖಜಾಂಚಿಯಾದರೂ ಕೃಷ್ಣರ ಸಂಪುಟದಲ್ಲಿ ಭಾರೀ ಕೈಗಾರಿಕಾ ಮಂತ್ರಿಯಾಗಿದ್ದ ಆರ್.ವಿ.ದೇಶಪಾಂಡೆಯ ಮುಂಬಯಿ ಮತ್ತು ದೆಹಲಿಯ ಐಷಾರಾಮಿ ಹೋಟೆಲುಗಳಲ್ಲಿ ಲೆಹರ್‌ನ ಪಾಲುದಾರಿಕೆಯಿತ್ತು!

ಇಷ್ಟಿದ್ದೂ ಲೆಹರ್ ತನ್ನ ಸೊಸೆಯನ್ನು ಪೀಡಿಸುತ್ತಿದ್ದ. ರಾಧಾ ತನ್ನ ಮನೆಯವರ ಬಳಿ ಹೇಳಿಕೊಂಡಂತೆ ಪದೇಪದೇ ಲೆಹರ್ ಬ್ಯೂಟಿ ಪಾರ್ಲರ್‌ಗೆ ಹೋಗುವಂತೆ ಒತ್ತಾಯಿಸುತ್ತಿದ್ದ. ತನ್ನ ಮನೆಯಲ್ಲಿ ಬಿಜೆಪಿಯ ಉಚ್ಚ ನಾಯಕರಿಗೆ ಪಾರ್ಟಿಕೊಟ್ಟು ತಾನು ಹೇಳಿದ ಒಂದಿಬ್ಬರು ರಾಷ್ಟ್ರ ನಾಯಕರಿಗೆ ಕಾಲು ಒತ್ತಿಕೊಡು ಎಂದು ಒತ್ತಾಯಿಸಿದ್ದ!


ಮರ್ಯಾದಸ್ಥ ಮನೆಮಗಳು ರಾಧಾ ಇಂಥದ್ದನ್ನೆಲ್ಲ ಹೇಗೆ ಸಹಿಸಲು ಸಾಧ್ಯ? ಸಹಜವಾಗೇ ಮಾವ ಮತ್ತು ಗಂಡನ ವಿರುದ್ಧ ತಿರುಗಿ ಬಿದ್ದಳು. ಇಷ್ಟಾಗಿದ್ದೇ ಮಗನನ್ನು ಛೂಬಿಟ್ಟು ರಾಧಾಳಿಗೆ ಹಿಂಸೆ ಕೊಡಲಾರಂಭಿಸಿದ. ಕೆಲವೊಮ್ಮೆ ತಾನೇ ಬೆಲ್ಟ್ ಬಿಚ್ಚಿಕೊಂಡು ಹೊಡೆಯುತ್ತಿದ್ದ. ಆ ಹೊತ್ತಿಗಾಗಲೇ ರಾಧಾಳಿಗೆ ಒಂದೂವರೆ ವರ್ಷದ ಗಂಡು ಮಗುವಿತ್ತು, ಅಂತಿಮವಾಗಿ 2000ದ ಆಗಸ್ಟ್ 3ರ ರಾತ್ರಿ ರಾಧಾ ರಕ್ತಕಾರಿಕೊಂಡು ಹೆಣವಾಗಿ ಬಿದ್ದಿದ್ದಳು. ಅದೂ ಲೆಹರ್‌ನ ಬಂಗಲೆಯಲ್ಲಿದ್ದ ಗಂಡ ದೀಪಕ್‌ನ ತಮ್ಮ ಸಂಜಯ್‌ನ ಕೋಣೆಯಲ್ಲಿ!

ತಲೆ ತೂತಾಗಿ ಸಾಕಷ್ಟು ರಕ್ತ ಹರಿದುಹೋಗಿತ್ತು, ಮೈತುಂಬಾ ಬಾಸುಂಡೆಗಳಿದ್ದವು. ಮರುದಿನ ಮೈಸೂರಿನಲ್ಲಿದ್ದ ತಂದೆ ರತನ್‌ಲಾಲ್‌ಗೆ ಲೆಹರ್ ಫ... ಮಾಡಿ ನಿನ್ನ ಮಗಳು ನಿನ್ನೆ ರಾತ್ರಿ ನೇಣುಹಾಕಿ... ದ್ದಾಳೆಂದು ದುರಹಂಕಾರದಿಂದ ಹೇಳಿ ಫೋನು ... ಲೆಹರ್‌ನ ಬಂಗಲೆಗೆ ಬರುವ ಹೊತ್ತಿಗಾಗಲೇ ... ಸಾವಿನ ಕತೆಯೇ ಬದಲಾಗಿತ್ತು, ಪತಿಯ ತಮ್ಮ ಸಂ... ಕೋಣೆಯ ಫ್ಯಾನಿಗೆ ರಾಧಾ ನೇಣು ಬಿಗಿದುಕೊ... ಕತೆ ಕಟ್ಟಲಾಗಿತ್ತು. ಆಗ ಸಂಜಯ್ ನಗರ ಪೊಲೀಸ್... ಇನ್ಸ್‌ಪೆಕ್ಟರ್ ಆಗಿದ್ದ ಪುರುಷೋತ್ತಮ್ ಮತ್ತು ... ಶಿವಲಿಂಗಯ್ಯನಿಗೆ ಲೆಹರ್ ಸಾಕಷ್ಟು ಕೈ ಬೆಚ್ಚಗೆ ಮಾ... ಕೇಸು ಮುಚ್ಚಿಹಾಕಿದ್ದ.




ಹೆಣವಾದ ರಾಧಾ

ಅದೊಂದು ಭೀಕರ ಕೊಲೆ ಎಂಬುದಕ್ಕೆ



ದಾರಿಕೆಯಾಗಿತ್ತು. ಮುಂದೆ ಕುಮಾರಸ್ವಾಮಿ
ಮಂತ್ರಿ ಯಾದಾಗಲೂ ಮುಂಬಯಿಯ ನಿಖಿಲ್
ಎಂಬ ಖದೀಮನನ್ನು ಹಿಡಿದು ನಂದಗುಡಿ
ಟ್ಲುಡ್‌ಗೆ ಇದೇ ಲೆಹರ್‌ಸಿಂಗ್ ಡೀಲು ಕುದುರಿಸಿ

ಎಲ್ಲಾ ಅಸಾಧ್ಯ ಡೀಲುಗಳನ್ನು ಕುದುರಿಸುವ ಲೆಹರ್
ಅಸಲೀ ತಾಕತ್ತೇ ಸರಬರಾಜು ದಂಧೆ. ಮಂತ್ರಿ,
ಗಳ ಖಯಾಲಿಗೆ ತಕ್ಕಂತೆ ಏನೇನು ಬೇಕೋ
ಸರಬರಾಜು ಮಾಡುತ್ತಾನೆ.
ನಟಿಯೇ ಆಗಲಿ, ಯಾವ
ಮಾಡೆಲಿಂಗ್ ಬೆಡಗಿಯೇ
ಚಿಟಿಕೆ ಹೊಡೆಯುವುದ
ಲೆಹರ್‌ಸಿಂಗ್ ಪಳಗಿಸು


ಹೆಣದ ಮನೆಯಲ್ಲಿ ಕಟ್ಟಾ ನಾಯ್ಡು

ಆತನ ಅಸಲೀ ತಾಕತ್ತು.
ಈತ ಹುಟ್ಟು ಶ್ರೀಮಂತನೇ
ತ್ತಿಗೂ ಕಲಾಸಿಪಾಳ್ಯದ ಹೊಸ
ಬಜಾರಿನಲ್ಲಿ ಸಂದೀಪ್ ಏಜೆನ್ಸಿ
ಸ್ಕ್ರಾಪ್ ಅಂಗಡಿಯೊಂದು
ಹೆಸರಲ್ಲಿದೆ. ಇದಲ್ಲದೇ ಡಾಲರ್ಸ್ ಕಾಲನಿಯಲ್ಲಿ
ಖುದೆ. ಇದು ಬಿಟ್ಟರೆ ಎಸ್.ಪಿ. ರಸ್ತೆಯಲ್ಲಿ ಪೇರು
ಬು ಕಂಪೆನಿಯೊಂದನ್ನು ನಡೆಸುತ್ತಾನೆ.

ಬಿಟ್ಟರೆ ಲೆಹರ್‌ಸಿಂಗ್ ಏನು ಮಾಡುತ್ತಾ
ಯಾರಿಗೂ ಗೊತ್ತಿಲ್ಲ. ಬೆಂಗಳೂರಿನ ರಾಜಸ್ತಾನ್
ಎಂಬ ಮಾರ್ವಾಡಿ ಸಂಘಟನೆಗೆ ಈತನೇ
ರ್ಶಿ. ಈತನ ಪತ್ನಿ ಶಾಂತಾಬಾಯಿ ಕೂಡ
ರಾಜಸ್ತಾನದವಳೆ. ದೀಪಕ್ ಮತ್ತು ಸಂಜಯ್
ಈತನ ಇಬ್ಬರೂ ಮಕ್ಕಳೂ ಶೋಕಿಲಾಲರೇ.
ಏಜೆನ್ಸೀಸ್ ಹೆಸರಲ್ಲಿ ಈತ ಸ್ಕ್ರಾಪು ಮತ್ತು
ಡೀಲರ್‌ಗಿರಿ ನಡೆಸುತ್ತಾನಾದರೂ ಅದು
ಕ್ಷತ್ರೀಯ ಮಟ್ಟದ ವ್ಯವಹಾರವಲ್ಲ. ಹಿಂದಿ ಮತ್ತು

ಇಂಗ್ಲಿಷ್‌ನಲ್ಲಿ ಚೆನ್ನಾಗಿ ಮಾತಾಡುತ್ತಾನೆಂಬುದನ್ನು ಬಿಟ್ಟರೆ ಯಾವ ಯೋಗ್ಯತೆ ನೋಡಿ ಯಡ್ಡಿ ಈತನನ್ನು ತನ್ನ ಬೇನಾಮಿಯನ್ನಾಗಿ ಮಾಡಿಕೊಂಡಿದ್ದಾರೆಂಬುದೇ ಇವತ್ತಿಗೂ ನಿಗೂಢ.

ಆದರೆ ಬೆಂಗಳೂರು ಮತ್ತು ಮುಂಬಯಿಯ ಶೋಕಿಲಾಲರ ಮಧ್ಯೆ ಈತನಿಗೆ ಬೇರೆಯದೇ ಕುಖ್ಯಾತಿಯಿದೆ. ಈತ ಓರ್ವ ಹೈಟೆಕ್ ಸರಬರಾಜುದಾರನೆಂಬುದು ಯಡ್ಡಿಗಾಗಲಿ, ಬಿಜೆಪಿಯ ವರಿಷ್ಠರಿಗಾಗಲಿ ಗೊತ್ತಿಲ್ಲವೆಂದೇನಲ್ಲ. ಹಾಗಿದ್ದೂ ಈತನನ್ನೇ ಏಕೆ ರಾಜ್ಯ ಬಿಜೆಪಿಯ ಖಜಾಂಚಿಯನ್ನಾಗಿ ಯಡ್ಡಿ ನೇಮಿಸುತ್ತಾರೆಂದರೆ, ದುಡ್ಡು ತರುವುದು ಈತನಿಗೆ ಕರತಲಾಮಲಕ. ಯಾವ್ಯಾವ ಮಾರ್ವಾಡಿಯ ಬಳಿ ಎಷ್ಟು ಬ್ಲ್ಯಾಕ್‌ಮನಿಯಿದೆ, ಆತನಿಂದ ಪಾರ್ಟಿಗೆ ಹೇಗೆ ದುಡ್ಡು ತರಬೇಕು, ಅದಕ್ಕೆ ಪ್ರತಿಯಾಗಿ ಆತನಿಗೆ ಪಕ್ಷದಿಂದ ಏನೆಲ್ಲಾ ಸೇವೆ ಸಲ್ಲಿಸಬೇಕೆಂಬುದನ್ನು ಈತನೇ ನಿರ್ಧರಿಸುತ್ತಾನೆ.

ಇಂಥವನನ್ನು ಮೊನ್ನೆಯಷ್ಟೇ ತಮ್ಮ ಜೊತೆ ಚೀನಾ ಪ್ರವಾಸಕ್ಕೆ ಕರೆದೊಯ್ದ ಮುಖ್ಯಮಂತ್ರಿ ಯಡ್ಡಿಯ ಉದ್ದೇಶ ಮಾತ್ರ ಇವತ್ತಿಗೂ ನಿಗೂಢ. ಗ್ಲೋಬಲ್ ಎಕಾನಮಿಕ್ ಫೋರಂನ ಚೈನಾ ಸಮಾವೇಶಕ್ಕೆ ಯಡ್ಡಿ ಜೊತೆ ನಿರಾಣಿ ಹೋಗಿದ್ದಕ್ಕೆ ಅರ್ಥವಿದೆ. ನಿರಾಣಿ ಕೈಗಾರಿಕಾ ಮಂತ್ರಿ. ಆದರೆ ಲೆಹರ್‌ಸಿಂಗ್ ಯಾರು?

ಕೈಗಾರಿಕಾ ಇಲಾಖೆಯ ಅಧಿಕಾರಿಯಲ್ಲ, ಐಟಿ-ಬಿಟಿ ತಜ್ಞನೂ ಅಲ್ಲ. ಯಾವ ಅರ್ಹತೆಯಿದೆಯೆಂದು ಯಡ್ಡಿ ಜೊತೆ ಈತ ಚೈನಾ ಪ್ರವಾಸಕ್ಕೆ ಹೋಗಿಬಂದ?

ಇದನ್ನು ಕೆದಕುತ್ತಾ ಹೋದಂತೆ ವಿಶ್ವ ಉಕ್ಕ ದಂಧೆಯ ಅಧಿಪತಿ ಲಕ್ಷ್ಮಿ ಮಿತ್ತಲ್ ಮತ್ತು ಯಡ್ಡಿ ನಡುವಿನ ರಹಸ್ಯ ಡೀಲೊಂದಕ್ಕೆ ಹೇಗೆ ಲೆಹರ್ ಸಿಂಗ್ ಬ್ರೋಕರಿಗೆ ನಿಭಾಯಿಸಿದನೆಂಬುದು ಬಯಲಾಗುತ್ತದೆ. ಇತ್ತೀಚೆಗಷ್ಟೇ ಬೆಂಗಳೂರಿನಲ್ಲಿ ನಡೆದ ವಿಶ್ವ ಹೂಡಿಕೆದಾರರ ಸಮಾವೇಶದಲ್ಲಿ ಆರ್ಸೆಲರ್ ಕಂಪೆನಿಯ ಲಕ್ಷ್ಮಿ ಮಿತ್ತಲ್‌ಗೆ ಯಡ್ಡಿ ಬಳ್ಳಾರಿಯ 3 ಸಾವಿರ ಎಕರೆ ಅರಣ್ಯ ಪ್ರದೇಶವನ್ನು ಬರೆದುಕೊಟ್ಟಿದ್ದಾರೆ. ಪ್ರತಿ ಚದುರ ಭೂಮಿಗೆ ಲಕ್ಷ್ಮಿ ಮಿತ್ತಲ್ ಸರ್ಕಾರಕ್ಕೆ ಪಾವತಿಸುವುದು ಏಳು ಅಥವಾ ಎಂಟು ರೂಪಾಯಿ ಮಾತ್ರ!

ಹೀಗೆ ಕನ್ನಡಿಗರ ಭೂ ಸಂಪತ್ತಾದ ಅದಿರನ್ನು ದೋಚಿ ಇಲ್ಲೇ ಅದನ್ನು ಉಕ್ಕನ್ನಾಗಿ ಪರಿವರ್ತಿಸಲು ಮಿತ್ತಲ್ ಹೂಡುವ ಬಂಡವಾಳ ಮೂರೂವರೆ ಸಾವಿರ ಕೋಟಿಯಂತೆ. ಇದಕ್ಕೆ ಸರ್ಕಾರವೇ ನೀರು, ವಿದ್ಯುತ್‌ನ್ನು ಉಚಿತವಾಗಿ ಕಲ್ಪಿಸುತ್ತಾದೆ. ಎಲ್ಲಾ ತೆರಿಗೆಗೂ ವಿನಾಯ್ತಿ ಕೊಡುತ್ತದೆ. ಮಿತ್ತಲ್ ಕಂಪೆನಿಗಿಂತಲೂ ಹೆಚ್ಚು ಮೊತ್ತದ ಲಾಭವನ್ನು ಜಿಂದಾಲ್ ಕಂಪೆನಿ ಕೊಡುತ್ತೇನೆಂದರೂ ಅದನ್ನು ಧಿಕ್ಕರಿಸಿ ಆರ್ಸೆಲರ್ ಕಂಪೆನಿಗೇ ಅವಕಾಶ ಕಲ್ಪಿಸಿದ ಯಡ್ಡಿ ಮನೆಹಾಳು ನಿರ್ಧಾರಕ್ಕೆ ಕಾರಣನಾದವನೇ ಲೆಹರ್‌ಸಿಂಗ್!

• ರಾ.ಸೋಮನಾಥ್

ಅನುಮಾನಗಳಿರಲಿಲ್ಲ. ಇಡೀ ಘಟನೆಯ
ಗಳೇ ಲೆಹರ್‌ನ ಕ್ರೌರ್ಯಕ್ಕೆ
ಕ್ಷಿಗಳಂತಿದ್ದವು. ನೇಣು ಬಿಗಿದುಕೊಂಡ
ನ್ನು ಸಂಜಯ್‌ನ ಕೋಣೆಯಲ್ಲಿ
ಗಿತ್ತಾದರೂ ರಾಧಾ ಕೊಲೆಯಾಗಿದ್ದು ಪತಿ
ಕೋಣೆಯಲ್ಲೇ ಎಂಬುದಕ್ಕೆ ಹರಿದ ರಕ್ತವೇ
ಮಂತಿತ್ತು. ಪತಿ ದೀಪಕ್‌ನ ಕೋಣೆಯ ಸ್ವಿಚ್
ಗೆ ತಲೆ ಜಜ್ಜಿದ ಗುರುತಿತ್ತು. ರಕ್ತ ಕಲೆಗಳು
ಕೋಣೆಯ ಗೋಡೆಗಳ ಮೇಲೆ,
ಗಳ ಮೇಲೆ
ನೇಣು
ಂಡಿದ್ದರೆ ಕತ್ತಿನ
ದ
ಬೇಕಿತ್ತು. ಆದರೆ
ತರಚು
ಕತ್ತಿನ ಸುತ್ತ


ಲೆಹರ್ ಮಗನ ಜೊತೆ ಮದುವೆಯಾದಾಗ

ರ್ಥ ರಾಧಾಳನ್ನು
ಕೋಣೆಯಲ್ಲಿ
ಕೊಂದು ನಂತರ
ನ ಕೋಣೆಗೆ
ನೇಣು ಬಿಗಿದುಕೊಂಡಂತೆ ಕತೆ
ನ್ನು. ಹಾಗೊಮ್ಮೆ ರಾಧಾ ಆತ್ಮಹತ್ಯೆ
ಂಡಿದ್ದೇ ನಿಜವಾಗಿದ್ದರೆ, ಸಂಜಯ್‌ನ
ಫ್ಯಾನಿಗೆ ಉರುಳು ಕಟ್ಟಿಕೊಂಡ
ದರೂ ಇರುತ್ತಿತ್ತು. ವಿಚಿತ್ರವೆಂದರೆ ಫ್ಯಾನಿಗೆ
ಗಳು ಕೂಡಾ ಹಾಗೇ ಉಳಿದಿತ್ತು!
ಲೆಹರ್‌ನ ಮನೆಯಲ್ಲಿ ಸೊಸೆಯ ಹೆಣ ಬಿತ್ತೆಂದು
ತದ ಶ್ರಾದ್ಧರ್ಧದಲ್ಲೇ ಕಟ್ಟಾ ಸುಬ್ರಹ್ಮಣ್ಯ ನಾಯ್ಡು
ಬಂದಿದ್ದ. ಆಗ ಮಂತ್ರಿಯಾಗಿದ್ದ ಆರ್.ವಿ.

ದೇಶಪಾಂಡೆ ಕೂಡ ಹೆಣದ ಮುಂದೆ ನಿಂತು ಪೊಲೀಸರಿಗೆ ಧಮಕಿ ಹಾಕಿದ್ದರಂತೆ. ಪೊಲೀಸರೇ ನಿಂತು ಪೋಸ್ಟ್ ಮಾರ್ಟಂ ಶಾಸ್ತ್ರ ಮುಗಿಸಿದರು. ಎಂ.ಎಸ್. ರಾಮಯ್ಯ ಆಸ್ಪತ್ರೆಯ ಡಾಕ್ಟರ್ ಕಿರಣ್ ಎಂಬ ಪೋಸ್ಟ್ ಮಾರ್ಟಂ ಪ್ರವೀಣ ಕೂಡ ತಮ್ಮ ಮಗಳ ಹತ್ಯೆಯನ್ನು ಮುಚ್ಚಿಹಾಕಲು ನೆರವಾಗಿದ್ದಾನೆಂದು ತಂದೆ ರತನ್‌ಲಾಲ್ ದೂರು ಕೊಟ್ಟರು. ಆಗ ಮಾನವ ಹಕ್ಕು ವಿಚಾರಣೆ ಮುಖ್ಯಸ್ಥರಾಗಿದ್ದ ಸುಭಾಷ್ ಭರಣಿ ರಾಧಾಳ ಹೆಣದ ಫೋಟೋ ನೋಡಿಯೇ ಇದೊಂದು ಬರ್ಬರ ಹತ್ಯೆ ಎಂದಿದ್ದರು. ಆದರೆ ಬಿಜೆಪಿ ರಾಷ್ಟ್ರನಾಯಕ ಅನಂತಕುಮಾರ್ ಮತ್ತು ಮುಖ್ಯಮಂತ್ರಿ ಕೃಷ್ಣರ ಮಧ್ಯೆ ದೋಸ್ತಿಯಿತ್ತಲ್ಲ; ಪೊಲೀಸ್ ಕಮೀಷನರ್ ಸಾಂಗ್ಲಿಯಾನ ಕೂಡ ತಂದೆ ರತನ್‌ಲಾಲ್ ನೆರವಿಗೆ ಬರಲಾಗುತ್ತಿಲ್ಲ ಎಂದು ಸಾರಿ ಹೇಳಿಬಿಟ್ಟರಂತೆ!

ಸದ್ಯ ಹತಭಾಗ್ಯ ರಾಧಾಳ ತಂದೆತಾಯಿ ಲೆಹರ್‌ಸಿಂಗ್ ವಿರುದ್ಧ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಇವತ್ತಲ್ಲ ನಾಳೆ ಲೆಹರ್ ಮತ್ತು ಆತನ ಕ್ರೂರಿ ಪುತ್ರನಿಗೆ ಶಿಕ್ಷೆಯಾಗೇ ತೀರುತ್ತದೆ. ನನಗೆ ನ್ಯಾಯ ಸಿಕ್ಕೇ ಸಿಗುತ್ತದೆ; ಎನ್ನುತ್ತಾರೆ ರಾಧಾಳ ತಂದೆ ರತನ್‌ಲಾಲ್.

ಆದರೆ ಲೆಹರ್‌ಸಿಂಗ್ ಬಳಿ ಪಾಪದ ದುಡ್ಡಿದೆಯಲ್ಲ? ಪೊಲೀಸರು, ಸಾಕ್ಷಿಗಳು, ಡಾಕ್ಟರ್‌ಗಳನ್ನು ಖರೀದಿಸಿ ಪೋಸ್ಟ್‌ಮಾರ್ಟಂ ಅನ್ನೇ ತಿದ್ದಿದ್ದವನಿಗೆ ಒಂದು ಕೊಲೆ ಮುಚ್ಚಿ ಹಾಕುವುದು ಯಾವ ಲೆಕ್ಕ? •


ದಿಟ್ಟ ನಾಗಾಗಳ ಕೊನೊಮಾ

▶▶ 3

ನಾಗಾಲ್ಯಾಂಡ್ ಮತ್ತು ನಾಗಾಗಳೆ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳಲ್ಲಿ ಒಂದು ವಿಚಿತ್ರ ಎದ್ದು ಕಾಣಿಸುತ್ತದೆ. ಅದೇನೆಂದರೆ ಸತ್ತಿರುವ ಸ್ಥಳೀಯ ಪ್ರಮುಖರ ನೆನಪಿನಲ್ಲಿ ರಸ್ತೆ ಬದಿಯಲ್ಲೇ ಸ್ಮಾರಕ ಕಲ್ಲುಗಳನ್ನು ನಿರ್ಮಿಸಿರುತ್ತಾರೆ. ಅಂತಹ ಸಾವಿರಾರು ಸ್ಮಾರಕಗಳಲ್ಲಿ ಪ್ರಮುಖವಾದ ಒಂದು ಕೊನೊಮಾಗೆ ಹೋಗುವ ರಸ್ತೆಯಲ್ಲಿ ಸಿಗುತ್ತದೆ.


ಭಾರತದಿಂದ ತಾವು ಪ್ರತ್ಯೇಕ ಎಂದು ಘೋಷಿಸಿಕೊಂಡಿದ್ದ ನಾಗಾಲ್ಯಾಂಡಿನ ಸಂಯುಕ್ತ ಸರ್ಕಾರದ ಪ್ರಥಮ ರಾಷ್ಟ್ರಪತಿ ಖ್ರಿಸಾನೀಸಾ ಸೆಯಿ ಅವರ ನೆನಪಿನಾರ್ಥ ದೊಡ್ಡದಾದ ಏಕ ಶಿಲೆಯನ್ನು ಪ್ರೇಕ್ಷಣೀಯ ಸ್ಥಳವೊಂದರಲ್ಲಿ ಸ್ಥಾಪಿಸಲಾಗಿದೆ. ಈ ಸ್ಮಾರಕದ ಮೇಲೆ ನಾಗಾ ಮತ್ತು ಸ್ಥಳೀಯ ಅಂಗಾಮಿ ಉಪ ಭಾಷೆಯಲ್ಲಿ "ನಮ್ಮ ದೇಶ ನಮ್ಮದು" ಎಂದು ಕೆತ್ತಲಾಗಿದೆ. ಅಷ್ಟೇ ಅಲ್ಲದೆ "ನಾಗಾಗಳು ಭಾರತೀಯರಲ್ಲ; ನಾಗಾಗಳ ನಾಡು ಭಾರತ ಒಕ್ಕೂಟದ ಭಾಗವಲ್ಲ. ಈ ಅನನ್ಯ ಸತ್ಯವನ್ನು ನಾವು ಸದಾ ಎತ್ತಿಹಿಡಿಯುತ್ತೇವಲ್ಲದೆ ಎಷ್ಟೇ ಕಷ್ಟ ಎದುರಾದರೂ ಈ ಸತ್ಯವನ್ನು ಕಾಪಾಡುತ್ತೇವೆ" ಎಂದೂ ಸಾರಲಾಗಿದೆ.

1947ಕ್ಕಿಂತ ಹಿಂದಿನಿಂದಲೂ ಭಾರತದೊಂದಿಗೆ ನಾಗಾ ಸಮುದಾಯ ನಡೆಸಿಕೊಂಡು ಬಂದಿರುವ ಸಮರಕ್ಕೆ ಈ ಸ್ಮಾರಕ ಒಂದು ನಿದರ್ಶನದಂತಿದೆ. ಆದರೂ ನಾಗಾಗಳ ಪ್ರದೇಶ ಭಾರತಕ್ಕೆ ಸೇರಿದ್ದು ಎಂದೇ ಸಾಧಿಸಿಕೊಂಡು ಬಂದಿರುವ ಭಾರತ ಸರ್ಕಾರ ತನ್ನ ವಿರುದ್ಧ ಇಂತಹ ಸವಾಲೊಡ್ಡುವ ಸ್ಮಾರಕಗಳನ್ನು ಮೌನವಾಗಿ ಸಹಿಸಿಕೊಂಡು ಬಂದಿರುವುದು ಏನನ್ನು ಸೂಚಿಸುತ್ತದೆ? ಈ ಸ್ಮಾರಕವನ್ನು ನೋಡಿದಾಗ ಗೆಳತಿ ಗ್ರೇಸ್‌ಳಿಗೆ ನಾನು "ಇಂತಹದ್ದೊಂದು ಹೇಳಿಕೆಯನ್ನು ಭಾರತದ ಇತರೆ ಕಡೆ ಯಾರಾದರು ನೀಡಿದರೆ ಅವರನ್ನು ಸರ್ಕಾರ ಕೂಡಲೆ ಬಂಧಿಸುತ್ತದೆ. ಆದರೆ ಇಲ್ಲಿ ಹಾಗೆ ಮಾಡದಿರುವುದು ನಾಗಾಗಳ ಮೇಲೆ ಭಾರತದ ಸರ್ಕಾರ ನಡೆಸಿರುವ ಅಕ್ರಮ ಆಳ್ವಿಕೆಯನ್ನು ತೋರುತ್ತದೆ" ಎಂದಾಗ ಆಕೆ ಹೆಮ್ಮೆಯಿಂದ ಬೀಗಿದಳು.


ಅಂಗಾಮಿಗಳ ಸ್ಮಾರಕ...

ವೀರೋಚಿತ ವಾಗಿ ಹೋರಾಡಿ, ಹಲವೊಮ್ಮೆ ಗೆದ್ದು ಹಲವೊಮ್ಮೆ ಸೋತಿದ್ದರೂ ಅಂಗಾಮಿಗಳು ಎಂದೂ ಬ್ರಿಟಿಷರಿಗೆ ಶರಣಾಗಿರಲಿಲ್ಲ, ತಮ್ಮ ಪ್ರದೇಶವನ್ನು ಬಿಟ್ಟುಕೊಟ್ಟಿರಲಿಲ್ಲ. ಬದಲಾಗಿ ಪ್ರತಿ ಬಾರಿ ಅದೇ ಜಾಗದಲ್ಲಿ ಮತ್ತೊಮ್ಮೆ ತಮ್ಮ ಹಳ್ಳಿಯನ್ನು ಕಟ್ಟಿಕೊಂಡು ಬ್ರಿಟಿಷರಿಗೆ ಸವಾಲೊಡ್ಡುತ್ತಿದ್ದರು. ಹೀಗೆ 1850ರಿಂದ 1879ರ ತನಕ ಅಂಗಾಮಿ ಮತ್ತು ಬ್ರಿಟಿಷರ ನಡುವೆ ಯುದ್ಧಗಳು ನಡೆದು ಅಂಗಾಮಿಗಳು ವೀರೋಚಿತರಾಗಿ ಹೋರಾಡಿದ್ದರೆಂದರೆ ಮೇಜರ್ ಜಾನ್ ಬಟ್ಲರ್ ಎಂಬ ಬ್ರಿಟಿಷ್ ಅಧಿಕಾರಿ "ಈಶಾನ್ಯ ಪ್ರದೇಶದಲ್ಲಿ ಇರುವ ಕೋಟೆಗಳಲ್ಲಿ ಕೊನೊಮಾ ಕೋಟೆ ಅತಿ ಬಲಿಷ್ಠವಾದದ್ದು" ಎಂದು ದಾಖಲಿಸಿದ್ದ.

ಭಾರತ ಸರ್ಕಾರ ಕೂಡ 1956ರಲ್ಲಿ ಕೊನೊಮಾ ಕೋಟೆಯ ಮೇಲೆ ದಾಳಿ ಮಾಡಿ ಇದನ್ನು ಧ್ವಂಸ ಮಾಡಿತ್ತು; ಆಗಲೂ ಅಂಗಾಮಿಗಳು ಮತ್ತೆ ತಮ್ಮ ಕೋಟೆಯನ್ನು ಕಟ್ಟಿಕೊಂಡು ಅಲ್ಲೇ ವಾಸಿಸುವ ಮೂಲಕ ಭಾರತದ ಸೈನ್ಯಕ್ಕೂ ಸವಾಲೊಡ್ಡಿದರು. ಮಾತ್ರವಲ್ಲ 1947ರಿಂದಲೂ ಇವತ್ತಿನ ತನಕ ತಮ್ಮ ಸ್ವಾತಂತ್ರಕ್ಕಾಗಿ ಭಾರತದ ವಿರುದ್ಧ ನಾಗಾಗಳು ನಡೆಸಿರುವ ಸಂಗ್ರಾಮದಲ್ಲಿ ಕೊನೊಮಾದ 46ಕ್ಕಿಂತಲೂ ಹೆಚ್ಚು ಅಂಗಾಮಿಗಳು ಮಡಿದಿದ್ದಾರೆ.


ಕೊನೊಮಾ ಕಣಿವೆಯ ಒಂದು ದೃಶ್ಯ.....

ನಾಗಾ ಇತಿಹಾಸದಲ್ಲಿ ಕೊನೊಮಾ ಪ್ರಾಮುಖ್ಯತೆ ಪಡೆಯಲು ಇನ್ನೂ ಒಂದೆರಡು ಕಾರಣಗಳಿವೆ. ಮೊದಲನೆಯದಾಗಿ ನಾಗಾಗಳ 'ರಾಷ್ಟ್ರಪಿತ' ಎಂದೇ ಪರಿಗಣಿಸಲ್ಪಡುವ ಫಿಜೋ ಅವರ ಜನ್ಮ ಸ್ಥಳ ಕೊನೊಮಾ. ಎರಡನೆಯದಾಗಿ ನಾಗಾಗಳ ದಿಟ್ಟತನಕ್ಕೆ ಈ ಹಳ್ಳಿ ಒಂದು ಸಂಕೇತವಾಗಿದೆ.

ಎಲ್ಲಾ ನಾಗಾ ಊರುಗಳಂತೆ ಕೊನೊಮಾ ಕೂಡ ಬೆಟ್ಟದ ಮೇಲಿದೆ. ಆ ಬೆಟ್ಟ ಹತ್ತಿರವಾಗುತ್ತಿದ್ದಂತೆ ಒಂದು ದ್ವಾರ ಸಿಗುತ್ತದೆ. ಈ ಪ್ರದೇಶದಲ್ಲಿ ನಾಗಾ ಸಮುದಾಯಗಳಲ್ಲಿ ಒಂದಾದ ಅಂಗಾಮಿ ಬುಡಕಟ್ಟಿನವರು ವಾಸಿಸುವುದರಿಂದ ಆ ದ್ವಾರದ ಮೇಲೆ ಅಂಗಾಮಿ ಸಮುದಾಯದ ಲಾಂಛನವನ್ನು ಬಿಡಿಸಲಾಗಿದೆ. ಆ ದ್ವಾರವನ್ನು ದಾಟಿ ಒಂದೆರಡು ಕಿ.ಮೀ ಸಾಗಿದ ನಂತರ ಕೊನೊಮಾ ಎದುರಾಗುತ್ತದೆ.

ಇವತ್ತು ಅಂಗಾಮಿ ಸಮುದಾಯ ಹೇಗೆ ನಾಗಾಗಳಲ್ಲೇ ಅತಿಹೆಚ್ಚು ಸಾಕ್ಷರತೆ ಮತ್ತು ಯಶಸ್ಸು ಕಂಡಿರುವ ಸಮುದಾಯ ಎಂದು ಮನ್ನಣೆ ಪಡೆದಿದೆಯೋ ಹಾಗೆಯೇ ಹಿಂದಿನ ಕಾಲದಲ್ಲಿ ಅತಿ ಧೈರ್ಯಶಾಲಿ ಸೈನಿಕರನ್ನು ಪಡೆದಿರುವ ಸಮುದಾಯ ಎಂದೇ ಖ್ಯಾತಿ ಪಡೆದಿತ್ತು. ಬ್ರಿಟಿಷರ ಕಾಲದಲ್ಲೂ ಎಂದೂ ತನ್ನ ಪ್ರದೇಶವನ್ನಾಗಲಿ, ತನ್ನ ಸ್ವಾಭಿಮಾನವನ್ನಾಗಲಿ ಬಿಟ್ಟುಕೊಡದ ಅಂಗಾಮಿಗಳು ಅಂದಿನ ಸರ್ಕಾರಕ್ಕೆ ದೊಡ್ಡ ತಲೆನೋವಾಗಿದ್ದರು. ಇಂತಹ ಅಂಗಾಮಿಗಳನ್ನು ಬಗ್ಗುಬಡಿಯಲೆಂದೇ ಬ್ರಿಟಿಷರು ಕೊನೊಮಾದ ಕೋಟೆಯ ಮೇಲೆ ಕನಿಷ್ಠ ಒಂಭತ್ತು ಬಾರಿ ದಾಳಿ ನಡೆಸಿದ್ದರಲ್ಲದೆ ಎರಡು ಬಾರಿ ಇಡೀ ಹಳ್ಳಿಯನ್ನೇ ಭಸ್ಮ ಮಾಡಿದ್ದರು. ಬ್ರಿಟಿಷರ ವಿರುದ್ಧ

ಹೀಗೆ 1825ರಲ್ಲಿ ಮೊದಲ ಬಾರಿಗೆ ಸ್ಥಾಪನೆಗೊಂಡ ಈ ಕೋಟೆ ಆನಂತರ ಹಲವಾರು ಬಾರಿ ನಾಶಗೊಂಡರೂ ಮತ್ತೆ ಮತ್ತೆ ತಲೆ ಎತ್ತುತ್ತಾ ಬಂದಿದೆ. ಭಾರತದ ಸೈನ್ಯ ಈ ಹಳ್ಳಿಯನ್ನು ಧ್ವಂಸ ಮಾಡಿದ ನಂತರ ಮತ್ತೆ 1990ರಲ್ಲಿ ನಾಲ್ಕು ಬಾರಿ ನಿರ್ಮಿಸಲ್ಪಟ್ಟ ಕೋಟೆಯಲ್ಲಿ ಇವತ್ತಿಗೂ ಹಳೇ ಕೋಟೆಯ ಭಾಗಗಳು ಹಾಗೇ ಇವೆ. ಅದರ ಜೊತೆಗೆ ಇಲ್ಲಿ ಮಡಿದ ಬ್ರಿಟಿಷ್ ಸೈನಿಕರ ನೆನಪಿನಲ್ಲಿ ಬ್ರಿಟಿಷ್ ಸರ್ಕಾರ ಸ್ಥಾಪಿಸಿದ ಸ್ಮಾರಕ, ಅಂಗಾಮಿ ಸಮುದಾಯ ಹಿಂದಿನ ಕಾಲದಲ್ಲಿ ಕಟ್ಟಿದ್ದ ಮೊರುಂಗ್ (ಅಂದರೆ ಪುರುಷರ ಹಾಸ್ಟೆಲ್), ಪಂಚಾಯತಿ ಕಟ್ಟೆಗಳೆಲ್ಲ ಹಾಗೆಯೇ ಇವೆ.


ಇಂತಹ ರೋಚಕ ಇತಿಹಾಸವನ್ನು ಹೊಂದಿರುವ ಕೊನೊಮಾ ಪ್ರಾಕೃತಿಕ ಸೌಂದರ್ಯವನ್ನೂ ಹೇರಳವಾಗಿ ಪಡೆದಿದೆ. ಕೊನೊಮಾ ಕೋಟೆಯ ಮೇಲೆ ನಿಂತು ನೋಡಿದರೆ, ಸುತ್ತಲೂ ದಟ್ಟವಾದ ಅರಣ್ಯಗಳನ್ನು ಹೊದ್ದು ನಿಂತಿರುವ ಬೆಟ್ಟಗಳು. ಕೊನೊಮಾ ಇರುವ ಬೆಟ್ಟ ಮತ್ತು ಸುತ್ತಲಿನ ಬೆಟ್ಟಗಳ ನಡುವೆ ಇರುವ ಕಣಿವೆಯಲ್ಲಿ ಕಂಗೊಳಿಸುವ ಭತ್ತದ ಹೊಲಗಳು. ಕೋಟೆಯ ಕಲ್ಲುಗಳ ನಡುವೆ ಬೇರು ಬಿಟ್ಟು ಚಿಗುರಿರುವ ಬಳ್ಳಿಗಳಲ್ಲಿ ಅರಳಿರುವ ಬಣ್ಣಬಣ್ಣದ ಹೂಗಳು. ಮುಖವನ್ನು ತೆಳುವಾಗಿ ಸ್ಪರ್ಶಿಸಿ ಸಾಗುವ ಬಿಳಿ ಮೋಡಗಳು..

ದಿಟ್ಟ ಹಳ್ಳಿ ಕೊನೊಮಾದ ದಿಟ್ಟ ಸೌಂದರ್ಯ ಪದಗಳಿಗೆ ಮೀರಿದ್ದು..

• ಗೌರಿ ಲಂಕೇಶ್


ಹುಬ್ಬಳ್ಳಿ - ಧಾರವಾಡ ಪಾಕಡಾ ಪೋಲೀಸ್

ಕಮೀಷನರ್ ಔರಾದ್‌ಕರ್ ಹೆಸರಲ್ಲಿ 4 ಕೋಟಿ ನುಂಗಿದ ಎಸಿಪಿ ಪಾಟೀಲ್!


ಔರಾದ್‌ಕರ್

ಹುಬ್ಬಳ್ಳಿ ಧಾರವಾಡದ ಪೋಲೀಸ್ ಕಮೀಷನರ್ ರಾಘವೇಂದ್ರ ಔರಾದಕರ್ ತಾವೇ ವರ್ಗಾ ಮಾಡಿಸಿಕೊಂಡು ಅವಳಿನಗರ ತೊರೆದಿದ್ದಾರೆ. ಇದರ ಹಿಂದೆ ರಾಜಕಾರಣಿಗಳ ಲಾಬಿಯೂ ಇಲ್ಲ, ದೋ ನಂಬರ್ ದಂಧೆಯವರ ಕೈವಾಡವೂ ಇಲ್ಲ, ಬದಲಿಗೆ ಅವರದೇ ಇಲಾಖೆಯ ಖದೀಮ ಎಸಿಪಿಯೊಬ್ಬ ಔರಾದಕರ್ ಹೆಸರಲ್ಲಿ ನಾಲ್ಕು ಕೋಟಿ ಎತ್ತುವಳಿ ಮಾಡಿದ ಮಹಾನ್ ದರೋಡೆ ಪ್ರಕರಣ ಇದೆ.

ಎಂತಹ ಟಫ್ ಖಾಕಿ ಅಧಿಕಾರಿಗಳೂ ಇಲ್ಲಿನ ಅಕ್ರಮ ದಂಧೆ ಎದುರು ಖದರ್ ತೋರಿಸಲಾಗದೆ ಕೈಚೆಲ್ಲಿ ಹೋಗಿದ್ದೇ ಜಾಸ್ತಿ. ಈಗ ಆಗಿದ್ದೂ ಅದೇ. ರಾಘವೇಂದ್ರ ಔರಾದಕರ್ ಎಂಬ ಅಷ್ಟೇನೂ ಭ್ರಷ್ಟನಲ್ಲದ ಚಾಣಾಕ್ಷ ಪೋಲೀಸ್ ಕಮೀಷನರ್ ಸದ್ದಿಲ್ಲದೆ ಎದ್ದು ಹೋಗಿದ್ದಾರೆ. ಏನೋ ಸಾಧಿಸುತ್ತೇನೆ ಅಂತಾ ಬಂದು ಸರಿಯಾದ ಟೀಮ್ ಸಿಗದೆ ತಾನಾಗಿಯೇ ಎತ್ತಂಗಡಿ ಮಾಡಿಸಿಕೊಂಡಿದ್ದಾರೆ. ಯಾಕೆಂದರೆ ಅವಳಿ ನಗರದಲ್ಲಿ ಈಗಿರುವ ಪೋಲೀಸ್ ಅಧಿಕಾರಿಗಳ ದಂಡು ರಣ ಹಸಿವಿನಿಂದ ಕೂಡಿದೆ. ಒಬ್ಬರಿಗಿಂತ ಒಬ್ಬರು ಕಾಂಪಿಟೇಷನ್ ಎಂಬಂತೆ ಹಣ ಸುಲಿಗೆಗೆ ನಿಂತಿದ್ದಾರೆ. ಎಸಿಪಿ ಎನ್.ಎಸ್. ಪಾಟೀಲನಂತೂ ಔರಾದಕರ್ ಹೆಸರಿನಲ್ಲಿ ಸುಮಾರು 4 ಕೋಟಿಗೂ ಹೆಚ್ಚು ಹಣವನ್ನು ಅಕ್ರಮ ಕುಳಗಳಿಂದ ಪೀಕಿದ್ದಾನೆ.



ಪ್ರಹ್ಲಾದ್

ಆದರೆ ವಸೂಲಿ ಹಣ ಕಮೀಷನರ್ ಟೇಬಲ್‌ಗೆ ಮುಟ್ಟದೆ ಪಾಟೀಲನ ಟ್ರೆಜರಿ ಸೇರಿದೆ ಎಂದು ಖಾಕಿ ಪಿಂಡಗಳೇ ಬಾಯಿ ಬಡಿದುಕೊಳ್ಳುತಿವೆ. ಅಸಲಿಗೆ ಔರಾದಕರ್ ಅಷ್ಟು ಹಣ ತಗೊಂಡು ಹೋದನಾ? ಅಥವಾ ಪಾಟೀಲನ ಲಫಡಾ ಗೊತ್ತಿದ್ದೂ ಸುಮ್ಮನಾದರಾ? ಇಲ್ಲಾ ಅವರಿಗೆ ತಿಳಿಯದಂತೆ ಪಾಟೀಲ ಇಷ್ಟು ಹಣ ಎತ್ತಿದನಾ?

ಬೆಳಗಾಂವಿ ವಿಭಾಗದ ಐ.ಜಿ.ಯಾಗಿದ್ದ ರಾಘವೇಂಧ್ರ ಔರಾದಕರ್‌ರನ್ನು ಒತ್ತಾಯ ಪೂರ್ವಕವಾಗಿ ಇಲ್ಲಿಗೆ ತಂದು ಕೂರಿಸಲಾಗಿತ್ತು. ಹುಬ್ಬಳ್ಳಿಗೆ ಕಾಲಿಟ್ಟಾಗ ಸಮಸ್ಯೆಗಳ ಸಮುದ್ರವೇ ಅವರ ಮುಂದೆ ಇತ್ತು. ಯಾಕೆಂದರೆ ಹಿಂದಿನ ಕಮೀಷನರ ಶಿವಕುಮಾರ ಏನೂ ಸಾಧಿಸದೆ ತಿಂದು ತೇಗಿ ತಿಪ್ಪೆ ಸಾರಿಸಿ ಇಲ್ಲಿಂದ ಕಾಲ್ಕಿತ್ತಿದ್ದರು. ಜೊತೆಗೂ ಅಂತವರನ್ನೇ ಇಟ್ಟುಕೊಂಡಿದ್ದ. ಇವೆಲ್ಲದನ್ನು ಸರಿಪಡಿಸಿ ಕೊಂಡು ಔರಾದಕರ್‌ಗೆ ಇಲಾಖೆ ನಡೆಸುವುದು ಸುಲಭದ ಮಾತೇನು ಆಗಿರಲಿಲ್ಲ.

ಜನರ ನಿರೀಕ್ಷೆಗೆ ಹುಸಿಯಾಗದಂತೆ ಕಮೀಷನರ್ ಔರಾದಕರ್ ಇಲಾಖೆಯ ಸ್ವಚ್ಛತೆಗೆ ಕೈಹಾಕಿ 30ಕ್ಕೂ ಹೆಚ್ಚು ಭ್ರಷ್ಟ ಪೇದೆಗಳನ್ನು ಸಸ್ಪೆಂಡ್ ಮಾಡಿ ಮನೆಗೆ ಕಳುಹಿಸಿದ್ದರು. ಒಂದು ಕಾಲದಲ್ಲಿ ಅಕ್ರಮ ಸ್ಪಿರಿಟ್‌ನ ಕುಳವೆನಿಸಿಕೊಂಡಿದ್ದ ಹುಬ್ಬಳ್ಳಿ ಸಬರಮನ್ ಸ್ಟೇಷನ್ನಿನ ರಘುನಾಥ ಮಿಸ್ಕೀನ, ಧಾರವಾಡ ವಿದ್ಯಾಗಿರಿ ಠಾಣೆಯ ತೌಸೀಫ್, ಧಾರವಾಡ ಸಬರಮನ್‌ನ ಹಬೀಬ, ಮತ್ತವನ ಚೇಲಾ ಪಿಸಿಗಳು ಹಾಗೂ ವಸೂಲಿಯಲ್ಲಿ ಸೀನಿಯರ್ ಎನಿಸಿಕೊಂಡಿದ್ದ ಎನ್. ರಾಜಾನಂಥ ಸಿಆರ್ ಪೇದೆಗಳು ಮನೆ ಸೇರಿದರು. ಇದರಿಂದ ಇಲಾಖೆ ಸ್ವಲ್ಪಮಟ್ಟಿಗೆ ಸುಧಾರಿಸಿತ್ತಾದರೂ ಹೇಳಿಕೊಳ್ಳುವಂಥ ಅಧಿಕಾರಿಗಳು ಜೊತೆಗಿರದೆ ಹೋದದ್ದೆ ಔರಾದಕರ್‌ಗೆ ಸಮಸ್ಯೆಯಾಗಿತ್ತು. ಡಿಸಿಪಿಗಳಾದ ಚಾಂದಿ ರಾಮಸಿಂಗ್, ಬಟಕುರ್ಕಿ ಮತ್ತು 4 ಜನ ಎಸಿಪಿಗಳು ನುಂಗಣ್ಣಗಳೇ ಆಗಿದ್ದರಿಂದ ಬಂದ ದಾರಿಗೆ ಸುಂಕವಿಲ್ಲ ಎಂಬಂತಾಗಿ ಔರಾದಕರ್ ಇಲ್ಲಿಂದ ಕಾಲ್ಕಿತ್ತಿದ್ದಾರೆ.


ಕಸದಲ್ಲಿ ಕೋಟಿ ಹುಡುಕುವ ಪಾಟೀಲ


ಶಿವಕುಮಾರ್


ಅಸಲಿಗೆ ಈ ಸ್ಟೋರಿಯ 'ಹೀರೋ' ಬಕಾಸುರ ಎಸಿಪಿ ಎನ್.ಎಸ್. ಪಾಟೀಲ್! ಈಗ ಕಮೀಷನರ್ ಔರಾದಕರ್ ಹೆಸರಲ್ಲಿ ಅನಾಮತ್ತು 4 ಕೋಟಿ ಲೂಟಿ ಮಾಡಿದ 'ವೀರ' ಇವನೇ!

ಅವಳಿನಗರದ ಎಲ್ಲಾ ಹಿರಿಯ, ಕಿರಿಯ ಅಧಿಕಾರಿಗಳನ್ನು ಒಂದು ಕಡೆ ಇಟ್ಟು ತೂಗಿದರೆ ಎಸಿಪಿ ಎನ್.ಎಸ್. ಪಾಟೀಲನನ್ನು ಒಂದು ಕಡೆ ಇಟ್ಟು ತೂಗಬೇಕಾಗುತ್ತದೆ. ಬೀಡಾ ಅಂಗಡಿಯಿಂದ ಬಾರ್‌ನವರೆಗೂ, ಬುಕ್ಕಿಗಳಿಂದ ಬಿಲ್ಡರ್‌ಗಳವರೆಗೂ ಇವನೇ ಲಿಂಕ್ ಮಾಸ್ಟರ್. ಇಂತಹ ಕಳ್ಳನನ್ನು ಮೂರು ಸಾವಿರಮಠದ ಸ್ವಾಮಿ ಜಗದೀಶ ಶೆಟ್ಟರ ಸೇರಿಕೊಂಡು ಹುಬ್ಬಳ್ಳಿ ನಾರ್ಥ್‌ಗೆ ತಂದು ಕೂರಿಸಿದ್ದಾರೆ. ಮಾಂಸದ ಅಡ್ಡೆಗಳೇ ತುಂಬಿರುವ ಜನತಾ ಬಜಾರ, ಮಟ್ಕಾ, ಕ್ರಿಕೆಟ್ ಬೆಟ್ಟಿಂಗ್‌ನಂತಹ ದಂಧೆಗಳು ಪಾಟೀಲನ ಲಿಮಿಟ್‌ನಲ್ಲಿ ಇಂದಿಗೂ ರಾಜಾರೋಷವಾಗಿ ನಡೆಯುತ್ತಿವೆ.. ನಕಲಿ ಸರಾಯಿಯ ವಿಠ್ಠಲ ಅದ್ವಾ, ಸದಾನಂದ ಬದ್ದಿ ಸದಾ ಇವನ ಬಗಲಲ್ಲೆ ಇರುತ್ತಾರೆ. ತಿಂಗಳಿಗೆ ಕಡಿಮೆ ಅಂದರೂ 20 ಲಕ್ಷಕ್ಕೆ ತೂಗುವ ನಿಂಗಣ್ಣಾ ಉರ್ಫ್ ನುಂಗಣ್ಣಾ ಪಾಟೀಲ ಮೂಲತಃ ಬಿಜಾಪೂರದವನು. ಅಲ್ಲಿನ ಜನ ಇವತ್ತಿಗೂ ಇವನನ್ನು ನಯಾ ಪೈಸಾ ಅಂತಾನೆ ಕರೆಯುತ್ತಾರೆ.

ಕಮೀಷನರ್ ಔರಾದಕರ್ ಹುಬ್ಬಳ್ಳಿಗೆ ಎಂಟ್ರಿಕೊಟ್ಟು ಸ್ವಲ್ಪ ಟೈಟು ಎನಿಸಿದ್ದೆ ತಡಾ ಎನ್.ಎಸ್. ಪಾಟೀಲ ಹೊಸದೊಂದು ಸೀನ್ ಕ್ರಿಯೇಟ್ ಮಾಡಿ ಹುಬ್ಬಳ್ಳಿಯಲ್ಲಿ ಚಿಂತೆಯಿಲ್ಲದೆ ನಡೆಯುವ ನಕಲಿ ಸಾರಾಯಿ, ಸ್ಪಿರಿಟ್, ಕ್ರಿಕೆಟ್ ಬೆಟ್ಟಿಂಗ್, ಮಟ್ಕಾ ಹಾಗೂ ಮೈಮಾರುವ ಮಾಂಸದಡ್ಡೆಯ ಮಾಲಕರನ್ನು ಮೀಟಿಂಗ್ ಸೇರಿಸಿ ಕಮೀಷನರ್ ಹೆಸರಿಗೆ 30 ಲಕ್ಷ ಮಂತ್ಲಿ ಮಾಮೂಲಿ ಫಿಕ್ಸ್ ಮಾಡಿಬಿಟ್ಟಿದ್ದ. ಮೊದಲಿಗೆ ಹಣ ಜಾಸ್ತಿಯಾಯಿತು ಅಂತಾ ಇವರೆಲ್ಲಾ ಕಿರಿಕ್ ಮಾಡಿದರೂ, ಸಾಹೇಬ್ರು ಸ್ಟ್ರಾಂಗ್ ಅಂತಾ ಬೆದರಿಸಿ ಅದೇ ರೇಟಿಗೆ ಡೀಲ್ ಕುದುರಿಸಿಕೊಂಡ. ತಿಂಗಳ ಮೊದಲಿಗೆ ಹಣ ಬಂದು ತನ್ನ ಕೈಸೇರಬೇಕು ಅಂತಾ ವಾರ್ನ್ ಮಾಡಿದ್ದನಂತೆ. ಆ ಪ್ರಕಾರ ಪ್ರತಿ ತಿಂಗಳು 30 ಲಕ್ಷ ನುಂಗಣ್ಣಾ ಎಸಿಪಿ ಪಾಟೀಲನ ಜೇಬು ಸೇರುತ್ತಿತ್ತು. ಅಸಲಿಗೆ ಈ ಡೀಲಿನ ಸುದ್ದಿ ಔರಾದಕರ್‌ಗೆ ಗೊತ್ತೆ ಇರಲಿಲ್ಲವಂತೆ. ಹಾಗಂತ ವಸೂಲಿಗಿಳಿದಿರುವ ಬಹುತೇಕ ಖಾಕಿಗಳು ಹೇಳುತ್ತಾರೆ. ಔರಾದಕರ್ ಅವಳಿನಗರದ ಕಮೀಷನರ್ ಆಗಿ 14 ತಿಂಗಳು ಇದ್ದು ಹೋಗಿದ್ದಾರೆ. ಹಾಗಾದರೆ ಅವರ ಹೆಸರಿನಲ್ಲಿ ವಸೂಲಾದ 4 ಕೋಟಿಗೂ ಹೆಚ್ಚು ಹಣ ಎಲ್ಲಿ ಹೋಯಿತು?



ಎನ್.ಎಸ್. ಪಾಟೀಲ ಔರಾದಕರ್‌ಗೆ ಮುಟ್ಟಿಸಿದ್ದನಾ ಇಲ್ಲವೋ ಅನ್ನುವ ವಿಷಯ ಈಗ ಖಾಕಿ ಹೆಗ್ಗಣಗಳ ವಲಯದಲ್ಲಿ ಬರಪೂರ ಚರ್ಚೆಗಿಳಿದಿದೆ. ಇದನ್ನು ಕೇಳಿ ಮಂತ್ರಿ ಶೆಟ್ಟರ್, ಸಂಸದ ಪ್ರಹ್ಲಾದ ಜೋಶಿ ಔರಾದಕರ್ ತಿಂದಿಲ್ಲಾ ಅಂದ್ರೆ ನಾವಾದ್ರು ತಿನ್ನೋಣಾ ಅಂತಾ ಪಾಟೀಲನ ಮುಂದೆ ಬಾಯಿ ತೆರೆದು ನಿಂತಿದ್ದಾರೆ. ಹೊಸ ಮಂತ್ರಿ ಸಿ.ಸಿ. ಪಾಟೀಲನು ಈ ಹೇಸಿಗೆಯಲ್ಲಿ ನನಗೂ ಒಂದು ಪಾಲು ಅಂತಿದ್ದಾನೆ.



ಎನ್.ಎಸ್. ಪಾಟೀಲ

ಎನ್.ಎಸ್. ಪಾಟೀಲ ಹಣ ಸುಲಿಗೆಯಲ್ಲಿ ಅ
ನಿಸ್ಸೀಮನಲ್ಲ, ಜೊತೆಗೆ ಅಕ್ರಮ ದಂಧೆ ನಡೆಸುವ ಸಾವಜಿ
ಜೊತೆಗೆ ಸೇರಿಕೊಂಡು ಪಟೇಗಾರ ಭಾಷೆಯನ್ನು ಕೂ
ಪಕ್ಕವಾಗಿ ಕಲಿತಿದ್ದಾನೆ. ಎಲ್ಲಾ ಡೀಲ್ ಕುದುರಿಸುವು
ಆ ಸಾವಜಿ ಭಾಷೆಯಲ್ಲೆ. ತಾನು ಬದುಕೋಕೆ ಯಾರಿಗಾದ
ಬಕೀಟು ಹಿಡಿಯುವ ಪಾಟೀಲ ಹುಬ್ಬಳಿಯ ಎಲ್ಲ ಅಕ್ರ
ದಂಧೆಗಳನ್ನು ಪೋಷಿಸುತ್ತಿರುವುದು ಬಿಜೆಪಿಯ ಎಲ್ಲ
ಪಿಂಡಗಳಿಗೆ ಗೊತ್ತಿದ್ದರೂ ಗೂಟಾ ಬಡಿದುಕೊಂ
ಸುಮ್ಮನಿದ್ದಾರೆ. ಯಾಕೆಂದರೆ ಈ ಎಲ್ಲ ದಂಧೆ ನಡೆಸೋ
ಬಿಜೆಪಿಗಳು.

ಒಟ್ಟನಲ್ಲಿ ದರೋಡೆಕೋರ ಪಾಟೀಲ್ ಕಮೀಷನ
ಒಬ್ಬರನ್ನೇ ಯಾಮಾರಿಸಿ ಕಳುಹಿಸಿದ್ದಾನೆ.
ತಿಂಗಳಲ್ಲಿ ಇದಾವುದರ ಪರಿವೆಯೇ ಇಲ್ಲ
ಔರಾದ್‌ಕರ್ ಅಧಿಕಾರ ನಡೆಸಿದ್ದರಾ? ಅಥ
ಅವರಿಗೂ ಇದರಲ್ಲಿ ಪಾಲು ಸಂದಿದೆಯ
ಎಂಬ ಪ್ರಶ್ನೆ ಅವಳಿ ನಗರದ ಜನರ
ಕಾಡುತ್ತಿದೆ. ಈ ಬಗ್ಗೆ ಇಲಾಖಾ ತನಿಖೆಯ
ಬೇಕಿದೆ. ಇಲ್ಲದಿದ್ದರೆ ಎಸಿಪಿ ಪಾಟೀಲ ತಾ
ಮಾಡಿರುವ ಹಫ್ತಾ ವಸೂಲಿಯನ್ನು ನಗ
ಬಹುಮಾನ ಎಂದು ಭಾವಿಸಿ ನಂತರ
ಸಾಧನೆಗೆ ಪ್ರಶಸ್ತಿ ಕೇಳುತ್ತಾನಷ್ಟೆ!

• ಹುರುಳಿಕುಪ್ಪಿ ವಿನ
vinaylankesh@gmail.c

ಎಚ್ಚರ ತಪ್ಪಿರುವ ಡಿಸಿಪಿಗಳು


ಚಾಂದಿರಾಮ

ಇದ್ದ ಜಾಗೆಯಲ್ಲಿಯೇ ಮುಂದುವರೆಯಲು ಮಂತ್ರಿ ಜಗದೀಶ ಶೆಟ್ಟರ್, ಎಂ.ಪಿ ಪ್ರಹ್ಲಾದ ಜೋಶಿಗೆ ತಲಾ 12 ಲಕ್ಷ ಪೇಮೆಂಟ್ ಮಾಡಿ ಎರಡನೇ ಅವಧಿಗೂ ಒಂದೇ ಸೀಟಿಗೆ ತಳವೂರಿರುವ ಡಿಸಿಪಿ ಚಾಂದಿ ರಾಮ್ ಸಿಂಗ್ ಹುಬ್ಬಳ್ಳಿ ಬಿಟ್ಟು ಹೊರಡುವ ಮಾತೇ ಇಲ್ಲಾ ಅನ್ನುತ್ತಿದ್ದಾರೆ. ಅವಳಿನಗರದ ವೇಶ್ಯಾವಾಟಿಕೆಯ ದಂಧೆಗೆ ಈಗ ಯಾರ ಅಡ್ಡಿಯೂ ಇಲ್ಲದಂತಾಗಿದೆ. ಪೀಸ್‌ನಿಂದ ಹಿಡಿದು ಪಿಂಪ್‌ತನಕ ಎಲ್ಲರೂ ಸಂಬಂಧಿಕರಂತೆ ಬಂದು ಸಾಹೇಬರ ಆರೋಗ್ಯ ವಿಚಾರಿಸಿ ಹೋಗುತ್ತಾರೆ.


ಬಟಕುರ್ಕಿ

ಇನ್ನೂ ಕ್ರೈಮ್ ಡಿಸಿಪಿ ಬಟಕುರ್ಕಿ ಪಕ್ಕಾ ಅಂಜುಬುರುಕ. ಅದ್ಯಾವ ಪುರುಷಾರ್ಥಕ್ಕೆ ಡಿಸಿಪಿ ಆದರೋ ಗೊತ್ತಿಲ್ಲ. ಕೊಲೆ, ಆತ್ಮಹತ್ಯೆಗಳಾದ ದಿನವನ್ನು ಹಬ್ಬದಂತೆ ಆಚರಿಸುವ ಬಟಕುರ್ಕಿ ಅವುಗಳ ಪ್ರಕರಣ ದಾಖಲಿಸಿಕೊಳ್ಳದೆ ಅಸಾಧಾರಣ ಕೇಸುಗಳೆಂದು ಬರೆದು ಇಡುತ್ತಾರೆ. ಇಂತಹ ಪ್ರಕರಣಗಳ ಗುಡ್ಡೆಯೇ ಇವರ ಕಚೇರಿಯೊಳಗಿದೆ. ಕಳ್ಳರೊಂದಿಗೂ ವ್ಯವಹಾರ ಕುದುರಿಸುವ ಛಾತಿ ಇವರಿಗಿದೆಯಂತೆ. ಈ ಹಿಂದೆ ಇದೇ ಹುಬ್ಬಳ್ಳಿಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದ ಬಟಕುರ್ಕಿ ಈಗ ಚಾಂದಿರಾಮ ಸಿಂಗ್ ಜೊತೆ ಸೇರಿಕೊಂಡು ಹುಬ್ಬಳ್ಳಿಯನ್ನು ಹಳ್ಳ ಹಿಡಿಸಿದ್ದಾನೆ.

ನಿಷ್ಕ್ರಿಯ ಎಸಿಪಿಗಳು


ಶ್ರೀನಾಥ ಜೋಶಿ

ಶ್ರೀನಾಥ ಜೋಶಿ ಎಂಬ ಸೌತ್ ಎಸಿಪಿ ಪಕ್ಕಾ ನಿಷ್ಕ್ರಿಯ. ತನ್ನ ಲಿಮಿಟ್ಸ್‌ನಲ್ಲಿ ಬರುವ ಠಾಣೆಗಳನ್ನು ಒಂದು ರೌಂಡ್ ಸುತ್ತಿ ಬಂದರೆ ಸುಸ್ತಾಗುತ್ತಾರೆ, ಕಿಸೆಯನ್ನೂ ಸೇಫು ಮಾಡಿಕೊಳ್ಳುತ್ತಾರೆ. ಇವನ ಲಿಮಿಟ್ಸ್‌ಗೆ ಬರುವ ಘಂಟಿಕೇರಿಯ ಎಸ್.ಐ. ಪುಷ್ಪಲತಾ ಮಾಂಸದಡ್ಡೆಗಳ ಬಾಗಿಲು ಹಾಕಿಸಲು ಮನಸ್ಸು ಮಾಡುತ್ತಿಲ್ಲ, ಈಕೆ ಕಳ್ಳ ಮಾಲು ಸಿಕ್ಕಾಗಲೂ ಪಾಲು ಕೇಳುವ ಜಗಳ ತೆಗೀತಾಳಂತೆ. ಪಕ್ಕಾ ಸರಾಫ ಗಲ್ಲಿಯಲ್ಲೇ ಇರುವ ಈಕೆಯ ಠಾಣೆಯಲ್ಲಿ ಸಿಗುವದೇ ಬಂಗಾರದ ಕಳ್ಳ ಮಾಲು.


ಇನ್ನು ಬೆಂಡಿಗೇರಿ ಠಾಣೆಯ ಪ್ರಾಣೇಶ ಸೆಟ್ಲಮೆಂಟಿನ ಬಿಜವಾಡನ ಸಂತತಿಗಳಾದ ರಜನಿ ಮತ್ತು ಶಶಿ ಬಿಜವಾಡಗಳೊಂದಿಗೆ ಸೇರಿಕೊಂಡು ಕಳ್ಳಬಟ್ಟಿಗೆ ಬೇಷರತ್ ಬೆಂಬಲವಾಗಿ ನಿಂತಿದ್ದಾರೆ. ಧಾರವಾಡದ ಎಸಿಪಿ ಎ.ಐ. ಪಾಟೀಲ ಕೂತಲ್ಲೆ ಬರ್ತದೆ ಯಾಕೆ ಟೆನ್‌ಷನ್ನು ಅಂತಾರೆ. ವಿದ್ಯಾಗಿರಿಯ ವಿಜಯಕುಮಾರ ಬಿರಾದಾರ, ಶಹರ ಠಾಣೆಯ ಬರ್ಬಾ ಶೆಟ್ಟಿ, ಸಬರಮನ್‌ನ ಭರತರೆಡ್ಡಿ ತಿಂಗಳಿಗೆ ಇಷ್ಟು ಅಂತಾ ಎ.ಐ. ಪಾಟೀಲನಿಗೆ ತಂದುಕೊಟ್ಟು ತಾವೊಂದಿಷ್ಟು ತಿಂದು ಸುಮ್ಮನಾಗುತ್ತಾರೆ. ಟ್ರಾಫಿಕ್‌ನ ಡಾ. ಸಂಜೀವ ಪಾಟೀಲ ಡೆಂಟಿಸ್ಟ್ ಆಗಿ ಹಲ್ಲು ಕೀಳುವ ಬದಲು ಇಲ್ಲಿ ಬಂದು ಹಣ ಕೀಳುತ್ತಿದ್ದಾರೆ. ಪಿ.ಎಸ್.ಐ.ಗಳು ಮಾಡಬೇಕಾದ ಕೆಲಸವನ್ನು ತಾನೇ ಮಾಡಿ ಅವರಿಗೂ ಕೆಲಸ ಇಲ್ಲದಂತೆ ಮಾಡುತ್ತಿದ್ದಾರೆ. ಇವರ ಕೈಕೆಳಗೆ ಕೆಲಸ ಮಾಡುವ ಹುಬ್ಬಳ್ಳಿ ನಾರ್ಥ್‌ನ ಶಂಕರ ಮಾರಿಹಾಳ ಬೆಳಗಾವಿಯ ಆನ್‌ಲೈನ್ ಲಾಟರಿ ಕೇಸಿನಲ್ಲಿ ನೌಕರಿ ಕಳೆದುಕೊಂಡು ಎಂದೋ ಮನೆ ಸೇರಬೇಕಾಗಿತ್ತು. ಪಕ್ಕಾ ಮರಾಠಿ ಕೇಸರಿ ಪಿಂಡದಂತೆ ವರ್ತಿಸುವ ಇವನ ಫೈಲ್ ಇವತ್ತಿಗೂ ಲೋಕಾಯುಕ್ತ ಎಡಿಜಿಪಿ ಆರ್.ಕೆ. ದತ್ತಾ ಟೇಬಲ್ ಮೇಲಿದೆ. ಅದ್ಯಾವಾಗ ತನಿಖೆ ಆಗುತ್ತದೋ ಗೊತ್ತಿಲ್ಲ.

ಈ ಕಡೆ ಸೌತ್‌ನ ಸಂದಿಗವಾಡ 3 ಪೆಟ್ರೋಲ್ ಬಂಕಿನ ಮಾಲೀಕ. ಧಾರವಾಡದ ಲಕ್ಕಮನಹಳ್ಳಿಯಲ್ಲಿ ಕೋಟ್ಯಾಂತರ ರೂ. ಬೆಲೆಬಾಳುವ ಒಂದು ಫಾರ್ಮ್ ಹೌಸ್ ಮಾಡಿಕೊಂಡಿರುವ ಸಾಹೇಬರು ಈ ಹಿಂದೆ ಹುಬ್ಬಳ್ಳಿ ಗ್ರಾಮೀಣ ಠಾಣೆಯಲ್ಲಿ ಬರಪೂರ ಐದು ವರ್ಷ ಸುಲಿದು ಹೋಗಿದ್ದಾರೆ.

...ರಡು ತಲೆ ಹಾವು ...ಜಗದೀಶ ಮತ್ತು ...ೂಲೀಸ್ ಲಿಂಕ್

...ಹುಡುಕುವುದು, ಸಾವಿರಾರು ವರ್ಷಗಳ ...ಐತಿಹಾಸಿಕ ವಸ್ತುಗಳನ್ನು ಮಾರಾಟ ಮಾಡುವುದು ... ಪಾಟೀಲ ಎಂಬ ಆಸಾಮಿಯ ಮೂಲ ... ಈ ದಂಧೆಗೆ ಪೊಲೀಸರ ಮಧ್ಯಸ್ಥಿಕೆ ಕೂಡಾ ...ಜ್ಯದ ಯಾವುದೇ ಮೂಲೆಯಲ್ಲಿ ಎರಡು ...ತ್ರ, ಆಮೆಗಳ ಸರಬರಾಜು, ನಕಲಿ ನಾಗಮಣಿ, ... ಹಳೇ ಕಾಲದ ಕೆತ್ತನೆ ಮೂರ್ತಿಗಳು, ಹಳೆಯ ... ಬೈಬಲ್, ಗೀತಾಗಳನ್ನು ಲಕ್ಷ ಕೋಟಿಗಳಲ್ಲಿ ... ಮಾಡುವ ಒಂದು ವ್ಯವಸ್ಥಿತ ಜಾಲ ಈ ...ರ ಸುತ್ತ ಇದೆ. ಗಿರಾಕಿಗಳನ್ನು ಹಿಡಿದುಕೊಂಡು ...ಟೀರೆಯವರಿಂದ ಮಾರಿಸಿ ನಂತರ ಅವರನ್ನು ...ಗೆ ಹಿಡಿದುಕೊಟ್ಟು ಡೀಲ್ ಕುದುರಿಸಿ ಅದರಲ್ಲಿ ...ೊಡೆಯುವುದೇ ಜಗದೀಶನ ಸಿಸ್ಟಮ್? ಸ್ಕೀಂ ...ರಾಜ್ಯದ ಬಹುತೇಕ ಎಸ್.ಪಿ. ಲೆವೆಲ್‌ನ ...ಗಳು ಜಗದೀಶನ ಜೊತೆ Give & take ...ಸ ಮಾಡುತ್ತಿದ್ದಾರಂತೆ.

...ಮ ಕುಳಗಳಿಗೆ ...ಪೊಲೀಸರೇ ...ಷ್ಠಿಕ ಟಾನಿಕ್....



...ಬ್ಬಳ್ಳಿ ಧಾರವಾಡಗಳಲ್ಲಿ ಇಂತಹುದು ನಡೆಯಲ್ಲ ...ಲ್ಲಾ ದೋ ನಂಬರ್ ದಂಧೆಗಳು ಇಲ್ಲಿ ಮುಕ್ತವಾಗಿ ...ವೆ. ಯಾಕೆಂದರೆ ಇವುಗಳನ್ನು ನಡೆಸುವವರಿಗೆಲ್ಲಾ ...ನಿಕ್ ನೀಡಿ ಬೆಳೆಸುವವರೇ ಇಲ್ಲಿಯ ಖಾಕಿಗಳು.


ನಗರದ ಕೆಲವು ಅಕ್ರಮ ದಂಧೆಕೋರರ ...ಲ್ಲಿದೆ ಓದಿ:

...ಂದಕ್ಕೆ ಕೋಟಿ ರೂ. ಕ್ರಾಸ್ ಮಾಡುವ ಮಟ್ಕಾ ... ಪರಶುರಾಮ ನೇತ್ರಾಣಿ, ಸಂಜೀವ ಕಲಾಲ, ...ದ ತೇಜಸ್ವಿನಿ ನಗರದ ದಾವಲ್‌ಗಳಿಗೆ ಯಾರೂ ...ಲೇ ಇಲ್ಲ. ಕ್ರಿಕೆಟ್ ಬುಕ್ಕಿಗಳಾದ ವೀರು ಕಟಾರೆ, ...ಬೀಬ ಅಂಡ್ ಬ್ರದರ್ಸ್, ಸ್ಟೇಷನ್ ರೋಡಿನ ... ಸಂತೋಷ, ದೇವಗನ್, ಹಳೇ ಹುಬ್ಬಳ್ಳಿಯ ... ರಫೀಕ, ಧಾರವಾಡದ ಉಪ್ಪಿಟ್ಟ ಮಾಂತ್ಯಾ ... ಹತ್ತಾರು ಲಕ್ಷಗಳಲ್ಲಿ ತೂಗುತ್ತಿದ್ದಾರೆ, ಸ್ಪಿರಿಟ್ ... ಸದಾನಂದ ಬದ್ದಿ, ಕಾಶಿ ಖೋಡೆ, ಜಯರಾಮ ...ಶ್ರೀಕಾಂತ ಬದ್ದಿ, ಕರೀಮ ಹೇಳಿದ ಜಾಗೆಗೆ ...ತಾ ಸ್ಪಿರಿಟ್ ತಂದು ಇಳಿಸುತ್ತಾರೆ. ಶೇಖರ ... ಗಿರಿ ಹಬೀಬ ನೀವು ಹೇಳಿದ ಜಾಗೆಯಲ್ಲೇ ...ದ್ಯ ತಯಾರಿಸಿ ಕೊಡುತ್ತಾರೆ. ನಕಲಿ ಸೀಮೆಎಣ್ಣೆ ...ಲ್ಲಿ ಕೋಟಿಯಲ್ಲಿ ತೂಗುತ್ತಿರುವ ನವನಗರದ ...ಮತ್ತು ಮಂಜ್ಯಾ ಹೊಸನೂರ, ಧಾರವಾಡದ ...ಮರಶೆಟ್ಟಿ, ಶೀಲವಂತರ ಇದೇ ದಂಧೆಯಲ್ಲಿ ... ಮುಲಾಜಿಲ್ಲದೆ ಮಾಮೂಲು ಕೊಟ್ಟು ...ದ್ದಾರೆ.

...ಪ ಅಕ್ಕಿ ಸಾಗಾಣಿಕೆಯಲ್ಲಿ ರಮೇಶ ಬಾಫಣಾ, ... ಬಕ್ಷಿ ಫ್ಯಾಮಿಲಿಗಳವರು ಪುರುಸೊತ್ತಿಲ್ಲದೆ ...ತ್ತಿದ್ದಾರೆ.

...ಗೆ ಯಾರು ಯಾವ ದಂಧೆ ಮಾಡುತ್ತಾರೆ ಅಂತಾ ... ರೆಕಾರ್ಡ್ ಹೇಳುತ್ತಿವೆ. ಅಷ್ಟೆಲ್ಲಾ ಇದ್ದರೂ ...ರಂತಹ ಟಫ್ ಅಧಿಕಾರಿ ಒಂದು ವರ್ಷಕ್ಕೂ ...ಲ ಕಮೀಷನರ್ ಹುದ್ದೆಯಲ್ಲಿ ಸುಮ್ಮನೆ ಕುಳಿತು ...? ಅಥವಾ ಡಿಸಿಪಿ ಚಾಂದಿರಾಮ ಸಿಂಗ, ..., ಎಸಿಪಿ ಎನ್.ಎಸ್. ಪಾಟೀಲನಂತಹ ಮಸೂಲಿ ...ಪಾಲಿಟಿಕಲ್ ಪ್ರೆಷರ್‌ಗೆ ಅಂಜಿದರಾ? ಎಲ್ಲಾ ...ದಂಧೆಗಳಲ್ಲಿ ಹೆಚ್ಚಿರುವ ಬಿಜೆಪಿಗಳು ಬಿರಾದಕರ್ ...ಸಿ ಮಾಡಿದ್ರಾ?

ಹೆಲಿಕಾಪ್ಟರ್ ಕೊಳ್ಳಲು APMCಗಳನ್ನು ಬೋಳಿಸಿದ ಸಚಿವ ತಂಗಡಗಿ



ದೀಪಾವಳಿ ಹೊತ್ತಿಗೆ ಕೃಷಿ ಮಾರುಕಟ್ಟೆ ಮತ್ತು ಸಣ್ಣ ಕೈಗಾರಿಕಾ ಸಚಿವ ಶಿವರಾಜ ತಂಗಡಗಿ ತನ್ನ ಪತ್ನಿ ವಿದ್ಯಾಳೊಡನೆ ಹೆಲಿಕಾಪ್ಟರ್‌ನಲ್ಲಿ ಹಾರಾಡಲಿದ್ದಾನೆ. ಕಳೆದ ದಶಕದಲ್ಲಿ ಮಾಜಿ ಸಚಿವ, ದಿವಂಗತ ಎಸ್.ಆರ್. ಕಾಶಪ್ಪನವರ್ ಕಾರಿನ ಡ್ರೈವರ್ ಆಗಿದ್ದ ಶಿವರಾಜ್ ತಂಗಡಗಿ ಈ 'ಎತ್ತರ'ಕ್ಕೆ ಏರಿರುವುದು ರಾಜ್ಯದ ಕೃಷಿ ಮಾರುಕಟ್ಟೆಗಳು, ಸಕ್ಕರೆ ಕಾರ್ಖಾನೆಗಳನ್ನು ಬೋಳಿಸಿ ಬೋಳಿಸಿಯೇ.

ಕಳೆದ ಚುನಾವಣೆಯಲ್ಲಿ ಕೊಪ್ಪಳ ಜಿಲ್ಲೆಯ ಕನಕಗಿರಿ ಕ್ಷೇತ್ರದಿಂದ ಪಕ್ಷೇತರನಾಗಿ ಗೆದ್ದ ಶಿವರಾಜ್ ತಂಗಡಗಿ ಅತಂತ್ರ ಸರ್ಕಾರಕ್ಕೆ ಬೆಂಬಲ ನೀಡಿ, 'ಆಪರೇಷನ್ ಕಮಲ'ದಲ್ಲಿ ಕೋಟಿ ಬಾಚಿದ್ದ. ಮುಂದೆ ಸಕ್ಕರೆ ಮತ್ತು ಎಪಿಎಂಸಿ ಖಾತೆ ಗಿಟ್ಟಿಸಿದ ಈ ಪರಮಭ್ರಷ್ಟ ಎಪಿಎಂಸಿಗಳ ಭೂಮಿಯನ್ನೆಲ್ಲ ಬ್ಯಾಂಕ್‌ಗಳಿಗೆ ಅಡಾ ಇಟ್ಟು ಸಾಲ ಎತ್ತಿ ಅದರಲ್ಲೂ ಮುಂಡಾಮೋಚಿದ್ದಾನೆ. ಸ್ಥಳೀಯ ರೈಸ್‌ಮಿಲ್‌ಗಳನ್ನೂ ಸುಲಿಯುತ್ತಿರುವ ಈತನ ಸಹೋದರರ ಹಾವಳಿಯಿಂದ ಕನಕಗಿರಿ ಕ್ಷೇತ್ರವೇ ಎಕ್ಕುಟ್ಟಿ ಹೋಗಿದೆ.

ಮೊನ್ನೆಯ ಸಂಪುಟ ಪುನರ್‌ರಚನೆಯಲ್ಲಿ ಅರವಿಂದ ಲಿಂಬಾವಳಿ ಎತ್ತಂಗಡಿಯಾದರೂ ಈ ತಂಗಡಗಿ ಮಾತ್ರ ಹಾಗೇ ಇದ್ದಾನೆ. ಈಗ ಸಕ್ಕರೆ ಖಾತೆ ಹೋಗಿ ಸಣ್ಣ ಕಾರ್ಖಾನೆ ಖಾತೆ ಬಂದಿದೆ. ಜೊತೆಗೆ ದರೋಡೆ ಮಾಡಲು ಎಪಿಎಂಸಿಗಳಿದ್ದೇ ಇವೆ.



ಎಪಿಎಂಸಿ: ಮಂತ್ಲಿ ವಸೂಲಿ

ಮೊದಲಿಗೆ ತಂಗಡಗಿ ಸಚಿವನಾದ ಕೂಡಲೇ ಕಣ್ಣುಹಾಕಿ ರಾಜ್ಯಾದ್ಯಂತ ಭಾರೀ ವಹಿವಾಟುಗಳಿರುವ ಎಪಿಎಂಸಿಗಳ ಪಟ್ಟಿ ತರಿಸಿದ. ಎಪಿಎಂಸಿಗಳೆಂದರೆ ವಂಚಕ ವರ್ತಕರ ಕೂಟಗಳೇ ಆಗಿರುವುದರಿಂದ ತಂಗಡಗಿಯ 'ಪ್ಲಾನು' ಯಶಸ್ವಿಯಾಯಿತು. ಭಾರೀ ವಹಿವಾಟಿನ ತುರುವೇಕೆರೆ, ಗುಬ್ಬಿ, ದಾವಣಗೆರೆ, ಯಶವಂತಪುರ, ಗಂಗಾವತಿ, ಸವದತ್ತಿ ಮಹಾಲಿಂಗಪುರ ಮುಂತಾದ ಎಪಿಎಂಸಿಗಳ ವರ್ತಕರನ್ನು 'ದಾರಿಗೆ' ತಂದ ತಂಗಡಗಿ ಈ ಏಳೆಂಟು ಎಪಿಎಂಸಿಗಳಿಂದಲೇ ತಿಂಗಳಿಗೆ 10 ಕೋಟಿಗೂ ಹೆಚ್ಚಿನ ಆಮದಾನಿ ಸೃಷ್ಟಿಸಿಕೊಂಡ. ಇನ್ನು ನೂರಾರು ಸಣ್ಣಪುಟ್ಟ ಎಪಿಎಂಸಿಗಳಿಂದ ಮಾಮೂಲಿ ಮಂತ್ಲಿ ಬರುತ್ತಲೇ ಇದೆ. ಬಿ ಗ್ರೇಡ್ ಎಪಿಎಂಸಿಗಳನ್ನು ಎ ಗ್ರೇಡ್‌ಗೆ ಏರಿಸುವಾಗಲೂ ತಂಗಡಗಿ ಮಹಾಶಯ ಮತ್ತೊಂದಿಷ್ಟು ಕೋಟಿಗಳನ್ನು ಜೇಬಿಗಿಳಿಸಿದ.

ಇಷ್ಟು ಸಾಲದೆಂಬಂತೆ ಎಪಿಎಂಸಿ ಅಧೀನದಲ್ಲಿರುವ ಖಾಲಿ ಜಾಗಗಳನ್ನು ಬ್ಯಾಂಕ್‌ಗಳಿಗೆ ಅಡಾ ಇಟ್ಟು ಸಾಲ ಎತ್ತಿ 'ಅಭಿವೃದ್ಧಿ' ಕಾರ್ಯ ಮಾಡುವ ಕಳ್ಳ ಯೋಜನೆಯೊಂದನ್ನು ತಂಗಡಗಿ ಶುರು ಮಾಡಿದ. ಇಲ್ಲೂ ತಂಗಡಗಿ ಅದ್ಯಾವ ಪರಿ ನುಂಗಿದ ಎಂಬುದಕ್ಕೆ ಗಂಗಾವತಿ ಎಪಿಎಂಸಿಯ ಕತೆಯೊಂದೇ ಸಾಕು.

ಗಂಗಾವತಿ ಎಪಿಎಂಸಿಯ 143.21 ಎಕರೆ ಜಾಗವನ್ನು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಅಡಾ ಇಟ್ಟ ತಂಗಡಗಿ 16.50 ಕೋಟಿ ಸಾಲ ಎತ್ತಿದ. ಈ ಹಣ ಉಪಯೋಗಿಸಿ ಎಪಿಎಂಸಿ ರಸ್ತೆ ಸಮುದಾಯ ಭವನ ಅಭಿವೃದ್ಧಿಪಡಿಸುವುದಾಗಿ ಹೇಳಿದ. ಆಯ್ತು, ಅರೆಬರೆ ಅಭಿವೃದ್ಧಿಯೂ ಆಯ್ತು ಎನ್ನಿ. ಆದರೆ ಈ ಅಭಿವೃದ್ಧಿಗೆ ಈ ಕಳ್ಳ ಬಳಸಿದ್ದು ಶಾಸಕರ ಫಂಡ್ ಹಣವನ್ನು! ಅಂದರೆ ಒಂದೇ ಕೆಲಸಕ್ಕೆ ಎರಡು ನಿಧಿಗಳಿಂದ ಹಣ ಬಳಸಿರುವುದಾಗಿ ತೋರಿಸಿದ್ದಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಸಿಂಡಿಕೇಟ್ ಬ್ಯಾಂಕಿನ ಎಪಿಎಂಸಿ ಸಾಲದ ಖಾತೆ (ನಂ. 18028320000045) ಯಿಂದ ಜುಲೈ 19,2010 ರವರೆಗೆ 16 ಕೋಟಿಗೂ ಹೆಚ್ಚಿನ ಹಣವನ್ನು ಡ್ರಾ ಮಾಡಿದ್ದು ಈ ಹಣ ಎಲ್ಲಿ ಹೋಯಿತೆಂಬುದೇ ನಿಗೂಢವಾಗಿದೆ. ಹಾಗೆಯೇ ಈ ಮೊದಲಿಗೆ ಸಾಲದ ಮೊತ್ತ 16 ಕೋಟಿಗೆ ಬಂದ ಬಡ್ಡಿ ಹಣವೂ ತಂಗಡಗಿ ಪಾಲಾಗಿದೆ. ಹೀಗೆ ಹಲವಾರು ಎಪಿಎಂಸಿಗಳ ಜಾಗಗಳನ್ನು ಒತ್ತೆ ಇಟ್ಟು ಸಾಲ ಎತ್ತಿರುವುದರಿಂದ ಈ ಜಾಗಗಳು ಸದ್ಯದಲ್ಲೇ ಬ್ಯಾಂಕ್‌ಗಳ ಪಾಲಾಗಲಿವೆ. ಹೇಗಿದೆ ನೋಡಿ ಎಪಿಎಂಸಿ ಸಚಿವನ ಹಗಲುದರೋಡೆ? ತನ್ನ ಇಲಾಖೆಯನ್ನೇ ಮಾರಿಕೊಳ್ಳುವ ಈ ದರೋಡೆಕೋರನಿಗೆ ಈಗ ಸಣ್ಣ ಕೈಗಾರಿಕೆ ಖಾತೆ ನೀಡಿ ಮತ್ತಷ್ಟು ಕಬಳಿಕೆಗೆ ಅವಕಾಶ ಮಾಡಿಕೊಡಲಾಗಿದೆ.

ಸಕ್ಕರೆಗೂ ಬಾಯಿ ಹಾಕಿದ!

ಎಸ್.ಎಂ. ಕೃಷ್ಣ ಸರ್ಕಾರದ ಅವಧಿಯಲ್ಲಿ 80 ರೋಗಗ್ರಸ್ಥ ಕಾರ್ಖಾನೆಗಳಿಗೆ ಸರ್ಕಾರದ ಅನುದಾನವನ್ನು ನಿಲ್ಲಿಸಲಾಗಿತ್ತು. ಇದನ್ನೇ ವರದಾನ ಮಾಡಿಕೊಂಡ ತಂಗಡಗಿ ಸಕ್ಕರೆ ಸವಿಯಲು ಪ್ಲಾನು ಹಾಕಿದ. ರೋಗಗ್ರಸ್ತ ಕಾರ್ಖಾನೆಗಳ ಪುನಶ್ಚೇತನ, ಕಾರ್ಮಿಕರ ಕಲ್ಯಾಣ ನಿಧಿ ಎಂದೆಲ್ಲಾ 'ನಾಮ' ಇಟ್ಟು ಸರ್ಕಾರದಿಂದ 4.80 ಕೋಟಿ ಅನುದಾನ ಬಿಡುಗಡೆ ಮಾಡಿಸಿಕೊಂಡ. ಈ ಹಣದಲ್ಲಿ ಇವತ್ತಿಗೂ ಆ ಯಾವ ಕಾರ್ಖಾನೆಯೂ ಉಸಿರಾಡಲಿಲ್ಲ, ಯಾವ ಕಾರ್ಮಿಕನಿಗೂ ನಯಾಪೈಸೆ ತಲುಪಿಲ್ಲ. ಕಾರ್ಖಾನೆಯ ಆಡಳಿತ ಮಂಡಳಿಯೊಂದಿಗೆ ಶಾಮೀಲಾದ ತಂಗಡಗಿ ಇದನ್ನೂ ದೋಚಿಬಿಟ್ಟ.

ಲೋಕಲ್‌ನಲ್ಲಿ ತಮ್ಮಂದಿರ ಹಾವಳಿ

ಸ್ಟೇಟ್ ಲೆವೆಲ್ ಕಬಳಿಕೆಯನ್ನು ತಾನೇ ನಿರ್ವಹಿಸುವ ಸಚಿವ ತಂಗಡಗಿ ಕೊಪ್ಪಳ ಜಿಲ್ಲೆಯ ದರೋಡೆ ಮಾಡಲು ತನ್ನ ತಮ್ಮಂದಿರಾದ ವೆಂಕಟೇಶ್, ನಾಗರಾಜಗಳನ್ನು ಬಿಟ್ಟಿದ್ದಾನೆ. ಜೊತೆಗೆ ಕೊಲ್ಲಾ ಶೇಷಗಿರಿ ಎಂಬ ಕ್ರಿಮಿನಲ್ ಕೂಡಾ ಇದ್ದಾನೆ. ಕೊಪ್ಪಳ-ಗಂಗಾವತಿ-ಕಾರಟಗಿಯಲ್ಲಿರುವ 200 ಕ್ಕೂ ಹೆಚ್ಚು ರೈಸ್‌ಮಿಲ್‌ಗಳಿಂದ ಈ ಗ್ಯಾಂಗ್ ಹಫ್ತಾ ವಸೂಲಿ ಮಾಡುತ್ತದೆ. ಹಫ್ತಾಕೊಡದೇ ಹೋದರೆ, ತಮ್ಮ ಹಿಂಬಾಲಕನಾದ ಸರ್ಕಲ್ ಇನ್ಸ್‌ಪೆಕ್ಟರ್ ಶಾಂತಕುಮಾರನನ್ನು ಛೂಬಿಟ್ಟು ರೇಡ್ ಮಾಡಿಸುತ್ತಾರೆ ಈ ಖದೀಮರು.

ಗಂಗಾವತಿ, ಕನಕಗಿರಿಗಳಲ್ಲಿ ತಂಗಡಗಿ ವಿರುದ್ಧ ಧ್ವನಿ ಎತ್ತಿದವರ ಮೇಲೆ ಈ ಗುಂಪು ಹಲ್ಲೆ ನಡೆಸುತ್ತದೆ. ಈ ತಿಕ್ಕಾಟದಲ್ಲಿ ಗ್ರಾಮ ಪಂಚಾಯ್ತಿ ಸದಸ್ಯ ಸಿದ್ದಪ್ಪ ಪ್ಯಾಟ್ಯಾಳ ಎಂಬಾತನ ಬಲಿಯನ್ನು ಪಡೆದಿದೆ.

ಇನ್ನು ಎಲ್ಲ ಟೆಂಡರು ಪ್ರಕ್ರಿಯೆಗಳು ತಂಗಡಗಿ ಸಹೋದರರು, ಕ್ರಿಮಿನಲ್ ಕೊಲ್ಲಾ ಶೇಷಗಿರಿಯ ಅಣತಿಯಂತೆಯೇ ನಡೆಸಬೇಕು. ಬಹುತೇಕ ಟೆಂಡರುಗಳು ತಂಗಡಿಯ ಆಪ್ತ ಸ್ವಜಾತಿ ಬಾಂಧವ ಮೋಹನ್ ಎಂಬ ಗುತ್ತಿಗೆದಾರನಿಗೇ ಸಿಗುತ್ತಿವೆ.

ಈ ಎಲ್ಲ ದರೋಡೆಯಿಂದ ಸಚಿವ ತಂಗಡಗಿ ಗಂಗಾವತಿ, ಕನಕಗಿರಿಗಳಲ್ಲಿ ಕೋಟ್ಯಾಂತರ ರೂ. ಬೆಲೆಯ ಜಮೀನು ಖರೀದಿಸಿದ್ದಾನೆ. ಸಹೋದರ ನಾಗರಾಜನ ಹೆಸರಲ್ಲಿ, ಪತ್ನಿ ವಿದ್ಯಾಳ ಹೆಸರಲ್ಲಿ, ಅಳಿಯ ವಿರೂಪಣ್ಣನ ಹೆಸರಲ್ಲಿ ನೂರಾರು ಎಕರೆ ಕೃಷಿ ಭೂಮಿಯನ್ನು ತಂಗಡಗಿ ಖರೀದಿಸಿದ್ದಾನೆ. ಗಂಗಾವತಿಯಲ್ಲಿ ನಿಗದಿಯಾಗಿರುವ ರೈಸ್‌ಪಾರ್ಕ್‌ಗೆ ಅಗತ್ಯವಿರುವ ಭೂಮಿಯನ್ನು ಮೊದಲೇ ಕೊಂಡುಕೊಳ್ಳುತ್ತಿರುವ ತಂಗಡಗಿ ಮುಂದೆ ಇದನ್ನು ಸರ್ಕಾರಕ್ಕೆ ನಾಲ್ಕು ಪಟ್ಟು ದರಕ್ಕೆ ಮಾರುವ ಹುನ್ನಾರ ಹೂಡಿದ್ದಾನೆ......

ಈಗ ಜಿಲ್ಲಾ ಉಸ್ತುವಾರಿಗಿರಿಯೂ ತಂಗಡಗಿಯ ಕೈಗೆ ಬಂದಿರುವುದರಿಂದ ಕೊಪ್ಪಳ ಜಿಲ್ಲೆಯನ್ನು ಈತ ಬರ್ಬಾದ್ ಮಾಡುವುದರಲ್ಲಿ ಯಾವುದೇ ಸಂಶಯವಿಲ್ಲ, ಕೊಪ್ಪಳ ಜನತೆ ಆಕಾಶದತ್ತ ಮುಖಮಾಡಿ ತಂಗಡಿಯ ಹೆಲಿಕಾಪ್ಟರ್ ನೋಡುತ್ತ ಕೂಡಬೇಕಷ್ಟೇ.....

● ಏ.ಪಿ. ಮೇಘರಾಜ್

ಮಂತ್ರಿಮಾಲ್ ಶೂಟೌಟ್

ರವಿಪೂಜಾರಿ ಜೊತೆ ಬೆಂಗಳೂರು ರೌಡಿಗಳು



ರವಿಪೂಜಾರಿ

ಬಲಿಯಾದವನು ಬಹುಶಃ .ರವಿ ಪೂಜಾರಿಗೂ ಪರಿಚಯವಿರಲಿಕ್ಕಿಲ್ಲ. ಆತನ ಜೊತೆ ಮಾತಾಡಿದ ಸಾಧ್ಯತೆಯೂ ಕಮ್ಮಿ. ಏನೋ ಸಹವಾಸ, ಯಾವುದೋ ಲಿಂಕು, ಎಂಥದೋ ದುರಾಶೆಗೆ ಬಿದ್ದು ಪೊಲೀಸರ ಗುಂಡಿಗೆ ಆಹುತಿಯಾಗಿದ್ದಾನೆ ಚಂದು!

ಚಂದು ಅಲಿಯಾಸ್ ಡ್ರಮ್ಮು ಎಂಬುದು ಆತನ ಫೀಲ್ಡಿನ ಹೆಸರು. ದೊಡ್ಡ ವಯಸ್ಸೇನಲ್ಲ. ಹೆಸರು ಮಾಡಿದವನೂ ಅಲ್ಲ, ತಾನು ಅಂತರರಾಷ್ಟ್ರೀಯ ಘಾತಕಿ ರವಿಪೂಜಾರಿಯ ಸಹಚರನೆಂಬ ಹಣೆಪಟ್ಟಿ ಹೊತ್ತು ಹೆಣವಾಗುತ್ತೇನೆಂಬುದು ಆತನ ಲೆಕ್ಕಾಚಾರವನ್ನೂ ಮೀರಿದ ಕಲ್ಪನೆಯಾಗಿತ್ತು. ದುಸ್ಸಾಹಸಕ್ಕೆ ಕೈ ಹಾಕಿದ ಮೇಲೆ ದಂಡ ಕಟ್ಟಲೇ ಬೇಕಲ್ಲವೇ?


ರವಿಪೂಜಾರಿ ಎಂಬ ನಿಗೂಢ ಘಾತಕಿಯ ಕರಾಮತ್ತೇ ಅಂಥದ್ದು. ನಿಜಕ್ಕೂ ರವಿಪೂಜಾರಿ ಎಂಬಾತ ಅಸ್ತಿತ್ವದಲ್ಲಿದ್ದಾನಾ? ಯಾವ ದೇಶದಲ್ಲಿದ್ದಾನೆ? ದುಬೈನಿಂದ ಮುಂಬಯಿ ಪಾಪಕೂಪವನ್ನು ಆಪರೇಟ್ ಮಾಡುತ್ತಿದ್ದವನು ಅದ್ಯಾವತ್ತು ಆಸ್ಟ್ರೇಲಿಯಾಕ್ಕೆ ಬಂದ? ಅಲ್ಲಿಂದ ಹೇಗೆ ಮತ್ತೆ ದುಬೈ ಸೇರಿಕೊಂಡ? ರವಿಪೂಜಾರಿ ಎಂಬುದೇ ಆತನ ನಿಜವಾದ ಹೆಸರಾ? ಆತ ಛೋಟಾರಾಜನ್‌ನ ಸಹಚರನಾ? ತಾನು ದಾವೂದ್ ವಿರುದ್ಧ ಹೋರಾಡುತ್ತಿದ್ದೇನೆಂದು ಆತ ಹೇಳುತ್ತಿರುವುದು ಸತ್ಯವಾ?

ಇತ್ಯಾದಿ ಏನೊಂದೂ ಪೊಲೀಸರಿಗೆ ಗೊತ್ತಿಲ್ಲ. ಯಾವುದೋ ಕಾಲದ ಆತನದು ಎನ್ನಲಾದ ಫೋಟೋ ನಿಜಕ್ಕೂ ಆತನದ್ದಾ? ಇತ್ಯಾದಿ ಅನೇಕ ಅನುಮಾನ ಗೊಂದಲಗಳ ಮೊಟ್ಟೆಯಂತಿರುವ ಸೋಕಾಲ್ಡ್ ರವಿ ಪೂಜಾರಿ, ಯಾವುದೋ ದೇಶದಲ್ಲಿ ಅವಿತು ಕೂತು ಇಲ್ಲಿನ ಕೋಟ್ಯಾಧಿಪತಿಗಳನ್ನು ದೋಚುತ್ತಾನೆ. ಇಂಥವನಿಗೆ ಲೋಕಲ್ ಕ್ರಿಮಿನಲ್‌ಗಳ ಸಂಪರ್ಕ ಸಿಕ್ಕಿಬಿಟ್ಟರೆ ಏನೆಲ್ಲಾ ಅನಾಹುತವಾಗುತ್ತೋ; ಈಗ ನಡೆದ ಎನ್‌ಕೌಂಟರ್ ಕೂಡ ಅದರ ಭಾಗವಷ್ಟೆ.


ಶ್ಯಾಂ

ಚಂದು ಅಲಿಯಾಸ್ ಡ್ರಮ್ಮು ಎಂಬಾತ ಸುಬ್ರಹ್ಮಣ್ಯಪುರ ವ್ಯಾಪ್ತಿಯ ಕ್ರಿಮಿಯಷ್ಟೇ. ಈತನಿಗೆ ಗುರುವಿನಂತಿರುವವನು ಸದ್ಯ ರಾಮನಗರ ಜೈಲಿನಲ್ಲಿರುವ ಗುಂಡಾ ಉರ್ಫ್ ಶಿವಕುಮಾರ್ ಎಂಬಾತ. ಈತ ಕೊತ್ತನೂರಿನ ರೌಡಿ. ತನ್ನದೇ ಪ್ರತ್ಯೇಕ ಗ್ಯಾಂಗ್ ಕಟ್ಟಿಕೊಂಡು ಸುಪಾರಿ ಹತ್ಯೆಗೆ ನಿಂತ ಗುಂಡಾ ಉರ್ಫ್ ಶಿವಕುಮಾರ್ ಎಂಬ ಅರಸಯ್ಯನ ಒಂದಾನೊಂದು ಕಾಲದ ಶಿಷ್ಯನೆಲ್ಲಿ? ಎಲ್ಲೋ ದುಬೈನಲ್ಲಿ ಕೂತು ಇದನ್ನೆಲ್ಲ ಆಪರೇಟ್ ಮಾಡುವ ರವಿಪೂಜಾರಿಯೆಲ್ಲಿ?

ಇವತ್ತು ಪೊಲೀಸ್ ಕಮಿಷನರ್ ಬಿದರಿ ಆ ಮಟ್ಟಿಗೆ ತಲೆಕೆಡಿಸಿಕೊಂಡಿರುವುದು ರವಿಪೂಜಾರಿಯ ಕಾರಣಕ್ಕಲ್ಲ


ಬಲಿಯಾದ ಚಂದು

ಆತನಿಗೆ ಸ್ಥಳೀಯ ರೌಡಿಗಳ ಕಾಂಟ್ಯಾಕ್ಟು ಬೆಳೆದಿರುವುದರ ಅಪಾಯ ಮುಂದೊಮ್ಮೆ ಏನೆಲ್ಲಾ ಅನಾಹುತಕ್ಕೆ ಕಾರಣವಾಗಬಹುದೆಂಬುದೇ ಪೊಲೀಸರ ಅಸಲೀ ಆತಂಕ. ಆ ಒಂದೇ ಕಾರಣಕ್ಕೆ ಮಂತ್ರಿ ಬಿಲ್ಡರ್ಸ್ ಅಡ್ಡೆ ಮೇಲೆ ನಡೆದ ಶೂಟೌಟನ್ನು ಪೊಲೀಸರು ಅಷ್ಟೊಂದು ಗಂಭೀರವಾಗಿ ಪರಿಗಣಿಸಿದ್ದಾರೆ.

ಇಲ್ಲಿಗೆ ವರ್ಷದ ಹಿಂದಷ್ಟೇ ಇಂದಿರಾನಗರದ ಯುಟಿವಿ ಕಚೇರಿಯ ಮೇಲೆ ರವಿಪೂಜಾರಿ ಅಟ್ಯಾಕ್ ಮಾಡಿಸಿದ್ದ. ಅದಕ್ಕೂ ಮುನ್ನ ಜಯನಗರದ ಶಬನಮ್ ಡೆವಲಪರ್ಸ್ ಅಡ್ಡೆಯ ಮೇಲೆ ದಾಳಿ ಮಾಡಿಸಿ ಅದರ ಇಬ್ಬರು ಬಡಪಾಯಿ ನೌಕರರನ್ನು ಪೂಜಾರಿ ಗುಂಡಿಟ್ಟು ಕೊಲ್ಲಿಸಿದ್ದ. ಆವತ್ತು ಗುರಿಯಿದ್ದದ್ದು ಶಬನಮ್ ಡೆವಲಪರ್ಸ್ ಧಣಿ ಮತ್ತು ಗುರಪ್ಪನಪಾಳ್ಯದ ಮಾಜಿ ಕೌನ್ಸಿಲರ್ ಸಮೀವುಲ್ಲಾನೇ ಆದರೂ ಆತ ಇಲ್ಲದ ಹೊತ್ತನ್ನೇ ಕಾದು ಹಂತಕರು ನುಗ್ಗಿ ಗುಂಡುಹಾರಿಸಿದ್ದರು!

ಹಾಗೇ ಕಚೇರಿಗೆ ನುಗ್ಗಿ ಇಬ್ಬರನ್ನು ಹೆಣವಾಗಿಸಿದ ಪೂಜಾರಿಯ ಹಂತಕಪಡೆಯ ನೇತೃತ್ವ ವಹಿಸಿದ್ದವನು ಕವಿರಾಜ್ ಎಂಬ ನೇಪಾಳಿ. ಈತನ ತಂದೆ ಬೆಂಗಳೂರಿನ ಯಾವುದೋ ಅಪಾರ್ಟ್‌ಮೆಂಟಿನ ವಾಚ್‌ಮನ್ ಆಗಿದ್ದ. ಮಗ ಕವಿರಾಜ್ ಕ್ರಮೇಣ ಕಟ್ಟಡ ಕಾಮಗಾರಿಗೆಂದು ಬಂದಿದ್ದ ಬಿಹಾರಿಗಳ ಜೊತೆ ಸೇರಿ ರಾಬರಿಗಿಳಿದ. ಈತನಿಗೆ ಅದ್ಯಾರು ರವಿಪೂಜಾರಿಯ ಲಿಂಕು ಬೆಳೆಸಿಕೊಟ್ಟರೋ ಗೊತ್ತಿಲ್ಲ.

ಶಬನಮ್ ಡೆವಲಪರ್ಸ್ ಅಡ್ಡೆ ಮೇಲೆ ನಡೆದ ದಾಳಿ ಕೇಸಲ್ಲಿ ಕವಿರಾಜ್‌ನನ್ನು ಬನ್ನೇರುಘಟ್ಟ ರಸ್ತೆಯ ನಿಗೂಢ ಬಾಡಿಗೆ ಮನೆಯೊಂದರಿಂದ ಆತನನ್ನು ಹಿಡಿದು ತಂದದ್ದು ಸದ್ಯ ಜೆ.ಪಿ. ನಗರಕ್ಕೆ ಇನ್ಸ್‌ಪೆಕ್ಟರ್ ಆಗಿರುವ ಎಸ್.ಕೆ. ಉಮೇಶ್. ಮುಂದೆ ಇದೇ ಕವಿರಾಜ್ ಸರಣಿ ಹಂತಕ ಶ್ಯಾಮ್ ಜೊತೆ ಜೈಲಿಂದ ಪರಾರಿಯಾಗಿ ಹೊಸ ಕೋಟೆಯಲ್ಲಿ ತಲೆಮರೆಸಿಕೊಂಡಿದ್ದಾಗಲೂ ಸ್ವತಃ ಉಮೇಶ್ ಬಾಧೆಬಿದ್ದು ಹಿಡಿದು ತಂದರು. ಅಲ್ಲಿಂದ ಕೋಲಾರ ಜೈಲುಪಾಲಾದ ಶ್ಯಾಮ್ ಮತ್ತು ಕವಿರಾಜ್ ಅದೇ ಜೈಲಿನಲ್ಲಿದ್ದ ಕೆಲ ದಾಬರಿಗಳ ಜೊತೆ ಸ್ನೇಹಗಳಿಸಿದರು.

ಹೀಗೆ ಜೈಲಲ್ಲಿದ್ದೇ ರಹಸ್ಯ ಮೊಬೈಲ್ ಫೋನಿನ ಮೂಲಕ ರವಿಪೂಜಾರಿಗೆ ಕವಿರಾಜ್ ಪರಿಚಯಿಸಿ ಕೊಟ್ಟಿದ್ದು ಉಮೇಶ್ ಎಂಬ ಮತ್ತೊಬ್ಬ ಘಾತಕಿಯನ್ನು. ಈತನನ್ನು ರೆಡಿ ಮಾಡಿದ ರವಿಪೂಜಾರಿ ಮುಂಬಯಿಯ ರೂನಿ ಸ್ಕ್ರೂವಾಲಾ ಎಂಬ ಟೆಲಿವಿಜನ್ ದೈತ್ಯನ ಮೇಲೆ ಛೂಬಿಟ್ಟ. ಮುಂಬಯಿ ಮೂಲದ ರೂನಿ ಸ್ಕ್ರೂವಾಲಾ ಒಂದಲ್ಲ ಐದು ಟೀವಿ ಚಾನಲ್ಲುಗಳ ಧಣಿ. ಯುಟೀವಿ, ವರ್ಲ್ಡ್ ಮೂವೀಸ್; ಇತ್ಯಾದಿ ಟೀವಿ ಚಾನಲ್ಲುಗಳಲ್ಲದೇ ಹಿಂದಿಯ ದೊಡ್ಡದೊಡ್ಡ ಸ್ಟಾರ್‌ಗಳನ್ನು ಹಾಕಿಕೊಂಡು ಸಿನಿಮಾ ನಿರ್ಮಿಸುತ್ತಾನೆ.

ಇಂಥವನ ಬೆಂಗಳೂರು ಬ್ರಾಂಚ್ ಆಫೀಸಿಗೆ ಹಂತಕರನ್ನು ನುಗ್ಗಿಸಿ ಫೈರ್ ಮಾಡಿಸಿದ್ದ ರವಿಪೂಜಾರಿ ಈ ಬಾರಿ ಯಾರನ್ನೂ ಕೊಂದಿರಲಿಲ್ಲವಾದರೂ ಕಚೇರಿ ಮೇಲೆ ಗುಂಡಿನ ಮಳೆಗರೆದು ತನ್ನ ವಿಸಿಟಿಂಗ್ ಕಾರ್ಡ್ ಒಂದನ್ನು ಬಾಗಿಲಿಗೆ ಹಾಕಿಸಿದ್ದ ಈ ಪ್ರಕರಣದಲ್ಲಿ ಪೊಲೀಸರು ಐವರನ್ನು ಹಿಡಿದು ಜೈಲಿಗೆ ಹಾಕಿದರಾದರೂ ಅವರ್‍ಯಾರೂ ಕುಖ್ಯಾತ ಕ್ರಿಮಿನಲ್ಲುಗಳಾಗಿರಲಿಲ್ಲ. ಈ ಪೈಕಿ ಒಬ್ಬನ ಹೆಸರು ಉಮೇಶ. ಈಗ ಗುಂಡಿಗೆ ಬಲಿಯಾದ ಚಂದು ಜೊತೆ ಸೇರಿಕೊಂಡು ಮಂತ್ರಿ ಬಿಲ್ಡರ್ಸ್‌ಗೆ ನುಗ್ಗಿ ಫೈರ್ ಮಾಡಿ ಸಿದ್ದೇ ಈ ಉಮೇಶ್.


ಕವಿರಾಜ್

ಈತನಿಗೂ ಆಹುತಿಯಾದ ಚಂದುಗೂ ದೋಸ್ತಿ ಕುದುರಿದ್ದು ಬಳ್ಳಾರಿ ಜೈಲಿನಲ್ಲಿ. ಹಾಗೇ ಉಮೇಶ್‌ನನ್ನು ಜೊತೆಹಾಕಿ ಕೊಟ್ಟವನು ಕೊತ್ತನೂರಿನ ಗುಂಡಾ ಅಲಿಯಾಸ್ ಶಿವಕುಮಾರ್ ಎಂಬ ಸುಪಾರಿ ಕಿಲ್ಲರ್. ರವಿಪೂಜಾರಿಯಿಂದ ಸುಪಾರಿ ಪಡೆದು ಮಂತ್ರಿ ಬಿಲ್ಡರ್ಸ್ ಹೆಡ್ಡಾಫೀಸಿಗೆ ಹುಡುಗರನ್ನು ನುಗ್ಗಿಸಿ ಫೈರ್ ಮಾಡಿಸಿದ ಗುಂಡ ಸದ್ಯ ರಾಮನಗರ ಜೈಲಲ್ಲಿದ್ದಾನಾದರೂ ಆತನಿಗೂ ರವಿಪೂಜಾರಿಗೂ ಲಿಂಕ್ ಮಾಡಿಕೊಟ್ಟವನು ಖತರ್‌ನಾಕ್ ಕಿಲ್ಲರ್ ಭೈರಸಂದ್ರದ ಅಜಗರ್.

ಸದ್ಯ ಬೆಂಗಳೂರು ಅಂಡರ್‌ವರ್ಲ್ಡ್ ಮಟ್ಟಿಗೆ ರವಿ ಪೂಜಾರಿಯ ನೆಚ್ಚಿನ ಏಜೆಂಟರ ಪೈಕಿ ಅಜಗರ ಕೂಡ ಪ್ರಮುಖ. ಶಬನಮ್ ಡೆವಲಪರ್ಸ್ ಶೂಟೌಟ್ ಕೇಸಿನಲ್ಲಿ ಸಿಕ್ಕಿಬಿದ್ದು ಕೋಲಾರದ ಜೈಲು ಸೇರಿದ್ದ ಕವಿರಾಜ್ ಅದೇ ಜೈಲಲ್ಲಿದ್ದ ಸರಣಿ ಹಂತಕ ಶ್ಯಾಮ್‌ಗೆ ಆಪ್ತನಾದ. ಆ ಹೊತ್ತಿಗಾಗಲೇ ಸರಬಂಡೆಪಾಳ್ಯದ ಈದು ಎಂಬಾತನನ್ನು ಕೊಂದು ಕೋಲಾರದ ಜೈಲುಪಾಲಾಗಿದ್ದ ಅಜಗರ್ ಕ್ರ... ಕವಿರಾಜ್ ಮೂಲಕ ರವಿಪೂಜಾರಿಯ ಸಂಪರ್ಕ ಸಾಧಿ...

ಮುಂದೆ ಕೋಲಾರದ ಜೈಲಿಂದ ಎಸ್ಕೇ... ಅಜಗರ್‌ನನ್ನು ಸಿಸಿಬಿ ಪೊಲೀಸರು ಬಳ್ಳಾರಿಯಲ್ಲಿ ಹಿಡಿ... ಕ್ರಮೇಣ ಬೆಂಗಳೂರು ಜೈಲಿನಿಂದ ಬಳ್ಳಾರಿ ಜೈ... ಅಜಗರ್ ಬರುವುದಕ್ಕೂ ಇತ್ತ ಗುಂಡ ಮತ್ತು ಚ... ಬಳ್ಳಾರಿ ಜೈಲಿಗೆ ಎತ್ತಂಗಡಿಯಾಗುವುದಕ್ಕೂ ಒಂದೇ ಆ... ಅಲ್ಲಿ ಮೊಬೈಲ್ ಮೂಲಕ ಗುಂಡನನ್ನು ರವಿಪೂಜಾ... ಅಜಗರ್ ಪರಿಚಯಿಸಿಕೊಟ್ಟಿದ್ದ.

ಅಷ್ಟಕ್ಕೂ ಗುಂಡ ಉರ್ಫ್ ಶಿವಕುಮಾರ್ ಒ...ನೊಂದು ಕಾಲಕ್ಕೆ ಬನಶಂಕರಿಯ ಅರಸಯ್ಯನಿಗೆ ಶಿಷ್ಯನಾ... ತನ್ನ ತಮ್ಮ ಸಿದ್ದಲಿಂಗನ ಕೊಲೆಯ ಪ್ರತೀಕಾರಕ್ಕೆ ನಿ... ಜಲ್ಲಿ ವೆಂಕಟೇಶನನ್ನು ಕೊಲ್ಲಿಸಿದ್ದ ಅರಸಯ್ಯ ಆಗ ರಾಮ... ಜೈಲಲ್ಲಿದ್ದನಾದರೂ ಹೊರಗೆ ಅರಸ... ಹೆಸರಲ್ಲಿ ದರ್ಬಾರು ಮಾಡುತ್ತಿದ್ದದ್ದು ಗು... ಹಾಗೆ ಅರಸಯ್ಯನ ಹೆಸರು ಬಳಸಿಕೊ... ಚನ್ನಪಟ್ಟಣದ ಕ್ರಿಮಿನಲ್ ಮುದ್ದುಕೃಷ... ಗಂಟುಬಿದ್ದ ಗುಂಡ 2008 ರಲ್ಲಿ ಭಯ... ಡಬ್ಬಲ್ ಮರ್ಡರ್ ಒಂದಕ್ಕೆ ಕೈಯಿಟ್ಟ.

ಚನ್ನಪಟ್ಟಣದಲ್ಲಿ ಮೀಟರ್ ಬಡ್ಡಿ, ಕೇ... ದಂಧೆ, ಇಸ್ಪೀಟು ಇತ್ಯಾದಿ ಕಾಳದಂಧೆ ... ಕೊಂಡಿದ್ದ ಮುದ್ದುಕೃಷ್ಣನಿಗೆ ಮಾಜಿ ಶ... ಯೋಗೇಶ್ವರ್‌ನ ಕುಮ್ಮಕ್ಕಿತ್ತು. ಮೆಗಾಸಿಟಿಯ... ಬೀದಿಪಾಲಾದವರೇನಾದರೂ ನ್ಯಾಯ ... ಯೋಗೇಶ್ವರನ ಬೆನ್ನು ಬಿದ್ದರೆಂದರೆ ಅಂಥ... ಮುದ್ದುಕೃಷ್ಣನನ್ನು ಛೂಬಿಟ್ಟು ಯೋಗೇ... ಧಮಕಿ ಹಾಕಿಸುತ್ತಿದ್ದ. ತನ್ನ ಅಟ್ಟಹಾಸದ ವಿರುದ್ಧ ತಿರುಗಿ... ನವೀನ್ ಮತ್ತು ಸಂತೋಷ್ ಎಂಬ ಸಹೋದರ... ಮುದ್ದುಕೃಷ್ಣ ಮುಗಿಸಲೇಬೇಕಿತ್ತು.

ಅದಕ್ಕೆ ಮುದ್ದುಕೃಷ್ಣನಿಂದ ಸುಪಾರಿ ಪಡೆದವನು ಗು... ನವೀನ್‌ನ ಜೊತೆಗಿದ್ದುಕೊಂಡೇ ಆತನಿಗೆ ಗೊತ್ತಾಗದ ... ಆತನ ಅಣ್ಣ ಸಂತೋಷನನ್ನು ಗುಂಡ ಕೊಂದು ಹಾ... ಮೊದಲೇ ಪೊಲೀಸರನ್ನು ಬುಟ್ಟಿಗೆ ಹಾಕಿಕೊಂ... ಮುದ್ದುಕೃಷ್ಣ ತನ್ನ ಜೊತೆ ಒಂದಷ್ಟು ಖಾಲಿ ಪು... ಹುಡುಗರನ್ನು ಹಾಕಿಕೊಂಡು ಜೈಲು ಸೇರಿಕೊಂ... ಅಸಲೀ ಹಂತಕ ಗುಂಡ ಎಂಬುದು ಪೊಲೀಸರಿ...

ಜೈಲಲ್ಲಿದ್ದೇ ರಿವಾಲ್ವರ್ ಹಂಚಿದ ಕೊತ್ತನೂರು ಗುಂಡ


ಭೈರಸಂದ್ರದ ಅಜಗರ್, ಶಬನಮ್ ಡೆವಲಪರ್ಸ್ ಶೂಟೌಟ್‌ನ ರೂವಾರಿ ಕವಿರಾಜ್ ಮತ್ತು ಸರಣಿ ಹಂತಕ ಶ್ಯಾಮ್ ಇತ್ಯಾದಿಗಳಿಗೆ ರವಿಪೂಜಾರಿಯ ಲಿಂಕು ಸಿಕ್ಕಿದ್ದಕ್ಕೂ, ಈಗ ಗುಂಡ ಹೊಸ ಏಜೆಂಟನಂತೆ ಪೂಜಾರಿ ಪರ ಅಖಾಡಕ್ಕಿಳಿಯುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

ಗುಂಡನ ಹೊರತಾಗಿ ಶ್ಯಾಮ್, ಕವಿರಾಜ್ ಮತ್ತು ಅಜಗರ್ ಸದ್ಯಕ್ಕೆ ಜೈಲಿಂದ ಹೊರಬೀಳುವ ಲಕ್ಷಣಗಳಿಲ್ಲ. ಇವತ್ತಲ್ಲ ನಾಳೆ ಜೀವಾವಧಿ ಶಿಕ್ಷೆಯೋ ಮರಣದಂಡನೆಯೋ ಇವರ್‍ಯಾರಿಗೂ ತಪ್ಪಿದ್ದಲ್ಲ. ಜೊತೆಗೆ ತಂತಮ್ಮ ಗ್ಯಾಂಗುಗಳನ್ನು ಬಿಟ್ಟರೆ ಅದರಾಚೆಗೆ ಇವರ್‍ಯಾರಿಗೂ ಲಿಂಕುಗಳಿಲ್ಲ. ಆದರೆ ಗುಂಡ ಹಾಗಲ್ಲ; ಅರಸಯ್ಯನ ಜೊತೆಗಿದ್ದೇ ಆತನನ್ನು ಧಿಕ್ಕರಿಸಿ ಡಬಲ್ ಮರ್ಡರ್‌ಗೆ ಕೈಹಾಕಿದ. ಅದನ್ನು ಸಹಿಸದೇ ಹೊರಹಾಕಿದ ಎಂಬ ಒಂದೇ ಕಾರಣಕ್ಕೇ ಅರಸಯ್ಯನನ್ನೇ ತೆಗೀತೀನಿ ಎಂದು ಆತನ ಕಡುವೈರಿ ಜಲ್ಲಿ ವೆಂಕಟೇಶನ ತಮ್ಮ ಕೃಷ್ಣ ಮತ್ತು ರಂಗನಾಥನ ತಮ್ಮಂದಿರಾದ ಪಳನಿ ಮತ್ತು ಕುಟ್ಟಿಯ ಜೊತೆ ಕೈಜೋಡಿಸಿದ.

ಅಸಲಿಗೆ ಜಲ್ಲಿ ವೆಂಕಟೇಶನ ಕೊಲೆಗೆ ಆತನ ತಮ್ಮ ಕೃಷ್ಣನೇ ಕೈಜೋಡಿಸಿದ್ದ. ತಾನು ಓಡಾಡಿಸುತ್ತಿದ್ದ ಹುಡುಗಿಯನ್ನು ಹೊತ್ತೊಯ್ದು ಮದುವೆಯಾದ ಅಣ್ಣನ ಬಗ್ಗೆ ಕೃಷ್ಣನಿಗೆ ಒಳಗೊಳಗೇ ಸಿಟ್ಟಿತ್ತು. ತನ್ನ ಪತ್ನಿಯ ಜೊತೆ ಸಲುಗೆಯಿಂದಿದ್ದ ತಮ್ಮ ಕೃಷ್ಣನನ್ನು ಅಣ್ಣ ಜಲ್ಲಿಯೇ ಹಿಡಿದು ಹೊಡೆದಿದ್ದ. ಅಣ್ಣನ ವಿರುದ್ಧ ಒಳಗೊಳಗೇ ಕುದಿಯುತ್ತಿದ್ದ ಕೃಷ್ಣ ಜೊತೆಗಿದ್ದೇ ಶತ್ರು ಅಲ್ಯೂಮಿನಿಯಂ ಬಾಬು ಜೊತೆ ಕೈಜೋಡಿಸಿದ್ದರ ಫಲವಾಗೇ ಜಲ್ಲಿ ವೆಂಕಟೇಶ ಕೊಲೆಯಾದ.

ವಿಚಿತ್ರವೆಂದರೆ ಅಣ್ಣ ಸತ್ತು 13ನೇ ದಿನಕ್ಕೇ ಕೃಷ್ಣ ಅತ್ತಿಗೆಯನ್ನು ಮದುವೆಯಾಗಿದ್ದ!

ಇಂಥ ಕೃಷ್ಣ ಈಗ ಅರಸಯ್ಯನ ವಿರುದ್ಧ ತಿರುಗಿಬಿದ್ದ ಗುಂಡನ ಜೊತೆ ಕೈಜೋಡಿಸಿದ್ದಾನೆ. ಅದೇ ಕಾರಣಕ್ಕೆ ಅರಸಯ್ಯನ ಪಡೆಯಿಂದ ಹತನಾಗಿದ್ದ ಬನಶಂಕರಿಯ ರಂಗನಾಥನ ತಮ್ಮಂದಿರಾದ ಪಳನಿ ಮತ್ತು ಕುಟ್ಟಿ ಕೂಡ ಗುಂಡನ ಜೊತೆ ಕೈಜೋಡಿಸಿದ್ದಾರೆ. ಕೊತ್ತನೂರಿನ ಗೌರವನಗರದ ಗುಂಡನ ಮನೆಯೆಂದರೆ ಅದು ಮೆಟಡೋರ್ ಗೋವಿಂದ, ಅಪ್ಪಿ, ಸಚ್ಚಿ ಮತ್ತೊಬ್ಬ ಅಪ್ಪಿ ಇತ್ಯಾದಿ ಎಲ್ಲರಿಗೂ ಮೀಟಿಂಗ್ ಅಡ್ಡೆಯಿದ್ದಂತೆ. ಜೆ.ಪಿ. ನಗರ ಪೊಲೀಸ್ ಠಾಣೆಗೆ ಎಸ್.ಕೆ. ಉಮೇಶ್ ಬಂದದ್ದು ಗೊತ್ತಾಗಿಯೇ ಊರು ಬಿಟ್ಟಿದ್ದ ಗುಂಡಾ ಚನ್ನಪಟ್ಟಣದ ಮುದ್ದುಕೃಷ್ಣನ ಮನೆಯನ್ನೇ ತನ್ನ ಅಡ್ಡೆಯನ್ನಾಗಿ ಮಾಡಿಕೊಂಡಿದ್ದ.


ಗುಂಡ

ಈಗ ಅದೇ ಮುದ್ದುಕೃಷ್ಣ ಗುಂಡನ ಪಾಲಿಗೆ ಅನ್ನದಾತ. ತನ್ನ ಹರಾಮಿ ದಂಧೆಯ ಪಾಪದ ಗಳಿಕೆಯಲ್ಲಿ ಪ್ರತಿ ತಿಂಗಳೂ ಕನಿಷ್ಠ ಹತ್ತು ಸಾವಿರವನ್ನು ಮುದ್ದುಕೃಷ್ಣ ತಂದು ಗುಂಡನಿಗೊಪ್ಪಿಸುತ್ತಾನೆ. ಜಲ್ಲಿ ವೆಂಕಟೇಶನ ಬಲಗೈ ಬಂಟನಂತಿದ್ದ ತಾಯಪ್ಪನಹಳ್ಳಿಯ ಸುಬ್ಬ, ಮೈಕೋ ಮಂಜು, ಬಿಟಿಎಸ್ ಮಂಜು, ಬಾಬು, ಮೈಕೋ ರವಿ ಇತ್ಯಾದಿ ಪುಡಿ ರೌಡಿಗಳೆಲ್ಲ ಈಗ ಗುಂಡನ ಜೊತೆ ಕೈಜೋಡಿಸಿದ್ದು ಹಳೇ ಜಿದ್ದಿಗಾಗಿ. ಜಲ್ಲಿ ವೆಂಕಟೇಶನನ್ನು ಮುಗಿಸಿದ ಅಲ್ಯೂಮಿನಿಯಂ ಬಾಬು, ಅರಸಯ್ಯ ಮತ್ತು ಅವರ ಕಡೆಯ ಯಾ... ಸಿಕ್ಕರೂ ಹೊಡೀತೀವಿ ಎಂದು ಈ ಗ್ಯಾಂಗ್ ರೌಂಡಿಂಗ್ ಆರಂಭಿಸಿ... ಇವರಿಗೆ ಸಾತು ಕೊಡಲೆಂದೇ ಅರಸಯ್ಯನ ತಮ್ಮ ಸಿದ್ದಲಿಂಗನನ್ನು ಕೊಂದ... ದಡಿಯಾ ಶೇಖ್ರ ರೆಡಿಯಾಗಿದ್ದಾನೆ. ಬನಶಂಕರಿ, ಕತ್ರಿಗುಪ್ಪೆಯಿಂ... ಹಿಡಿದು ವಿಜಯನಗರದ ತಿಮ್ಮೇನಹಳ್ಳಿ ತನಕ, ಕೊತ್ತನೂ... ದಿಣ್ಣೆಯಿಂದ ಶುರುವಾಗಿ ರಾಮನಗರ-ಚನ್ನಪಟ್ಟಣದ ತನ... ಜಿದ್ದಿಗಾಗಿ ತಹತಹಿಸುವ ವಿವಿಧ ಹಿತಾಸಕ್ತ ಉದ್ದೇಶ... ಇಂಥ ತರಹೇವಾರಿ ಗ್ಯಾಂಗುಗಳ ಲಿಂಕಿರುವುದು ಗುಂಡನ... ಮಾತ್ರ.

ಇಂಥ ವಿವಿಧ ಗ್ಯಾಂಗುಗಳಿಗೆ ರವಿಪೂಜಾರಿ... ಮೂಲಕ ರಿವಾಲ್ವರುಗಳು ಬಂತೆಂದರೆ ಏನು ಗತಿ? ಒಂ... ಮೂಲದ ಪ್ರಕಾರ ಈಗಾಗಲೇ ಅರ್ಧ ಡಜ... ರಿವಾಲ್ವರುಗಳನ್ನು ಗುಂಡ ತರಿಸಿಕೊಂಡು ಅದ... ಚನ್ನಪಟ್ಟಣದ ಮುದ್ದುಕೃಷ್ಣನ ಮನೆಯಲ್ಲಿಟ್ಟಿದ್ದಾನೆ. ಗುಂ... ಮೂಲಕ ಈ ಎಲ್ಲಾ ಗ್ಯಾಂಗುಗಳನ್ನು ಕಂಟ್ರೋ... ಮಾಡುವುದಾಗಲಿ, ಅವರ ಮೂಲಕ ಬೆಂಗಳೂರಿನ ಮತ್ತಷ್ಟು ಬಿಲ್ಡರುಗ... ಶ್ರೀಮಂತರ ಮೇಲೆ ಶೂಟೌಟ್ ಮಾಡಿಸಿ ದೋಚುವುದಾಗ... ರವಿಪೂಜಾರಿಯಂಥ ಪಾತಕಿಗೆ ಯಾವ ಮಹಾ?

ಕಮೀಷನರ್ ಬಿದರಿ ಸಾಹೇಬರಿಗೆ ಇದಕ್ಕಿಂತ ತಲೆನೋವು ಬೇಕೆ?


ಎನ್‌ಕೌಂಟರ್ ನಡೆದ ಜಾಗ

ಗೊತ್ತಾಗಲಿಲ್ಲ, ಜೊತೆಗಿದ್ದ ನವೀನನಿಗಂತೂ ಅನುಮಾನವೇ ಇರಲಿಲ್ಲ.

ಅಣ್ಣನನ್ನು ಮುಗಿಸಿದ ಮುದ್ದುಕೃಷ್ಣನನ್ನು ನಿಕಾಲಿ ಮಾಡಲು ಗುಂಡ ಕೈಜೋಡಿಸುತ್ತಾನೆಂದೇ ಲೆಕ್ಕಹಾಕಿದ ನವೀನನಿಗೆ ಎಂಥಾ ಆಘಾತ ಕಾದಿತ್ತೆಂದರೆ; ಹರಿನಗರದ ಗುಂಡನ ಮನೆಯಲ್ಲಿ ಕುಡಿದು ಪಾರ್ಟಿ ಮಾಡಿಕೊಂಡಿದ್ದ ನವೀನನನ್ನು ಚಂದು ಮತ್ತು ಗುಂಡ ಯಾಮಾರಿಸಿ ಕೊಂದುಬಿಟ್ಟರು. ನವೀನನ ಜೊತೆಗಿದ್ದ ಗಿರೀಶನನ್ನೂ ಕೂಡ ಅದೇ ಕ್ಷಣದಲ್ಲಿ ಹೆಣವಾಗಿಸಿದ್ದರು. ಇಬ್ಬರ ಹೆಣವನ್ನು ಮಾರುತಿ ವ್ಯಾನೊಂದಕ್ಕೆ ತುರುಕಿ ಗುಂಡ ಪರಾರಿಯಾಗಿದ್ದ.

ಹರಿನಗರದ ಡಬ್ಬಲ್ ಮರ್ಡರ್ ಕತೆ ಕೇಳಿಯೇ ಅರಸಯ್ಯ ಥಂಡಾ ಹೊಡೆದ. ತನ್ನ ಶಿಷ್ಯರು ಎಂದುಕೊಂಡೇ ಗುಂಡ ಮತ್ತು ಚಂದು ಸುಪಾರಿ ಹತ್ಯೆಗೆ ಕೈಹಾಕಿದ್ದು ಅನ್ಯಾಯವಾಗಿ ಜೊತೆಗಿದ್ದವರನ್ನೇ ಮುಗಿಸಿಹಾಕಿದ್ದು ಆತನ ಮಟ್ಟಿಗೆ ನಂಬಲಸಾಧ್ಯ ವರ್ತನೆಯಾಗಿತ್ತು. ಅವತ್ತೇ ಗುಂಡ ಮತ್ತು ಚಂದುವನ್ನು ದೂರವಿಡಲು ನಿರ್ಧರಿಸಿದನಾದರೂ ಅದನ್ನು ಪೊಲೀಸರು ನಂಬಬೇಕಲ್ಲ?

ಡಬಲ್ ಮರ್ಡರ್ ಕೇಸಿನಲ್ಲಿ ಗುಂಡ ಅನ್ಯಾಯವಾಗಿ ಅರಸಯ್ಯನನ್ನೂ ಸಿಲುಕಿಸಿಬಿಟ್ಟ. ಗುಂಡಾ, ಚಂದು, ಅಪ್ಪಿ, ಸಚ್ಚಿ, ಮೆಟಡೋರ್ ಗೋವಿಂದ ಇತ್ಯಾದಿ 13 ಮಂದಿಯ ಜೊತೆ ಅರಸಯ್ಯನೂ ಆರೋಪಿ ಎನಿಸಿಕೊಂಡಿದ್ದ. ತನ್ನ ತಮ್ಮನ ಕೊಲೆಯ ರಿವೇಂಜ್‌ಗಾಗಿ ಅಲ್ಯೂಮಿನಿಯಂ ಬಾಬುವನ್ನು ಬಿಟ್ಟು ಜಲ್ಲಿ ವೆಂಕಟೇಶನನ್ನು ಮುಗಿಸಿಹಾಕಿದ್ದ ಅರಸಯ್ಯ ತನಗಿನ್ನು ಫೀಲ್ಡು ಸಾಕು ಎಂದು ನಿರ್ಧರಿಸಿದಾಗಲೇ ಗುಂಡ ಅನಾಹುತ ತಂದಿಟ್ಟಿದ್ದ.


ಎಸ್.ಕೆ.ಉಮೇಶ್

ಅದೇ ಕೊನೆ ಮತ್ತೆಂದೂ ಅರಸಯ್ಯ ಗುಂಡನನ್ನು ಹತ್ತಿರಕ್ಕೆ ಬಿಟ್ಟುಕೊಳ್ಳಲಿಲ್ಲ. ಆದರೆ ಗುಂಡ ಬಿಡಬೇಕಲ್ಲ; ತನ್ನನ್ನು ಹೊರಹಾಕಿದ ಒಂದೇ ಕಾರಣಕ್ಕೆ ಜಿದ್ದಿಗೆ ಬಿದ್ದು ಅರಸಯ್ಯನನ್ನು ತೆಗೀತೀನಿ ಎಂದು ಹೂಂಕರಿಸತೊಡಗಿದ. ಅರಸಯ್ಯನ ಕಡುವೈರಿ ಜಲ್ಲಿವೆಂಕಟೇಶ ಶಿಷ್ಯ ರಂಗನಾಥನ ತಮ್ಮಂದಿರಾದ ಪಳನಿ ಮತ್ತು ಕುಟ್ಟಿಯ ಜೊತೆ ಕೈಜೋಡಿಸಿದ. ಕತ್ರಿಗುಪ್ಪೆ ಲಿಂಗನ ಬಂಟ ಪವನನ್ನೂ ಜೊತೆ ಹಾಕಿಕೊಂಡ. ತಿಮ್ಮೇನಹಳ್ಳಿ ಜಗ್ಗನ ಜೊತೆಗೂ ದೋಸ್ತಿ ಕುದುರಿಸಿಕೊಂಡ. ಕೊತ್ತನೂರು ಸಮೀಪದ ಗೌರವನಗರದಲ್ಲೊಂದು ಮನೆ ಕಟ್ಟಿಸಿ ಅದನ್ನೇ ತನ್ನ ಅಡ್ಡೆಯನ್ನಾಗಿ ರೂಪಿಸಿದ್ದ.


ಅಸಲಿಗೆ ಚಂದು ಉರ್ಫ್ ಡ್ರಮ್ಮು ಗುಂಡನಿಗೆ ಬಾಮೈದನಾಗಬೇಕು. ಗುಂಡನ ಪೈಶಾಚಿಕ ಮನಸ್ಥಿತಿ ಎಂಥಾದ್ದೆಂದರೆ ದೋಸ್ತಿ, ನೀತಿ, ನಿಯತ್ತು ಯಾವುದೂ ಆತನಿಗೆ ಲೆಕ್ಕಕ್ಕಿಲ್ಲ. ಯಾರೇ ಸುಪಾರಿ ಕೊಟ್ಟರೂ ಯಾರನ್ನು ಬೇಕಾದರೂ ಆತ ಕೊಲ್ಲಲು ರೆಡಿ. ಮುದ್ದುಕೃಷ್ಣನಿಂದ ಸುಪಾರಿ ಪಡೆದು ತನ್ನ ಜೊತೆಗಿದ್ದವರನ್ನೇ ಯಾಮಾರಿಸಿ ಕೊಂದವನು ನಾಳೆ ಇನ್ನಾರೋ ಕಾಸು ಬಿಚ್ಚಿದರೆಂದರೆ ಇದೇ ಮುದ್ದುಕೃಷ್ಣನನ್ನು ಮುಗಿಸೋಲ್ಲ ಎಂಬುದಕ್ಕೆ ಏನು ಗ್ಯಾರಂಟಿ?

ಇಂಥ ಮನಸ್ಥಿತಿಯ ಗುಂಡ ಈಗ ರವಿಪೂಜಾರಿಯ ನೆಚ್ಚಿನ ಬಂಟ. ಮೊದಲು ಕವಿರಾಜ್, ನಂತರ ಉಮೇಶ್ ಆನಂತರ ಅಜಗರ್‌ನನ್ನು ಬುಟ್ಟಿಗೆ ಹಾಕಿಕೊಂಡ ರವಿಪೂಜಾರಿ ಈಗ ಗುಂಡನಂಥ ಸುಪಾರಿ ಕ್ರಿಮಿಗಳನ್ನು ಪಳಗಿಸಿದ್ದಾನೆಂದರೆ, ಆತನ ಬೆಂಗಳೂರು ಭೂಗತ ಲೋಕದ ಮಟ್ಟಿಗೆ ಬೇರು ಬಿಟ್ಟಿದ್ದಾನೆಂದೇ ಅರ್ಥ. ರವಿಪೂಜಾರಿಗಾಗಿ ತನ್ನ ಬಾಮೈದ ಚಂದುವನ್ನೇ ಗುಂಡ ಬಲಿಕೊಟ್ಟಿದ್ದಾನೆ.

ಗುಂಡನ ಮಾತು ನಂಬಿ ಮಂತ್ರಿ ಬಿಲ್ಡರ್ಸ್ ಅಡ್ಡೆಗೆ ನುಗ್ಗಿ ಫೈರ್ ಮಾಡಿದ ಚಂದು ಎಂಥಾ ಹುಂಬನೆಂದರೆ ತನ್ನನ್ನು ಸಿಸಿಬಿಯ ಬಾಳೇಗೌಡ, ಅಶೋಕನ್‌ರ ತಂಡ ಬೆನ್ನತ್ತಿ ಬರುತ್ತಿದೆ ಎಂಬುದನ್ನ ಗಮನಿಸದೇ ಹೋದ. ಫೈರ್ ಮಾಡಿದ್ದೇ ನೇರವಾಗಿ ಹೆಣ್ಣೂರು ಸಮೀಪದ ವೇಶ್ಯಾವಾಟಿಕೆಯೊಂದಕ್ಕೆ ಹೋಗಿ ಅಲ್ಲೇ ಪೊಲೀಸರ ಕಣ್ಣಿಗೆ ಬಿದ್ದು ಹೆಣವಾದ. ಚಂದು ನಿಕಾಲಿಯಾದನಾದರೂ ಆತನ ಗುರು ಗುಂಡ ಮಾತ್ರ ರಾಮನಗರ ಜೈಲಲ್ಲಿ ಸೇಫಾಗಿದ್ದಾನೆ. ಜೈಲಲ್ಲಿ ಕೂತೇ ರವಿಪೂಜಾರಿ ಪರವಾಗಿ ಏನೆಲ್ಲ ಅನಾಹುತ ಮಾಡುತ್ತಾನೊ. ಇಂಥವರೇ ತಾನೇ ರವಿಪೂಜಾರಿಗೆ ಬೇಕಿರುವುದು? ಬೆಂಗಳೂರಿಗೆ ಇನ್ನೇನು ಅನಾಹುತ ಕಾದಿದೆಯೋ?

• ವರದಿಗಾರ


ಮೈನ್ಸ್ ಮಾಫಿಯಾ ಮಿತ್ರನಾ ಎನ್‌ಕೌಂಟರ್ ದಯಾನಾಯಕ್?


ದಯಾನಾಯಕ್

ಬಳ್ಳಾರಿ ಮೈನ್ಸ್ ಮಾಫಿಯಾ ಜತೆ ಮುಂಬೈನ ಎನ್‌ಕೌಂಟರ್ ಕುಖ್ಯಾತಿಯ ಪೊಲೀಸ್ ಅಧಿಕಾರಿ ದಯಾನಾಯಕ್‌ಗೇನಾದರೂ ನಂಟಿದೆಯಾ? ಬೇಲೇಕೇರಿ ಬಂದರಿಂದ ಪಾಕಿಸ್ತಾನಕ್ಕೆ ಕಳ್ಳ ಸಾಗಾಣಿಕೆ ಆಗಿರುವ ಕಬ್ಬಿಣದ ಅದಿರು ವ್ಯವಹಾರದ ಮಧ್ಯವರ್ತಿ ಕಂಪನಿ ಟ್ವೆಂಟಿ ಫಸ್ಟ್ ಸೆಂಚುರಿ ವೈರ್ ರಾಡ್ಸ್ ಒಡೆಯರೊಂದಿಗೆ ದಯಾನಾಯಕ್‌ಗೆ ಇರುವ ಸಂಬಂಧ ಯಾವ ಥರದ್ದು? ಖಾಸಗಿಯಾ? ವ್ಯಾವಹಾರಿಕವಾ? ಈ ವಿವಾದಿತ ಕಂಪನಿ ಕೊಡಿಸಿದ ಟಿಕೆಟ್‌ನಲ್ಲಿ ಎರಡು ತಿಂಗಳಲ್ಲಿ ಬರೋಬ್ಬರಿ 14 ಬಾರಿ ದಯಾನಾಯಕ್ ಮುಂಬೈನಿಂದ ಬೆಂಗಳೂರಿಗೆ ಹಾರಿ ಬಂದು ಹೋಗಿದ್ದೇಕೆ? ಟ್ವೆಂಟಿ ಫಸ್ಟ್..... ಕಂಪನಿ ನಡುವೆ ಈತನೇನಾದರೂ ಮಧ್ಯವರ್ತಿಯಾಗಿದ್ದನಾ?

ಇಂಥ ಕುತೂಹಲಕಾರಿ ಅನುಮಾನಗಳೀಗ ಇದ್ದಕ್ಕಿದ್ದಂತೆ ಎದ್ದೆದ್ದು ಹಾರಾಡ ತೊಡಗಿದೆ! ಬೆಂಗಳೂರಿನ ಸದಾಶಿವ ನಗರದಲ್ಲಿ ಮುಂಬೈ ಮೂಲದ 'ಟ್ವೆಂಟಿ ಫಸ್ಟ್ ಸೆಂಚುರಿ ವೈರ್ ರಾಡ್ಸ್ ಎಂಬ ಕಂಪನಿಯ ಕಚೇರಿಯಿದೆ. ಈ ಕಂಪನಿ ಪಾಕ್, ಅಫ್ಘಾನಿಸ್ತಾನ್ ಮತ್ತು ಅರಬ್ ಕಂಟ್ರಿಗಳಿಗೆ ಖನಿಜ, ಪೆಟ್ರೋಲ್ ಇನ್ನಿತರ ಉತ್ಪನ್ನ ಭಾರತವೇ ಮೊದಲಾದ ದೇಶಗಳಿಂದ ಸರಬರಾಜು ಮಾಡುವ ಬ್ರೋಕರಿಕೆ ನಡೆಸುತ್ತದೆ. ಈ ಕಂಪನಿಗೆ ವಿನೋದ್ ಗೋಯಲ್, ಗೌರವ್ ಗೋಯಲ್ ನಿರ್ದೇಶಕರು. ಈ ಗೋಯಲ್‌ಗಳು ದಯಾನಾಯಕ್‌ನ ಫ್ಯಾಮಿಲಿ ಫ್ರೆಂಡ್‌ಗಳೆಂಬುದಂತೂ ಖರೆ.


ಟ್ವೆಂಟಿ ಫಸ್ಟ್.... ಕಂಪನಿಗೂ ಬಳ್ಳಾರಿಯ ರೆಡ್ಡಿ ರಿಪಬ್ಲಿಕ್‌ಗೂ ನೇರಾನೇರ ನಂಟುಗಳಿವೆ. ಈ ಕಂಪನಿ ಪಾಕ್‌ನ ಸರ್ಕಾರಿ ಸ್ಟೀಟ್ ಕಂಪನಿಗೆ ಬೇಲೇಕೇರಿ ಬಂದರಿಂದ ಕಳ್ಳ ಸಾಗಾಣಿಕೆ-ಮಾಡಿರುವ ಕಬ್ಬಿಣದ ಅದಿರು ಸಿಕ್ಕ ಮಣ್ಣೊಂದು ಅಲ್ಲಿನ ಪಾರ್ಲಿಮೆಂಟಗಿರುವ 39,740 ಟನ್ ಕಳಪೆ ಅದಿರಿನ ಬಗ್ಗೆ ಅಲ್ಲಿ ಯಾವ ದಾಖಲೆಗಳೂ ಇಲ್ಲ. ಟ್ವೆಂಟಿ ಫಸ್ಟ್- ಕಂಪನಿ ದುಬೈ ಮೂಲದ 'ಅಲ್ಸಾ' ಎಂಬ ಕಂಪನಿ ಜತೆ ಮಾಡಿಕೊಂಡ ಒಪ್ಪಂದದಂತೆ ಬೇಲೇಕೇರಿಯಿಂದ ಅದಿರು ಸಾಗುವ ವ್ಯವಸ್ಥೆ ಮಾಡಿತ್ತು. ಟ್ವೆಂಟಿ ಫಸ್ಟ್ ಕಂಪನಿಯ ಯಜಮಾನ ಬೋಹ್ರಾ ಮತ್ತು ಅಲ್ಸಾ ಶಿಪ್ಪಿಂಗ್ ಕಂಪನಿಯ ಒಡೆಯ ಇಮ್ರಾನ್ ಅಸ್ಗರ್‌ಗಳೊಂದಿಗೆ ಕರ್ನಾಟಕದ ಮೈನ್ಸ್ ಮಹಾರಾಜ ಜ. ರೆಡ್ಡಿಗೆ ಅನ್ಯೋನ್ಯ ದೋಸ್ತಿಯಿದೆ.


ಮಹೇಶ್

ಪಾಕ್ ತನಗೆ ಬಂದಿರುವ ಅದಿರಿನಲ್ಲಿ ವಂಚನೆಯಾಗಿದೆಯೆಂದು ದೂರು ಕೊಟ್ಟಿತ್ತು ಹಾಗೆಯೇ ಟ್ವೆಂಟಿ ಫಸ್ಟ್ ಕಂಪನಿ ಮೋಸ ಮಾಡಿದೆಯೆಂದು ದುಬೈನ ಅಲ್ಸಾ ಶಿಪ್ಪಿಂಗ್ ಬೆಂಗಳೂರಿನ ಸದಾಶಿವನಗರ ಠಾಣೆಯಲ್ಲಿ ಕಂಪ್ಲೇಂಟು ಕೊಟ್ಟಿದೆ. ಕೇಂದ್ರ ಅಪರಾಧ ಪತ್ತೆದಳ ಟ್ವೆಂಟಿ ಫಸ್ಟ್‌ನ ನಿರ್ದೇಶಕರಾದ ಗೋಯಲ್‌ಗಳ ಹುಡುಕುತ್ತಿದೆ. ಇವರು ತಲೆ ಮರೆಸಿಕೊಂಡಿರುವ ಸುದ್ದಿಗಳಿವೆ. ಲೋಕಾಯುಕ್ತರ ಕಣ್ಣೂ ಟ್ವೆಂಟಿ ಫಸ್ಟ್ ಸೆಂಚುರಿ ಕಂಪನಿ ಮೇಲೆ ಮೊದಲೇ ಬಿದ್ದಿತ್ತು. ಈ ಕಂಪನಿ ರೆಡ್ಡಿಗಳ ಕೃಪೆಯಿಂದ ಅವ್ಯಾಹತವಾಗಿ ಬೇಲೇಕೇರಿಯಿಂದ ಪಾಕ್‌ಗೆ ಅದಿರು ಕಳ್ಳ ಸಾಗಾಣಿಕೆ ಮಾಡಿರುವ ಗುಮಾನಿಗಳಿವೆ. ಈ ಸಿಐಡಿ ಪೊಲೀಸರೂ ಟ್ವೆಂಟಿ ಫಸ್ಟ್ ಕಂಪನಿಯ ಜಾತಕ ಜಾಲಾಡುತ್ತಿದ್ದಾರೆ.

ಇಂಥ ಹೊತ್ತಲ್ಲಿ ಮೂರೂ ತನಿಖಾ ತಂಡಗಳಿಗೆ ಅದಿರು ಅವ್ಯವಹಾರವೆಲ್ಲ ಮುಂಬೈ ಪೊಲೀಸ್ ಆಫೀಸರ್ ದಯಾನಾಯಕ್ ಸುತ್ತಸುಳಿದಾಡಿದ ವಾಸನೆ ಬಡಿದಿದೆ. 2009 ಆಗಸ್ಟ್ 1 ರಿಂದ ಅಕ್ಟೋಬರ್ 1 ರವರೆಗಿನ ಎರಡೇ ಎರಡು ತಿಂಗಳಲ್ಲಿ ಕರ್ನಾಟಕ (ಕಾರ್ಕಳ) ಮೂಲದ ಈ ದಯಾನಾಯಕ್ ಬೆಂಗಳೂರಿಗೆ ಬರೋಬ್ಬರಿ 14 ಬಾರಿ ಬಂದು ಹೋಗಿದ್ದಾರೆ. ಶಾಂತಿನಗರದ ವಿವಾದಿತ ಟ್ರಾವೆಲ್ಸ್ ಏಜೆನ್ಸಿಯಿಂದ ಈ 14 ಟ್ರಿಪ್‌ನ ಏರ್‌ಟಿಕೆಟ್‌ಗಳು ಖರೀದಿಯಾಗಿವೆ. ಈ ಹಣ ಟ್ವೆಂಟಿ ಫಸ್ಟ್... ಕಂಪನಿಯೇ ಭರಿಸಿದೆ!

ಸರಣಿಯಾಗಿ ಎರಡು ತಿಂಗಳಲ್ಲಿ 14 ಸಲ ಬೆಂಗಳೂರಿಗೆ ಬರುವ ದರ್ದು ದಯಾನಾಯಕ್‌ಗೆ ಏನಿತ್ತು? ಅದೂ ಗಣಿಗಲಾಟೆಯಲ್ಲಿ ಸಿಕ್ಕಿಬಿದ್ದಿರುವ ಶಿಪ್ಪಿಂಗ್ ಕಂಪನಿ ದುಡ್ಡಲ್ಲಿ? ಕರ್ನಾಟಕದ ಮೈನ್ಸ್ ಮಾಫಿಯಾ ದೊರೆಗಳೊಂದಿಗೆ ವ್ಯವಹಾರ ಕುದುರಿಸಲೇನಾದರೂ ಬಂದಿದ್ದರಾ. ಅವ್ಯಾಹತವಾಗಿ ಬೇಲೇಕೇರಿಯಿಂದ ಪಾಕ್ ಮತ್ತಿತರ ದೇಶಗಳಿಗೆ ಬೇಲೇಕೇರಿ ಬಂದರಿಂದ ಕಳ್ಳ ಸಾಗಾಣಿಕೆ ಆಗಿರುವ ಅದಿರು ವ್ಯವಹಾರದಲ್ಲಿ ದಯಾನಾಯಕ್ ಭಾಗಿಯಾಗಿದ್ದಾರಾ? ಟ್ವೆಂಟಿ ಫಸ್ಟ್ ಕಂಪನಿಯ ನಿರ್ದೇಶಕರಾದ ಗೋಯಲ್‌ಗಳ ವ್ಯವಹಾರದಲ್ಲಿ ಮಧ್ಯವರ್ತಿಯಾಗಿದ್ದಾರಾ? ಗೆಳೆಯ ಗೋಯಲ್‌ಗಳು ಬಚಾಯಿಸಲು ಬಂದಿದ್ದರಾ?




ಇದೆಲ್ಲ ಪ್ರಶ್ನೆಗಳಿಗೆ ಲೋಕಾಯುಕ್ತ ನ್ಯಾ ಸಂತೋಷ್ ಹೆಗ್ಡೆ ತನಿಖಾ ತಂಡ ಕೊಡುವ ಉತ್ತರ ಮಾತ್ರ ವಿಶ್ವಾಸಾರ್ಹವಾದೀತು!

ಈ ನಡುವೆ ಖಾರಪುಡಿ ಮಹೇಶನ ತಮ್ಮ ಸಿಓಡಿ ಪೊಲೀಸರಿಗೆ ಲಂಚಕೊಡಲು ಹೋಗಿ ಸಿಕ್ಕಿಬಿದ್ದಿರುವ ಘಟನೆ ನಡೆದಿದೆ.

ಲಂಚ ಕೊಡುವಾಗ ಸಿಕ್ಕಿಬಿದ್ದ ರೆಡ್ಡಿಯ ರೌಡಿ!!

ಬೇಲೇಕೇರಿ ಬಂದರಿನಲ್ಲಿ ಲೋಕಾಯುಕ್ತದವರು ಜಪ್ತು ಮಾಡಿದ್ದ ಅಕ್ರಮ ಅದಿರನ್ನೇ ಕದ್ದು ವಿದೇಶಕ್ಕೆ ರಫ್ತು ಮಾಡಿದ ಪ್ರಕರಣದ ಸಿಐಡಿ ತನಿಖಾ ನಾಟಕ ಮೆಗಾ ನಗೆ ಧಾರಾವಾಹಿಯಂತಾಗಿ ಹೋಗಿದೆ. ಈ ಪ್ರಹಸನದ ಚಿತ್ರ-ವಿಚಿತ್ರ ಸೀನರಿಗಳು ದಿನಕ್ಕೊಂದರಂತೆ ಬಿತ್ತರಗೊಳ್ಳುತ್ತಿವೆ. ಯಾವಾಗ ಸಿಎಂ ಯಡ್ಡಿ ಮಹಾತ್ಮನೇ ಲೋಕಾಯುಕ್ತರ ತನಿಖೆಗೆ ಸಮಾನಾಂತರವಾಗಿ ತನ್ನ ಆಧೀನದ ಸಿಐಡಿ ಪೊಲೀಸರ ಎನ್‌ಕ್ವಯರಿಗೆ ಒಪ್ಪಿಸಿದರೋ, ಆಗಲೇ ಈ ಅದಿರು ಕಳ್ಳ ಸಾಗಾಣಿಕೆ ಭಾನ್ಗಡಿ ಹಳ್ಳ ಹಿಡಿಯುತ್ತದೆಂಬುದು ಇಡೀ ನಾಡಿಗೇ ಖಾತ್ರಿಯಾಗಿ ಹೋಗಿತ್ತು.



ತಮಾಷೆಯೆಂದರೆ, ಇತ್ತ ಈ ಕಳ್ಳರ ಮೇಲೆ ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ ಅತ್ತ ಅವರಲ್ಲನೇಕರು ಟೂರಿಸಮ್ ವೀಸಾದಲ್ಲಿ ವಿದೇಶಕ್ಕೆ ಹಾರಿದ್ದಾರೆ. ರೆಡ್ಡಿ ರಿಪಬ್ಲಿಕ್‌ನ 'ರಿಸ್ಕ್ ಟ್ರಾನ್ಸ್‌ಪೋರ್ಟ್' ಕಿಂಗ್ ಖಾರಪುಡಿ ಮಹೇಶನಂಥವರು ಸಿಐಡಿ ಅಧಿಕಾರಿಗಳಿಗೇ ಲಂಚಕೊಟ್ಟು ಅದಿರು ಕಳ್ಳಸಾಗಾಣಿಕೆ ಕೇಸ್‌ನ ಚಾರ್ಜ್ ಶೀಟ್‌ನಲ್ಲಿ ಹೆಸರು ಬರದಂತೆ ಮಾಡಲು ಕಸರತ್ತು ಮಾಡುತ್ತಿದ್ದಾರೆ. ಕಳೆದ 19.9.2010 ರಂದು ಸಿಐಡಿ ಇನ್ಸ್‌ಪೆಕ್ಟರ್ ವೆಂಕಟೇಶ್ ಎಂಬಾತನಿಗೆ ಲಂಚ ಕೊಡುವಾಗ ಲೋಕಾಯುಕ್ತದವರ ಕೈಗೆ ಸಿಕ್ಕಿಬಿದ್ದಿದ್ದಾನೆ. ಆದರೆ ಈ ಖತರ್‌ನಾಕ್-ಮಹೇಶ್ ಅದ್ದೇಗೋ ಬಚಾವಾಗಿ ಆತನ ತಮ್ಮ ನಾಗರಾಜ್ ಹಣ ಕೊಡುವಾಗ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದು ಕೃಷ್ಣನ ಜನ್ಮಸ್ಥಾನ ಸೇರಿದ್ದಾನೆ.

ಈ ಗಣಿ ಪುಂಡರ ಲಂಚ ಪುರಾಣ ರೋಚಕವಾಗಿದೆ. ಬೇಲೇಕೇರಿಯಲ್ಲಿ ಅಕ್ರಮ ಅದಿರು ಶೇಖರಿಸಿ ರಫ್ತುದಾರರಿಗೆ ಮಾರುವ ದಂಧೆಯನ್ನು ಖಾರಪುಡಿ ಮಹೇಶ್ ನಡೆಸುತ್ತಿದ್ದಾನೆ. ಲೋಕಾಯುಕ್ತರವರು ಸೀಜ್ ಮಾಡಿದ ಅದಿರು ಕಳ್ಳ ಸಾಗಾಣಿಕೆ ಮಾಡಿದ ಕಂಪನಿಗಳಲ್ಲಿ ಇದೂ ಒಂದು. ಈ ಖಾರಾಪುಡಿ, ಸ್ವಸ್ತಿಕ್‌ರ ಕಂಪನಿಗಳು ಮಾಡುವುದೆಲ್ಲ ಕಳ್ಳ ವ್ಯವಹಾರವೇ. ಸಿಐಡಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಥಮ ತನಿಖಾ ವರದಿಯಲ್ಲಿ ಈ ಖಾರಪುಡಿಯ ಹೆಸರೂ ಇದೆ. ಗಣಿ ಮಾಫಿಯಾದ ದಂಡನಾಯಕನೇ ಅರೆಸ್ಟಾಗಿ ಒಳಗೆ ಬಿದ್ದರೆ ಉಳಿದ ಕಳ್ಳರ ರಕ್ಷಿಸುವವರ್‍ಯಾರು? ಹಾಗಾಗಿ ಬೇಲೇಕೇರಿ ಬಂದರಿನ ಅಕ್ರಮ ಅದಿರು ಲಫಡಾದಿಂದ ಬಚಾವಾಗಲು ಗಣಿ ಲಾಬಿ ಸ್ಕೆಚ್‌ವೊಂದನ್ನು ಹೆಣೆಯಿತು.

ಅದರಂತೆ ಸಿಐಡಿ ಪೊಲೀಸರನ್ನೇ ಖರೀದಿಸಲು ಮಾಫಿಯಾ ಮುಂದಾಯ್ತು. ಖಾರಪುಡಿ ಮಹೇಶ್ ಅರೆಸ್ಟ್ ಆಗದಂತೆ ಮಾಡಲು ಆತನ ಹೆಸರು ಚಾರ್ಜ್ ಶೀಟ್‌ನಲ್ಲಿ ಬರದಂತೆ ಮಾಡಬೇಕಿತ್ತು ಮೈನ್ಸ್ ಮೋಸಗಾರರಿಗೆ. ಮಹೇಶ್ ಸಿಐಡಿ ಇನ್ಸ್‌ಪೆಕ್ಟರ್ ವೆಂಕಟೇಶ್ ಎಂಬಾತನ ಬುಕ್ ಮಾಡಿ ಬಿಟ್ಟ. ಆ ಭ್ರಷ್ಟ ಇನ್ಸ್‌ಪೆಕ್ಟರ್ ಮಹೇಶ್ ಹೆಸರನ್ನು ಚಾರ್ಜ್ ಶೀಟ್‌ನಿಂದ ಬಿಡಲು ಬರೋಬ್ಬರಿ ಹತ್ತು ಲಕ್ಷ ರೂ. ಡಿಮ್ಯಾಂಡ್ ಮಾಡಿದ. ನಾಡಿನ ಕೋಟ್ಯಂತರ ರೂ. ಸಂಪತ್ತನ್ನು ಕೊಳ್ಳೆ ಹೊಡೆದು ಕೊಬ್ಬಿದ ರೆಡ್ಡಿ ರಿಪಬ್ಲಿಕ್‌ಗೆ ಜುಜುಬಿ 10 ಲಕ್ಷ ಅದ್ಯಾವ ಲೆಕ್ಕ?

ಇನ್ಸ್‌ಪೆಕ್ಟರ್‌ಗೆ ಹತ್ತು ಲಕ್ಷ ಕೊಡಲು ಮಹೇಶ್ ಒಂದೇ ಏಟಿಗೆ ಒಪ್ಪಿಬಿಟ್ಟಿದ್ದ. ಹಣ ಪಡೆಯಲು ಹೊಸಪೇಟೆಗೇ ಬರುವಂತೆ ಇನ್ಸ್‌ಪೆಕ್ಟರ್ ವೆಂಕಟೇಶ್‌ಗೆ ಗಣಿ ಲಾಬಿ ಆಹ್ವಾನಿಸಿತ್ತು. ಗಣಿ ದೊರೆಗಳ ನಿಷ್ಠಾವಂತ ಬಂಟನಾದ ಈ ಖಾರಪುಡಿ ಮಹೇಶ್‌ನ ಮೇಲೆ ಲೋಕಾಯುಕ್ತ ಸದಾ ಒಂದು ಕಣ್ಣು ಇಟ್ಟುಕೊಂಡಿತ್ತು. ಲೋಕಾಯುಕ್ತದವರಿಗೆ ಅದ್ದೇಗೋ ಈ ಖಾರಪುಡಿ ಸಿಐಡಿ ಇನ್ಸ್‌ಪೆಕ್ಟರ್ ವೆಂಕಟೇಶ್‌ನೊಂದಿಗೆ ಡೀಲಿಂಗ್ ಶುರುಹಚ್ಚಿಕೊಂಡಿದ್ದು ಗೊತ್ತಾಗಿಹೋಯ್ತು. ವೆಂಕಟೇಶ್ ಹೊಸಪೇಟೆ ತಲುಪುವ ಮೊದಲೇ ಲೋಕಾಯುಕ್ತದವರು ಬಲೆ ಬೀಸಿ ಕಾಯುತ್ತಿದ್ದರು.

ಖಾರಪುಡಿ ಮಹೇಶ್‌ನ ತಮ್ಮ ನಾಗರಾಜ್ ಇನ್ಸ್‌ಪೆಕ್ಟರ್ ವೆಂಕಟೇಶ್‌ಗೆ ಹತ್ತು ಲಕ್ಷದ ಗಂಟು ಕೊಡುವಾಗ ಲೋಕಾಯುಕ್ತದವರು ದಾಳಿ ನಡೆಸಿದ್ದಾರೆ. ಮಹೇಶ್‌ಗೆ ಲೋಕಾಯುಕ್ತದವರು ಅಥವಾ ಸಿಐಡಿಯವರೇ ತನ್ನನ್ನು ಬಲಿ ಹಾಕಬಹುದೆಂಬ ಸಣ್ಣದೊಂದು ಅನುಮಾನವಿತ್ತು. ಹಾಗಾಗಿ ಆತ ಇನ್ಸ್‌ಪೆಕ್ಟರ್‌ಗೆ ದುಡ್ಡು ಕೊಡಲು ತಮ್ಮ ನಾಗರಾಜ್‌ನ ಮುಂದೆ ಬಿಟ್ಟಿದ್ದ! ಲೋಕಾಯುಕ್ತದವರು ಖಾರಪುಡಿ ತಮ್ಮ ನಾಗರಾಜ್ ಮತ್ತು ಸಿಐಡಿ ಇನ್ಸ್‌ಪೆಕ್ಟರ್ ವೆಂಕಟೇಶ್‌ರ ಬಂಧನದಿಂದ ಗಣಿ ಮಾಫಿಯಾದ ತಲೆಯೇನೂ ಬಿಸಿಯಾಗಲಿಲ್ಲ. ಆದರೆ ಸಿಐಡಿ ಡಿಜಿಪಿ ಗುರುಪ್ರಸಾದ್‌ಗೆ ಮಾತ್ರ ದೊಡ್ಡ ಪೀಕಲಾಟ ಶುರುವಾಯ್ತು.

ಕಳ್ಳನನ್ನು ಹಿಡಿಯಲು ನೇಮಿಸಲ್ಪಟ್ಟಿದ್ದ ತನಿಖಾ ಸಂಸ್ಥೆಯೊಂದರ ಅಧಿಕಾರಿಯೇ ಕಳ್ಳನೊಂದಿಗೆ ಶಾಮೀಲಾಗಿ ಎಂಜಲು ಕಾಸಿಗೆ ನಾಲಿಗೆಯೊಡ್ಡಿದ್ದರೆ ಆ ಏಜೆನ್ಸಿಯ ಮಾನ-ಮರ್ಯಾದೆ ಹರಾಜಾಗದೆ? ಅದರ ಮುಖ್ಯಸ್ಥನಿಗೆ ಮುಖಭಂಗ ಆಗದೇ? ಅದರಲ್ಲೂ ಇಡೀ ದೇಶದಲ್ಲಿ ಗಬ್ಬೆಬ್ಬಿಸಿರುವ ಬೇಲೇಕೇರಿ ಬಂದರಲ್ಲ ಕೋಟ್ಯಂತರ ರೂಪಾಯಿ ಅದಿರು ಕಳ್ಳ ಸಾಗಾಣಿಕೆ! ಸಾಕ್ಷಾತ್ ಸಿಎಂ ಸಾಹೇಬರೇ ಮುಖ ಉಳಿಸಿಕೊಳ್ಳಲು ನೇಮಿಸಿದ್ದ ತನಿಖಾ ಸಂಸ್ಥೆ ಬೇರೆ ಸಿಐಡಿ ಇನ್ಸ್‌ಪೆಕ್ಟರ್ ವೆಂಕಟೇಶ್ ಅದಿರು ಮಾಫಿಯಾದ ಸೇನಾಧಿಪತಿ ಖಾರಪುಡಿ ಮಹೇಶ್ ಜತೆ ಲೇವಾದೇವಿಗೆ ಇಳಿದಿದ್ದು ಬಹಿರಂಗವಾದರೆ ಈ ಸ್ಕ್ಯಾಂಡಲ್ ನಲ್ಲಿರುವ ಯಡ್ಡಿ-ರೆಡ್ಡಿ ಬಳಗದ ಬಣ್ಣ ತಂತಾನೆ ಬಯಲಾಗಿರುವುದು ಗ್ಯಾರಂಟಿ ಆಗಿತ್ತು.

ಹಾಗಾಗಿ ಸಿಐಡಿ ಡಿಜಿಪಿ ಗುರುಪ್ರಸಾದ್ ಲೋಕಾಯುಕ್ತದ ಅಧಿಕಾರಿಗಳನ್ನೂ ಕೇಳಿಕೊಂಡು ಈ ಕಳ್ಳ-ಪೊಲೀಸ್ ಆಟ ಬಹಿರಂಗ ಮಾಡದಂತೆ ಅಂಗಲಾಚಿದರಂತೆ. ಹೀಗಾಗಿ ಇನ್ಸ್‌ಪೆಕ್ಟರ್ ವೆಂಕಟೇಶ್‌ನನ್ನು ಲೋಕಾಯುಕ್ತ ಇಲಾಖೆಯಲ್ಲೇ ನಿಯೋಜಿಸಿ ಅದಿರುಗಳ್ಳ ಖಾರಪುಡಿ ಮಹೇಶನ ತಮ್ಮ ನಾಗರಾಜ್‌ನನ್ನು ಮಾತ್ರ ಬಂಧಿಸಿದ್ದಾರೆಂಬ ಸುದ್ದಿಯೀಗ ನಿಧಾನಕ್ಕೆ ಹೊರಬರುತ್ತಿದೆ. ಈ ವರದಿ ಸಿದ್ಧವಾಗುತ್ತಿರುವ ವೇಳೆಗೆ ಮಿನಿಸ್ಟರ್ ಕಂ ಗಣಿ ಸಾಮ್ರಾಟ ಜ.ರೆಡ್ಡಿಯ ಶಿಷ್ಯೋತ್ತಮ ಖಾರಪುಡಿ ಮಹೇಶ್‌ನ ಹಿಂದೆ ತಳ್ಳಲು ಲೋಕಾಯುಕ್ತದವರು ಯೋಚಿಸುತ್ತಿದ್ದಾರೆಂಬ ವರ್ತಮಾನ 'ಪತ್ರಿಕೆ'ಗೆ ಸಿಕ್ಕಿದೆ.

ಒಟ್ಟಿನಲ್ಲಿ ಈ ಖಾರಪುಡಿ ಮಹೇಶನ ಮಹಿಮೆ ಅವ್ಯವಹಾರಿ ಗಣಿ ದೊರೆಗಳಾದ ಗಾಲಿ ರೆಡ್ಡಿಗಳ ಗಾಂಚಾಲಿಯನ್ನೆಲ್ಲ ಅನಾವರಣ ಮಾಡಿಬಿಟ್ಟಿದೆ. ಈಗ ಹೇಳಿ ಸಿಐಡಿ ಪೊಲೀಸರಿಂದ ಸರ್ವಶಕ್ತ ಮೈನ್ಸ್ ಮಾಫಿಯಾ ಮಟ್ಟಹಾಕಲು ಸಾಧ್ಯವಾ? ಬೇಲೇಕೇರಿ ಬಂದರು ಭಾನಗಡಿಯ ನಿಷ್ಪಕ್ಷಪಾತ ತನಿಖೆ ಈ ಸೋಗಲಾಡಿ ಸಿಐಡಿಗಳಿಂದ ಸಾಧ್ಯವಾ? ಗಣಿ ಮಾಫಿಯಾದ ಗೆಳೆಯ ಯಡ್ಡಿಜೀ ನಾಡಿನ ಕಣ್ಣಿಗೆ ಮಣ್ಣೆರಚುತ್ತಿದ್ದಾರಲ್ಲವಾ?

• ನಹುಶ



● ರಾ. ಸೋಮನಾಥ್
ra.somanath2010@gmail.com

KIADB ದರೋಡೆ



ಕಟ್ಟಾ ಮಗ ಕೆಟ್ಟ ಸಿಎಂ ಮಗ ಕಂಗೆಟ್ಟ

ಕೆಐಎಡಿಬಿ ಭೂಸ್ವಾಧೀನ ಪ್ರಕರಣದಲ್ಲಿ ಭಾರೀ ಗೋಲ್‌ಮಾಲ್ ಮಾಡಿರುವ ಸಚಿವ ಕಟ್ಟಾ ಸುಬ್ರಮಣ್ಯ ನಾಯ್ಡು ಪುತ್ರ, ಬಿಬಿಎಂಪಿ ಸದಸ್ಯ ಜಗ್ಗ ಜೈಲು ಪಾಲಾಗಿದ್ದಾನೆ.ಹಗರಣದ ಪ್ರಮುಖ ಸಾಕ್ಷಿ ರಾಮಾಂಜಿನಪ್ಪ ಎಂಬು ವವರ ಮನೆಗೆ ಹೋಗಿ ಒಂದು ಲಕ್ಷ ರೂಪಾಯಿ ಲಂಚ ನೀಡುತ್ತಿದ್ದಾಗ ಲೋಕಾಯುಕ್ತ ಪೊಲೀಸರ ಬಲೆಗೆ ರೆಡ್‌ಹ್ಯಾಂಡ್ ಆಗಿ ಕಟ್ಟಾ ಜಗ್ಗ ಸಿಕ್ಕಿಬಿದ್ದಿದ್ದಾನೆ.


ಕಟ್ಟಾನ ಇಟಾಸ್ಕಾ ಮತ್ತು ಕೆಐಎಡಿಬಿಗಳ ಜಂಟಿ ನೇತೃತ್ವದಲ್ಲಿ ನಡೆದಿರುವ ಭೂಲೂಟಿಯ ಬಗ್ಗೆ 'ಲಂಕೇಶ್' ಬರೆಯುತ್ತಲೇ ಬಂದಿತ್ತು ಎಂಬುದನ್ನು ಓದುಗರಿಲ್ಲಿ ಗಮನಿಸಬೇಕು.

ಲೋಕಾಯುಕ್ತಕ್ಕೆ ಸಿಕ್ಕಿರುವುದು ಕೇವಲ 106 ಕೋಟಿಯ ಲೆಕ್ಕವಾದರೂ ಇಡೀ ಹಗರಣ ಸಾವಿರ ಕೋಟಿಯನ್ನು ಮೀರುತ್ತದೆ.

ಸದ್ಯ ಲೋಕಾಯುಕ್ತ ಎಸ್ಪಿ ಮಧುಕರ್ ಶೆಟ್ಟರು ಬಂಧಿಸಿರುವ ಕೆಐಎಡಿಬಿಯ ಬ್ರೋಕರ್ ಸಂತೋಷ್ ಉರ್ಫ್ ಸಂಪತ್ ಎಂಬಾತ ಯಡ್ಡಿ ಮಗ ವಿಜ ಯೇಂದ್ರನ ಬೇನಾಮಿ ಎಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಇಟಾಸ್ಕಾ ಎಂಬ ನಕಲಿ ಐಟಿ ಕಂಪೆನಿಯ ಹೆಸರಲ್ಲಿ ಮಂತ್ರಿ ಕಟ್ಟಾನಾಯ್ಡು ನಾನೂರಕ್ಕೂ ಅಧಿಕ ಎಕರೆಗಳಷ್ಟು ಬಡದಲಿತರ ಭೂಮಿ ದೋಚುತ್ತಿರುವುದನ್ನು ಮೊಟ್ಟಮೊದಲು ಬಯಲಿಗೆಳೆದದ್ದು ಲಂಕೇಶ್.

ಇದೇ 'ಇಟಾಸ್ಕಾ' ಮುಂದೆ ಇಡೀ ಕೆಐಎಡಿಬಿಗೇ ಲಗ್ಗೆಯಿಟ್ಟಿತು. ಹೆಸರಿಗಷ್ಟೇ ಶ್ರೀನಿವಾಸ್ ಎಂಬ ಪುಡಿ ವಕೀಲನೊಬ್ಬ ಇಟಾಸ್ಕಾಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದದ್ದು ಬಿಟ್ಟರೆ ಇಡೀ ಇಟಾಸ್ಕಾದ ವ್ಯವಹಾರ ನೋಡಿಕೊಳ್ಳುತ್ತಿದ್ದದ್ದು ಕಟ್ಟಾ ಮಗ ಜಗದೀಶ್ ನಾಯ್ಡು. ಈತ ಇಟಾಸ್ಕಾಗೆ ಡೈರೆಕ್ಟರ್. ಈತನ ಜೊತೆ ಮಂತ್ರಿ ಕಟ್ಟಾರ ಪತ್ನಿ ಮತ್ತು ಜಗ್ಗನ ತಾಯಿ ಸೌಭಾಗ್ಯಮ್ಮ, ಕಟ್ಟಾ ಲ್ಯಾಂಡ್ ದೀಲುಗಳನ್ನೆಲ್ಲ ಬ್ರೋಕರ್‌ನಂತೆ ನಿಭಾಯಿಸುವ ಗೋಪಿ; ಇತ್ಯಾದಿಗಳೆಲ್ಲ ಇಟಾಸ್ಕಾ ಕಂಪೆನಿಗೆ ಡೈರೆಕ್ಟರುಗಳಾಗಿದ್ದರು.

ಇಟಾಸ್ಕಾ ಕೇವಲ ಕಾಗದ ಪತ್ರಗಳಿಗಾಗೇ ಸೃಷ್ಟಿಸಲ್ಪಟ್ಟ ಬೋಗಸ್ ಕಂಪೆನಿಯಾಗಿತ್ತು. ಅದರ ಕಾರ್ಪೊರೇಟ್ ಕಚೇರಿಯೆಂದು ಕೊಟ್ಟ ಮಲ್ಲೇಶ್ವರದ ವಿಳಾಸದಲ್ಲಿ ವಕೀಲ ಶ್ರೀನಿವಾಸ್‌ನ ಮನೆಯಿತ್ತೇ ಹೊರತು ಅದಕ್ಕೊಂದು ಬೋರ್ಡು, ಫೋನು, ಛೇಂಬರು ಕಂಪ್ಯೂಟರು ಏನೇನೂ ಇರಲಿಲ್ಲ. ಇಂಥ ಲೆಟರ್‌ಹೆಡ್ ಕಂಪೆನಿಗೆ ದೇವನಹಳ್ಳಿ ವಿಮಾನ ನಿಲ್ದಾಣದ ಹಿಂಭಾಗದ



ಲಂಕೇಶ್

6

ಇಟಾಸ್ಕಾ -ಕೆಐಎಡಿಬಿ ಜಂಟಿ ಲೂಟಿ
ಕಟ್ಟಾನ ಫೋರ್ಜರಿ ರ್‍ಯಾಕೆಟ್

2010 ಜನವರಿ 6ರ ಸಂಚಿಕೆಯಲ್ಲಿ ಲಂಕೇಶ್ ಪ್ರಕಟಿಸಿದ್ದ ತನಿಖಾ ವರದಿ

ಬಂದಿಕೊಡಿಗೇಹಳ್ಳಿಯ ನಾನೂರಕ್ಕೂ ಅಧಿಕ ಎಕರೆಗಳಷ್ಟು ಬಡದಲಿತರ ಭೂಮಿ ಕಿತ್ತುಕೊಟ್ಟದ್ದು ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಂದರೆ ಕೆಐಎಡಿಬಿ!

ಆ ಹೊತ್ತಿಗೆ ಸ್ವತಃ ಕಟ್ಟಾ ನಾಯ್ಡುವೇ ಕೈಗಾರಿಕಾ ಮಂತ್ರಿಯಾಗಿದ್ದನಲ್ಲ; ಮುಖ್ಯ ಮಂತ್ರಿ ಕುಮಾರಸ್ವಾಮಿ ಅದೆಷ್ಟೇ ಶಾಪ ಹಾಕಿದರೂ ಕಟ್ಟಾ ಅದ್ಯಾವುದಕ್ಕೂ ಸೊಪ್ಪು ಹಾಕದೇ ಬಂದಿಕೊಡಿಗೇಹಳ್ಳಿಗೆ ವಕ್ಕರಿಸಿದ್ದ. ಬಂದಿಕೊಡಿಗೇಹಳ್ಳಿಯ ನಾನೂರು ಎಕರೆ ಪೈಕಿ ಸರ್ಕಾರಿ ಗೋಮಾಳ, ರಾಜಕಾಲುವೆ, ಅರಣ್ಯಭೂಮಿ ಇತ್ಯಾದಿ ಹೊರತುಪಡಿಸಿದರೆ ಕನಿಷ್ಠ ಅರ್ಧ-ಕರ್ಧ ಭೂಮಿಗಳಾದರೂ ಕಂಪೆನಿಯಿಂದ(!) ಪರಿಹಾರ ನೀಡಬೇಕಲ್ಲವೆ?

ಅದಕ್ಕೆ ಕಟ್ಟಾ ಗ್ಯಾಂಗ್ ಹುಟ್ಟು ಹಾಕಿದ್ದು ಸರ್ಕಾರಿ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿ ಕೆಐಎಡಿಬಿಯ ಬೊಕ್ಕಸಕ್ಕೆ ಕನ್ನ ಹಾಕುವ ದಂಧೆ. ಆ ಹೊತ್ತಿಗಾಗಲೇ ದೇವನ ಹಳ್ಳಿ ತಾಲ್ಲೂಕಿನ ಜಾಲ ಹೋಬಳಿಯಲ್ಲಿ ಏರೋಸ್ಪೇಸ್ ಟೆಕ್ನಾಲಾಜಿಕಲ್ ಪಾರ್ಕ್ ಮತ್ತು ಹಾರ್ಡ್‌ವೇರ್ ಅಂಡ್ ಐಟಿ ಪಾರ್ಕ್‌ಗೆಂದು ಕೆಐಎಡಿಬಿ 3,268.10 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತ್ತು. ಈ ಪೈಕಿ 1,648.28 ಎಕರೆಗಳಷ್ಟು ಸರ್ಕಾರಿ ಭೂಮಿಯಿತ್ತು, ಉಳಿಕೆ 1,507.20 ಎಕರೆಗಳಷ್ಟು ರೈತರ ಜಮೀನನ್ನು ಮೂರು ಕೈಗಾರಿಕಾ ಎಸ್ಟೇಟುಗಳಿಗೆಂದು ವಶಪಡಿಸಿಕೊಳ್ಳಲಾಗಿತ್ತು.



ಹೀಗೆ ಸರ್ಕಾರ ನೋಟಿಫೈ ಮಾಡಿದ ಭೂಮಿಯ ರೈತರಿಗೆ ಕೆಐಎಡಿಬಿ ನಿಗದಿಪಡಿಸಿದಂತೆ ಪರಿಹಾರ ನೀಡಬೇಕಲ್ಲ; ಇಲ್ಲಿ ಕಟ್ಟಾ ಗ್ಯಾಂಗ್ ವಿಚಿತ್ರ ಹಗಲುದರೋಡೆಯೊಂದಕ್ಕೆ ಕೈ ಇಟ್ಟಿತ್ತು.

ಎಲ್ಲೆಲ್ಲಿ ಸರ್ಕಾರಿ ಭೂಮಿಯಿದೆಯೋ ಆ ಪೈಕಿ ನಿರ್ದಿಷ್ಟ ಎಕರೆಗಳನ್ನು ಪಟ್ಟಿ ಮಾಡುವುದು. ಅದು ತಮಗೆ ಸೇರಿದ್ದೆಂದು ಕಟ್ಟಾ ಸಂಬಂಧಿಗಳು ಮನೆ ಕೆಲಸದವರು, ಡ್ರೈವರ್‌ಗಳ ಹೆಸರಿಗೆ ಪಹಣಿ, ಮುಟೇಶನ್ ಖಾತೆಗಳನ್ನು ಮಾಡಿಸುವುದು. ಅಂಥ ದಾಖಲೆಗಳನ್ನೇ ಇಟ್ಟುಕೊಂಡು ಅದನ್ನು ಮಗ ಜಗ್ಗನ ಮೂಲಕ ಕೆಐಎಡಿಬಿಗೆ ಅರ್ಜಿ ಸಲ್ಲಿಸಿ ರೈತರಿಗೆಂದು ಮೀಸಲಿಟ್ಟ ದುಡ್ಡನ್ನು ದೋಚುವುದು.

ಈ ರೀತಿ ನಕಲಿ ದಾಖಲೆ ಸೃಷ್ಟಿಸಿಯೇ ಕಟ್ಟಾ ಮಗ ಜಗ್ಗ ಬಂದಿಕೊಡಿಗೇಹಳ್ಳಿಯ ಆರೂವರೆ ಎಕರೆ ಸರ್ಕಾರಿ ಭೂಮಿಯ ಹೆಸರಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ದೋಚಿದ್ದ. ಅದೂ ಅಪ್ಪ ಮಂತ್ರಿಯಾಗಿದ್ದಾಗಲೇ ದೋಚಿದ್ದ. ಮುಂದೆ ಇದು ವಿಶೇಷ ಜಿಲ್ಲಾಧಿಕಾರಿ ರಾಮಾಂಜಿನಪ್ಪನವರ ಗಮನಕ್ಕೆ ಬಂತಾದರೂ ಕೆಐಎಡಿಬಿಯಾಗಲಿ, ಕಂದಾಯ ಇಲಾಖೆಯಾಗಲಿ ಮಂತ್ರಿ ಮಗ ಲಪಟಾಯಿಸಿದ್ದ ನಾಲ್ಕು ಕೋಟಿ ರೂಪಾಯಿಗಳಷ್ಟು ಸರ್ಕಾರಿ ದುಡ್ಡನ್ನು ವಶಪಡಿಸಿಕೊಳ್ಳಲಿಲ್ಲ. ಇದೊಂದೇ ಸಾಕು ಕಟ್ಟಾ ಮಗನನ್ನು ಜೈಲಿಗೆ ಹಾಕಲಿಕ್ಕೆ.

ಈ ಬಗ್ಗೆ ವರ್ಷದ ಹಿಂದೆಯೇ ಪತ್ರಿಕೆ ವಿಶೇಷ ವರದಿಯನ್ನು ಪ್ರಕಟಿಸಿತ್ತಾದರೂ ಲೋಕಾಯುಕ್ತವಾಗಲಿ ಕೆಐಎಡಿಬಿಯಾಗಲಿ ಈ ನಿಟ್ಟಿನಲ್ಲಿ ತಲೆ ಕೆಡಿಸಿಕೊಳ್ಳಲಿಲ್ಲ. ಇದು ಕಟ್ಟಾ ಮಗ ಜಗ್ಗ ನೇರವಾಗಿ ಲಪಟಾಯಿಸಿದ ದುಡ್ಡಾದರೆ, ಇಟಾಸ್ಕಾ ಹೆಸರಲ್ಲಿ ತಮ್ಮ ಬೇನಾಮಿಗಳ ಹೆಸರಲ್ಲಿ ಕಟ್ಟಾ ಗ್ಯಾಂಗ್ ವಿವಿಧ ರೀತಿಯ ದಕಾಯಿತಿಗಿಳಿದಿತ್ತು. ಅದು ಬೇರೆ ಬೇರೆ ಏಜೆಂಟರ ಹೆಸರಲ್ಲಿ ಸರ್ಕಾರಿ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿ ಪರಿಹಾರ ದೋಚುವುದು ಮತ್ತು ಬಂದಿಕೊಡಿಗೇಹಳ್ಳಿಯ ಬಡದಲಿತರನ್ನೇ ಹೆದರಿಸಿ ಅವರಿಂದ ಖಾಲಿ ಕಾಗದಪತ್ರಗಳಿಗೆ ಸಹಿ ಪಡೆದು ಅವರ ಪಾಲಿನ ಪರಿಹಾರ ದೋಚುವುದು. ಈ ರೀತಿ ಕಟ್ಟಾ ಕಪಿಮುಷ್ಠಿಗೆ ಸಿಲುಕಿ ತನ್ನ ಪಾಲಿನ ಕೋಟಿ ಮೊತ್ತದ ಪರಿಹಾರದಿಂದ ವಂಚಿತನಾದವನು ಬಂದಿಕೊಡಿಗೇಹಳ್ಳಿಯ ದಲಿತ ಮುನಿ ಆಂಜನಪ್ಪ.

ಇಟಾಸ್ಕಾ ಕಂಪೆನಿಗಾಗಿ ಕೆಐಎಡಿಬಿ ವಶಪಡಿಸಿಕೊಂಡಿದ್ದ ತನ್ನ ಆರೂವರೆ ಎಕರೆ ಭೂಮಿಗೆ ಎರಡೂ ಮುಕ್ಕಾಲು ಕೋಟಿಯಷ್ಟು ಪರಿಹಾರದ ನಿರೀಕ್ಷೆಯಲ್ಲಿ ಮುನಿ ಆಂಜನಪ್ಪನ ಕುಟುಂಬವಿತ್ತು. ಇದೇ ಹೊತ್ತಿಗೆ ಕಟ್ಟಾನ ಏಜೆಂಟ್ ಗೋಪಿ ಮುನಿ ಆಂಜನಪ್ಪನ ಮನೆ ವಕ್ಕರಿಸಿದ್ದೇ ನಿನಗೆ ಬರಬೇಕಾದ ಅಷ್ಟೂ ಪರಿಹಾರವನ್ನೇ ನಾನು ಕೊಡಿಸುತ್ತೇನೆಂದ. ಆತನನ್ನು ಕಟ್ಟಾ ಮಗ ಜಗ್ಗನ ಬಳಿ ಕರೆದೊಯ್ದು. ಜಗ್ಗನ ಮುಂದೆಯೇ ಕೆಲ ಖಾಲಿ ಕಾಗದಪತ್ರ ಮತ್ತು ಚೆಕ್ಕುಗಳಿಗೆ ಮುನಿ ಆಂಜನಪ್ಪನಿಂದ ಸಹಿ ಪಡೆದರು.

ಇದಾಗಿ ಎಷ್ಟೋ ದಿನಗಳ ನಂತರ ಗೊತ್ತಾಗಿದ್ದೇ



ಕಟ್ಟಾನ ಗೆಳೆಯ ವಂಚಕ ಶ್ರೀನಿವಾಸನ ಮನೆ...

ನೆಂದರೆ ಆತನಿಗೆ ಬರಬೇಕಾದ ಅಷ್ಟೂ ದುಡ್ಡನ್ನು ಇಟಾಸ್ಕಾ ಖದೀಮರಾದ ಶ್ರೀನಿವಾಸ್ ಗೋಪಿ ಮತ್ತು ಜಗ್ಗ ಸೇರಿಕೊಂಡು ಡ್ರಾ ಮಾಡಿಸಿಕೊಂಡಿದ್ದರು. ಮುನಿ ಆಂಜನಪ್ಪನಿಗೆ ಕೇವಲ 32 ಲಕ್ಷವನ್ನಷ್ಟೇ ಕೊಟ್ಟು ಉಳಿಕೆ ದುಡ್ಡನ್ನೆಲ್ಲ ಕಟ್ಟಾ ಗ್ಯಾಂಗ್ ಹೊಟ್ಟೆಗಿಳಿಸಿತ್ತು. ಈ ಬಗ್ಗೆ 2009 ರ ಏಪ್ರಿಲ್ 17 ರಂದು ಮುನಿ ಆಂಜನಪ್ಪ ಬಾಗಲೂರು ಪೊಲೀಸ್ ಠಾಣೆಗೆ ಬಂದು ಕಟ್ಟಾ ಜಗ್ಗ,

ಯಡ್ಡಿ ಮಗ ವಿಜಯೇಂದ್ರನ ಸೀಕ್ರೆಟ್ ಏಜೆಂಟ್ ಸಂಪತ್ತು

ಕಟ್ಟಾ ಗ್ಯಾಂಗ್ ನಡೆಸಿದ ಕೆಐಎಡಿಬಿಯ ದಕಾಯಿತಿಯದ್ದು ಒಂದು ಅಧ್ಯಾಯವಾದರೆ ಮುಖ್ಯಮಂತ್ರಿ ಯಡ್ಡಿ ಮಗ ವಿಜಯೇಂದ್ರನ ಸಂಪತ್ತು ಎಂಬ ಬೇನಾಮಿಯನ್ನಿಟ್ಟುಕೊಂಡು ನಡೆಸಿದ ಹಗಲುದರೋಡೆಯದ್ದು ಮತ್ತೊಂದು ಅಧ್ಯಾಯ!

ಸದ್ಯ ಇಂಡಿಯನ್ ಆಯಿಲ್ ಕಾರ್ಪೊರೇಷನ್ನಿಗೆ ಅಸಿಸ್ಟೆಂಟ್ ಕಮೀಷನರ್ ಆಗಿರುವ ಚಿಕ್ಕಬೆಟ್ಟಯ್ಯ ಮತ್ತು ಕೆಐಎಡಿಬಿಯ ವಿಶೇಷ ಭೂಸ್ವಾಧೀನಾಧಿಕಾರಿಯಾಗಿರುವ ರಾಮಕೃಷ್ಣ ಎಂಬ ಇಬ್ಬರೂ ಕೆಎಎಸ್ ಅಧಿಕಾರಿಗಳು ಕಟ್ಟಾ ದರೋಡೆಯಲ್ಲಿ ಭಾಗಿದಾರರಾದರೆ, ಇವರ ನಂತರ ಕೆಐಎಡಿಬಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳಾಗಿ ಬಂದ ಜೆ.ಸಿ. ಅನಿಲ್‌ಕುಮಾರ್ ಮತ್ತು ಎನ್.ಆರ್. ನಾಗರಾಜ್ ಎಂಬಿಬ್ಬರು ಕೆಎಎಸ್‌ಗಳು ಯಡ್ಡಿಮಗ ವಿಜಯೇಂದ್ರನ ಏಜೆಂಟರಾಗೇ ವಕ್ಕರಿಸಿದ್ದರು.



ಎನ್.ಆರ್. ನಾಗರಾಜ್ ಕೆಐಎಡಿಬಿಯಲ್ಲಿ ಕೂತು ಪರಿಹಾರ ವಿತರಣೆಯ ಸ್ಕೆಚ್ಚು ರೂಪಿಸುತ್ತಿದ್ದರೆ ಆತನಿಗೆ ಅಪ್ಪಣೆ, ಆದೇಶ ನೀಡಿ ಹಣ ಎಣಿಸಿಕೊಳ್ಳುತ್ತಿದ್ದವನು ಹೊನ್ನಾಳಿಯ ಸಂಪತ್‌ಕುಮಾರ್ ಅಲಿಯಾಸ್ ಸಂತೋಷ್ ಈತನೇ ವಕ್ಕರಿಸಿ ಯಡ್ಡಿ ಮಗ ವಿಜಯೇಂದ್ರನಿಗೆ ದೋಚಿ ಕೊಟ್ಟ ಮೊತ್ತದಲ್ಲಿ ಹೊಡೆದ ಕಮಿಷನ್ನಿನ ಮೊತ್ತವೇ 50 ಕೋಟಿಗೂ ಅಧಿಕ.

ಏಜೆಂಟ್ ಸಂಪತ್ತುವೇ 50 ಕೋಟಿಯ ಆಸ್ತಿವಂತನಾಗುತ್ತಾನೆಂದರೆ ಇನ್ನು ಯಡ್ಡಿ ಮಗ ಎಷ್ಟು ದೋಚಿರಬೇಡ? ಹೊನ್ನಾಳಿಯ ಸಂಪತ್ ಅಲ್ಲಿನ ಬಿಜೆಪಿ ಮುಖಂಡರ ಮನೆ ಹೆಣ್ಣು ಮಗಳೊಬ್ಬಳನ್ನು ಹಾರಿಸಿಕೊಂಡು ಬೆಂಗಳೂರಿಗೆ ಓಡಿಬಂದಿದ್ದ. ಈತನ ತಂದೆ ಶುರುವಿನಲ್ಲಿ ಹಮಾಲಿ ಕೆಲಸ ಮಾಡಿಕೊಂಡಿದ್ದ, ನಂತರ ಅಕ್ಕಿ ವ್ಯಾಪಾರಕ್ಕಿಳಿದ. ಸಂಪತ್ತು ಎಲ್ಲೂ ಯಾವತ್ತೂ ಕೆಲಸ ಅಂತ ಮಾಡಿದವನೇ ಅಲ್ಲ, ಇಂಥವನಿಗೆ ಬೆಂಗಳೂರಿನಲ್ಲಿ ಐವತ್ತು ಕೋಟಿಯಷ್ಟು ಆಸ್ತಿ ಮಾಡಲು ಕಾರಣವಾದದ್ದು ವಿಜಯೇಂದ್ರನ ಕೆಐಎಡಿಬಿಯ ಲೂಟಿ ಮತ್ತು ಅದಕ್ಕೆ ಸಂಪತ್ತು ಸಲ್ಲಿಸಿದ ನಿಯತ್ತು.

ನಿರಾಣಿ ಕೈಗಾರಿಕಾ ಮಂತ್ರಿಯಾಗುತ್ತಿದ್ದಂತೆ ಕೆಐಎಡಿಬಿಯ ವಿಶೇಷ ಭೂಸ್ವಾಧೀನಾಧಿಕಾರಿ ಹುದ್ದೆಗೆ ಬಂದ ಎಸ್.ಆರ್. ನಾಗರಾಜ್ ಈ ಹಿಂದೆ ಶಿವಮೊಗ್ಗದಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿದ್ದ. ಇತ್ತ ವಿಜಯೇಂದ್ರ ಕುಮಾರಕೃಪಾ ಗೆಸ್ಟ್‌ಹೌಸಿನಲ್ಲಿ ಒಂದಲ್ಲ ಎರಡು ಕೋಣೆಗಳನ್ನು ಬಾಡಿಗೆಗೆ ಹಿಡಿದು ಕೂತ. ಅದೇ ಹೊತ್ತಿಗೆ ITIR ಅಂದರೆ information technology investment region ಎಂಬ ಮಗದೊಂದು ಕೈಗಾರಿಕಾ ಪಾರ್ಕಿಗೆ ಭೂಸ್ವಾಧೀನ ಪ್ರಕ್ರಿಯೆ ಶುರುವಾಗಿತ್ತು. ಇದಕ್ಕೆ ಪೂರಕವಾಗೇ ಯಡ್ಡಿಯ ಪರಮನಿಷ್ಠ ವಿ.ಪಿ. ಬಳಿಗಾರ್‌ರನ್ನು ಕೈಗಾರಿಕೆ ಮತ್ತು ವಾಣಿಜ್ಯ ಖಾತೆಯ ಪ್ರಿನ್ಸಿಪಲ್ ಸೆಕ್ರೆಟರಿ ಹುದ್ದೆಗೆ ತರಲಾಯಿತು.

ಎಲ್ಲೆಲ್ಲಿ ಸರ್ಕಾರಿ ಗೋಮಾಳವಿತ್ತೋ ಅದಕ್ಕೆ ಸಂಪತ್ತು ನಕಲಿ ದಾಖಲೆ ಸೃಷ್ಟಿಸಿದರೆ, ಅದಕ್ಕೆ ಕೆಐಎಡಿಬಿಯಿಂದ ಕೋಟಿಗಟ್ಟಲೇ ಪರಿಹಾರದ ಮೊತ್ತ ಮಂಜೂರು ಮಾಡುವ ಹೊಣೆಯನ್ನು ನಾಗರಾಜು ನಿಭಾಯಿಸುತ್ತಿದ್ದ. ಹಿಂದಿದ್ದ ಚಿಕ್ಕಬೆಟ್ಟಯ್ಯ, ಅನಿಲ್‌ಕುಮಾರ್, ಮುನಿ ನಾರಾಯಣಪ್ಪ ಇದೇ ಕೆಲಸ ಮಾಡಿಹೋಗಿದ್ದರಲ್ಲ, ಇಡೀ ಕೆಲಸವನ್ನು ನಾಗರಾಜ್ ಮತ್ತು ಏಜೆಂಟ್ ಸಂಪತ್ತು ಸೇರಿಕೊಂಡು ಯಡ್ಡಿ ಮಗನ ಪರವಾಗಿ ತೀವ್ರಗೊಳಿಸಿದ್ದಾರೆ.

ಸರ್ಕಾರಿ ಭೂಮಿಯ ಅಕ್ರಮ ಮಂಜೂರಾತಿ ಕುರಿತು ವಿಶೇಷ ಜಿಲ್ಲಾಧಿಕಾರಿಗಳ ವಿಚಾರಣೆ ನಡೆಯುತ್ತಿದ್ದಾಗಲೇ ನಾಗರಾಜು ಮತ್ತು ಸಂಪತ್ತು ಸೇರಿಕೊಂಡು ಅಂಥ ವಿವಾದಿತ ಸರ್ಕಾರಿ ಭೂಮಿಯ 103.37 ಎಕರೆಗಳ ಪರಿಹಾರದ ಹೆಸರಲ್ಲಿ 41.35 ಕೋಟಿ ದೋಚಿದ್ದರು. ಈ ರೀತಿ ಸರ್ಕಾರಿ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಲೆಂದೇ ಯಲಹಂಕಕ್ಕೆ ಧನಲಕ್ಷ್ಮಿ ಎಂಬ ಪಾಕಡಾಳನ್ನು ತಹಶೀಲ್ದಾರಳನ್ನಾಗಿ ವಿಜಯೇಂದ್ರ ನೇಮಿಸಿದ್ದ.

ಇಂಥ ಅನೇಕ ಪ್ರಕರಣಗಳ ಕುರಿತು ದೂರು ಮಂತ್ರಿ ನಿರಾಣಿಯ ಛೇಂಬರಿನಲ್ಲಿ ರಾಶಿ ಬಿದ್ದಿತ್ತು. ಅದೇ ಹೊತ್ತಿಗೆ ಅಂದರೆ 2010 ರ ಜೂನ್ 28 ರಂದು KIADB ಯ ನಾಗರಾಜು 5 ಲಕ್ಷದ ಲಂಚ ಪಡೆಯುವಾಗಲೇ ಲೋಕಾಯುಕ್ತಕ್ಕೆ ಸಿಕ್ಕಿಬಿದ್ದ. ಆಗ ಲೋಕಾಯುಕ್ತ ಎಸ್ಪಿ ಮಧುಕರ್ ಶೆಟ್ಟರು ನಾಗರಾಜನಿಂದ ವಶಪಡಿಸಿಕೊಂಡ ದಾಖಲೆಗಳಲ್ಲಿ ಕಳ್ಳ ದಾಖಲೆ ಸೃಷ್ಟಿಸಿ ಪರಿಹಾರ ದೋಚುವ ದೊಡ್ಡ ಜಾಲವೇ ಬೆಳಕಿಗೆ ಬಂದಿತ್ತು. ಒಂದೆಡೆ ಅದನ್ನು ಮಧುಕರ್ ಶೆಟ್ಟರು ಕೆದಕುತ್ತಿದ್ದಂತೆ ವಾಸನೆ ಹಿಡಿದ ಕೆಐಎಡಿಬಿ ಖದೀಮರು ಆತುರಾತುರವಾಗಿ ಪರಿಹಾರದ ದುಡ್ಡು ದೋಚತೊಡಗಿದರು ಮಂತ್ರಿ ನಿರಾಣಿಯ ಆದೇಶದ ಮೇರೆಗೆ ಬಳಿಗಾರ್ ಇಡೀ ಹಗರಣವನ್ನು ಎನ್.ಎಸ್. ಸಂಗೊಳ್ಳಿ ಎಂಬ ನಿವೃತ್ತ ನ್ಯಾಯಾಧೀಶರಿಂದ ತನಿಖೆ ಮಾಡಿಸಿದ್ದಾರೆ. ಅಕ್ರಮ ನಡೆದದ್ದನ್ನು ತನಿಖೆ ಮಾಡಿ ಪತ್ತೆಹಚ್ಚಿದ ಸಂಗೊಳ್ಳಿ ಬಳಿಗಾರ್‌ಗೆ ಸುವಿಸ್ತಾರ ವರದಿ ಕೊಟ್ಟರೆ, ಬಳಿಗಾರ್ ಸಾಹೇಬರು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಜಡ್ಜ್ ಸಂಗೊಳ್ಳಿ ಕೊಟ್ಟ ವರದಿಯನ್ನೇ ಮುಖ್ಯಮಂತ್ರಿಗೆ ಹೊತ್ತು ಹಾಕಿದ್ದಾರೆ.

ಇಡೀ ಕರ್ಮಕಾಂಡಕ್ಕೆ ತನ್ನ ಮಗನೇ ಮೂಲಪುರುಷ ಎಂಬುದನ್ನು ಗೊತ್ತಿದ್ದೂ ಯಡ್ಡಿ ಯಾವ ಕ್ರಮ ಕೈಗೊಳ್ಳಲು ಸಾಧ್ಯ? ಬಹುಶಃ ಲೋಕಾಯುಕ್ತ ಎಸ್ಪಿ ಮಧುಕರ್ ಶೆಟ್ಟಿ ಎಚ್ಚೆತ್ತು ಯಡ್ಡಿ ಮಗನ ಬೇನಾಮಿ ಸಂಪತ್‌ನನ್ನು ಎಳೆತಂದು ಬಾಯಿಬಿಡಿಸದೇ ಹೋಗಿದ್ದರೆ ಇಡೀ ಪ್ರಕರಣವೇ ಮುಚ್ಚಿಹೋಗುತ್ತಿತ್ತು. ಸದ್ಯ ಲೋಕಾಯುಕ್ತರು ಲಾಕಪ್ಪಿನಲ್ಲಿರುವ ಸಂಪತ್ ಅಲ್ಲಾಡದೇ ಶಿಲಾಮೂರ್ತಿಯಂತೆ ಕೂತು ಬಿಟ್ಟಿದ್ದಾನೆ. ಆತನ ಅಕೌಂಟನಿಂದ ಯಡ್ಡಿ ಮಗ ವಿಜಯೇಂದ್ರ, ಯಡ್ಡಿಯ ಹಿರಿಮಗಳು ಉಮಾದೇವಿ ಆಕೆಯ ಗಂಡ ಸೋಹನ್ ಮುಂತಾದವರ ಬ್ಯಾಂಕ್ ಖಾತೆಗೆ ಪರಿಹಾರದ ದುಡ್ಡು ರವಾನೆಯಾಗಿರುವ ದಾಖಲೆಯಿದೆ.



ಲೋಕಾಯುಕ್ತರೇನಾದರೂ ದಿಟ್ಟತನ ತೋರಿದ್ದೇ ಆದಲ್ಲಿ ಕಟ್ಟಾ ಮಗನ ಜೊತೆ ಯಡ್ಡಿ ಮಗನೂ ಖಂಡಿತ ಜೈಲುಪಾಲಾಗುತ್ತಾನೆ. ●

...ತ್ತು ಗೋಪಿ ವಿರುದ್ಧ ದೂರು ಕೊಟ್ಟಿದ್ದ. ...ರು ಇನ್ಸ್‌ಪೆಕ್ಟರ್ ಬಾಬು ಅಂಜನಪ್ಪ, ...ನ ಅಧಿಕಾರಿಯಾದರೂ ಕಟ್ಟಾ ಸರ್ಕಾರದ ...ಪಾಲಿಕೆ ಕೌನ್ಸಿಲರ್. ಮತ್ತೊಬ್ಬ ವಂಚಕ ಕಟ್ಟಾ ಕೃಪಾಕಟಾಕ್ಷದಿಂದ ಸಂಪಂಗಿರಾಮ ...ಗೆ ಬಿಜೆಪಿ ಟಿಕೆಟ್ ಗಿಟ್ಟಿಸಿ ಪಾಲಿಕೆ ...ಕಾಟಾಚಾರಕ್ಕಷ್ಟೇ ಎಫ್‌ಐಆರ್ ದಾಖಲಾ... ಇಟಾಸ್ಕಾ ಧೂರ್ತರನ್ನು ಬಂಧಿಸುವು ...ಚಾರಿಸುವುದಾಗಲಿ ಮಾಡಲೇ ಇಲ್ಲ. ...ಸೇರಿದಂತೆ ಶ್ರೀನಿವಾಸ್ ಮತ್ತು ಗೋಪಿ ...ಗಲೂರು ಠಾಣೆಯಲ್ಲಿ ಐಪಿಸಿ ಸೆಕ್ಷನ್ನಿನ 418 ಮತ್ತು 420 ಪ್ರಕರಣಗಳು ...ವು.

...ಫ್‌ಐಆರ್ ಪ್ರಕಾರವೇ ಸರ್ಕಾರ ಕ್ರಮ ಕಟ್ಟಾ ಮಗ ಜಗ್ಗ ಎಂದೋ ...ತ್ತು. ಈ ರೀತಿ ಬಂಡಿಕೊಡಿ ಗೋಹಳ್ಳಿಯ ...ದಜನ್ ದಲಿತ ಕುಟುಂಬ ಗಳಿಗೆ ...ಟೋಪಿ ಹಾಕಿತ್ತು. ಇದಕ್ಕೆ ಕಟ್ಟಾ ...ಡಿಸಿದವನು ಬೀಕೆ ಮಂಜ ಅಲಿಯಾಸ್ ...ಹಳ್ಳಿ ಮಂಜ ಎಂಬ ಲೋಕಲ್ ರೌಡಿ ...ಗ್ರಾಬರ್.

...ಗ್ ತಮ್ಮ ಕಾರಿನ ಡ್ರೈವರ್ ಮನೋಹರ್ ...ಹೆಸರಲ್ಲಿ ನಕಲಿ ದಾಖಲೆ ಹುಟ್ಟುಹಾಕಿ ...ಕೆಐಎಡಿಬಿಯ ದುಡ್ಡು ದೋಚಿದ್ದು ...ಕರ್ಮಕಾಂಡವಾಗಿತ್ತು. ಬಂಡಿಕೊಡಿಗೇ ...ರಿ ಭೂಮಿಗೆ ಕಳ್ಳ ದಾಖಲೆ ಸೃಷ್ಟಿಸಿದ ...ಮನೆ ಅಡ್ರೆಸ್ಸೊಂದು ಕೊಟ್ಟದ್ದು ಕಟ್ಟಾನ ...ದ ಬಂಗಲೆಯ ವಿಳಾಸವನ್ನು. 3 ಎಕರೆ ...ಸರ್ಕಾರಿ ಭೂಮಿಗೆ ಬೋಗಸ್ ದಾಖಲೆ ...ಲೆ 1.24 ಕೋಟಿ ರೂಪಾಯಿಗಳನ್ನು ...ದ ಲಪಟಾಯಿಸಿದ. ಕಟ್ಟಾ ಗ್ಯಾಂಗ್ ...ನೋಹರ್ ಸೋಣಿಯನ್ನು ಮುಂದೆ ...ಬಂದ ಅಷ್ಟೂ ದುಡ್ಡನ್ನು ಕಟ್ಟಾ ...ಂಟಿಗೆ ಸಾಗಿಸಿತ್ತು.

...ಯೂ ಬಾಗಲೂರು ಪೊಲೀಸ್ ಠಾಣೆಯಲ್ಲಿ ...ಲಾಯಿತಾದರೂ ಇದು ಕೂಡ ಎಫ್‌ಐ... ...ಷ್ಟೇ ಸೀಮಿತಗೊಂಡಿತ್ತು. ತಮ್ಮ ಮತ್ತೊಬ್ಬ ...ಹಮ್ಮದ್ ಇಸ್ಮಾಯಿಲ್‌ನ ಹೆಸರಲ್ಲಿ ...ಚಮತ್ಕಾರಕ್ಕೆ ಕೈ ಇಟ್ಟರು ಮಂತ್ರಿ ಕಟ್ಟಾ. ...ಡಿಗೆ ಹಳ್ಳಿಯಲ್ಲಿ ಯಾವುದೋ ಹೊಸ ...ರ್ ಒಂದನ್ನು ಸೃಷ್ಟಿಸಲಾಯ್ತು. ಅಸಲಿಗೆ ...ಇಲ್ಲದಿದ್ದರೂ ಕಾಗದದ ಮೇಲೆ ಮಾತ್ರ ...ವಂತೆ ಕತೆ ಕಟ್ಟಿ ಮೂರು ಕೋಟಿಯಷ್ಟು ...ಹಣವನ್ನು ಕೊಳ್ಳೆ ಹೊಡೆದಿದ್ದರು. ಹೀಗೆ ...ಇಸ್ಮಾಯಿಲ್ ಹೆಸರಿಗೆ ನಗದಾದ ದುಡ್ಡು ...ಟ್ಟಾ ಮಗಳ ಅಕೌಂಟಿಗೆ ಜಮೆಯಾಗಿತ್ತು.

...ದ್ಯ ಪೊಲೀಸ್ ಠಾಣೆಯ ಮೆಟ್ಟಲು ಹತ್ತಿದ ...ವರೆ ಗೊತ್ತೇ ಆಗದೆ, ಸದ್ದಿಲ್ಲದೇ ದುಡ್ಡು ...ಕೊಂಡ ಇಂಥ ಮೂವತ್ತಕ್ಕೂ ಹೆಚ್ಚು ...ಕಟ್ಟಾ ಕೈಗಾರಿಕಾ ಮಂತ್ರಿಯಾಗಿದ್ದ ಕಾಲಕ್ಕೆ ...ಗಿತ್ತು. ಹಾಗೇ ನೋಡಿದರೆ ಕಟ್ಟಾ ಮಗ ...ಟ್ಟಾ, ಧೂರ್ತ ಶ್ರೀನಿವಾಸ್, ಸಂಪಂಗಿರಾಮ ...ಪಿ ಕೌನ್ಸಿಲರ್ ಗೋಪಿ, ಬಂಡಿಕೊಡಿಗೇಹಳ್ಳಿ ...ನ್ಯಾಳದ ಬಿಜೆಪಿ ಕೌನ್ಸಿಲರ್ ಜಯಪ್ಪ ರೆಡ್ಡಿ ...ರೆಲ್ಲ ಸೇರಿ ದೋಚಿದ ಕೆಐಎಡಿಬಿಯ ...ಮೂರು ಕೋಟಿಗೂ ಅಧಿಕ.

...ಕಮೀಷನರ್ ಶಂಕರ್ ಬಿದರಿಯೇ ...ಪೊಲೀಸ್ ಇನ್ಸ್‌ಪೆಕ್ಟರ್ ಬಾಬು ...ಇಟಾಸ್ಕಾ ಸಂಬಂಧಿ ಎಲ್ಲಾ ಕೇಸುಗಳ ...ಜರುಗಿಸುವಂತೆ ಆದೇಶಿಸಿದ್ದಾರೆ. ಲೋಕಾ ...ಸ್.ಪಿ. ಮಧುಕರ್ ಶೆಟ್ಟಿ ಪಟ್ಟುಹಿಡಿದು ...ನ್ನು ಕೆದಕುತ್ತಿದ್ದಾರೆ. ಮುನಿ ಆಂಜನಪ್ಪನಿಗೆ ...ಫೋರ್ಜರಿ ಕೇಸು, ಡ್ರೈವರ್ ಸೋಣಿಯ ...ದಾಖಲೆ ಕೊಟ್ಟು ದುಡ್ಡು ದೋಚಿದ್ದು ...ಸೃಷ್ಟಿಸಿ ನಾಲ್ಕು ಕೋಟಿ ರೂಪಾಯಿಗಳ ...ನ್ನು ಲಪಟಾಯಿಸಿದ್ದು; ಈಗ ಅಂತಿಮವಾಗಿ ...ಸಾಕ್ಷಿಗೆ ಲಂಚ ಕೊಡಲು ಹೋಗಿ ...ಗಿದ್ದು... ಕತೆ ಇಲ್ಲಿಗೆ ಮುಗಿಯುವುದಿಲ್ಲ ...ಪಿ ಸುಬ್ರಮಣ್ಯನಾಯ್ಡುವಿನ ಕುತ್ತಿಗೆಗೂ

...ನ್ನು ಮುಂದೆ ಬಿಟ್ಟು ಪರಿಹಾರದ ದುಡ್ಡು ...ದಕ್ಕೆ ಏನೇನು ನೆರವಾಗಬೇಕೋ ಅಂಥ ...ತಂದೆ ಕಟ್ಟಾ ನಾಯ್ಡು ಕಲ್ಪಿಸಿಕೊಟ್ಟಿದ್ದಾರೆ. ...ಕತ್ತರಲ್ಲೇ ಈ ಬಗ್ಗೆ ಬೇಕಾಬಿಟ್ಟಿ ಸಾಕ್ಷ್ಯಾಧಾರ ...ಸಿದ್ಧ ಮಾಡಿದ್ದೆ. ಆದರೆ, ಕಟ್ಟಾ ಸುಬ್ರಮಣ್ಯ ...ಬಂಧಿಸುವುದು ಲೋಕಾಯುಕ್ತ ಸಂತೋಷ್ ...ಹೊಡ್ಡ ಕಷ್ಟವೇನಲ್ಲ. ■

ಏನಿದು ಹೊಸ ರಗಳೆ ದರ್ಶನ್?

ಛಾಲೆಂಜಿಂಗ್ ಸ್ಟಾರ್ ದರ್ಶನ್‌ಗೆ ಇತ್ತೀಚೆಗೆ ಅಪರಾಧಿ ಪ್ರಜ್ಞೆ ಕಾಡಲು ಶುರುವಾದಂತೆ ಕಾಣುತ್ತಿದೆ.

'ಪತ್ರಕರ್ತರು ನನ್ನ ಪರ್ಸನಲ್ ಲೈಫಿನ ಬಗ್ಗೆ ಬರೆಯುತ್ತಾರೆ.. ಈ ಜರ್ನಲಿಸ್ಟುಗಳನ್ನು ನನ್ನ ಮನೆ ಕಾಂಪೌಂಡಿನೊಳಗೂ ಬಿಟ್ಟುಕೊಳ್ಳುವುದಿಲ್ಲ? ಎಂದು ಒಮ್ಮೆ ಸಿಕ್ಕಾಪಟ್ಟೆ ಹಾರಾಡಿದ್ದರು. ಹೀಗೆ ಸುಖಾ ಸುಮ್ಮನೆ ಪತ್ರಕರ್ತರ ವಿರುದ್ಧ ದರ್ಶನ್ ಎಗರಾಡಿದಾಗ 'ಯಾಕೆ ಈತ ಮೀಡಿಯಾದವರ ಬಗ್ಗೆ ಈ ಪಾಟಿ ತಲೆ ಕೆಡಿಸಿಕೊಂಡಿದ್ದಾನೆ. ಬರೆಯಬಾರದ್ದು ಯಾರು ಬರೆದಿದ್ದಾರೆ?' ಎಂಬ ಪ್ರಶ್ನೆ ಎಲ್ಲರನ್ನೂ ಕಾಡಿತ್ತು.

ಆದರೆ ಈಗ ದರ್ಶನ್ ಸುತ್ತಲಿನ ಒಂದೊಂದೇ ಸುದ್ದಿಗಳು ಮೆಲ್ಲಗೆ ಹೊರಬೀಳುತ್ತಿವೆ. 'ತನ್ನ ಅಸಲೀ ಜಾತಕ ಎಲ್ಲಿ ಹೊರಬಿದ್ದುಬಿಡುತ್ತದೋ? ಎಂದು ಒಳಗೊಳಗೇ ಆತಂಕ ಕಾಡುತ್ತಿರುವಂತಿದೆ.

2009ರ ಮೇ ತಿಂಗಳಲ್ಲಿ ದರ್ಶನ್ ತಾಯಿ ಹೆತ್ತ ಮಕ್ಕಳ ಬದಲಾದ ಮಮತೆಯನ್ನು ಕಂಡು, ಅದರಿಂದ ಒಂದಿಷ್ಟು ಬೇಸತ್ತು ಬೆಂಗಳೂರು ತೊರೆದು ಮೈಸೂರಿನಲ್ಲಿ ತನ್ನ ಪತಿ ಕಟ್ಟಿದ್ದ ಸಿದ್ಧಾರ್ಥ ಲೇಔಟ್ ಮನೆಗೆ ಹೋಗಿ ವಾಸ್ತವ್ಯ ಹೂಡಿದ್ದರು. ನಂತರ ಮಕ್ಕಳು ಮತ್ತು ಬೆಂಗಳೂರು ಎಲ್ಲದರಿಂದ ದೂರ ಉಳಿದ ದರ್ಶನ್ ತಾಯಿ ಮೀನಾ ತೂಗುದೀಪ ಕಾಂಗ್ರೆಸ್ ಪಕ್ಷ ಸೇರಿ, ಅಷ್ಟಿಷ್ಟು ಸಮಾಜ ಸೇವೆ ಮಾಡಿಕೊಂಡು ಮೈಸೂರಿನಲ್ಲೇ ಬೀಡುಬಿಟ್ಟಿದ್ದಾರೆ. 'ರೆಕ್ಕೆ ಬಲಿತ ಮೇಲೆ ಮಕ್ಕಳು ಕೈಗೆ ಸಿಗುವುದಿಲ್ಲ' ಎಂದು ಮೀನಮ್ಮ ಕೊರಗುತ್ತಿದ್ದಾರೆ.

ಬದುಕಿನ ಹೋರಾಟದ ದಿನಗಳಲ್ಲಿ ಒಂದಾಗಿದ್ದ ಕುಟುಂಬವೊಂದು ಅನಿರೀಕ್ಷಿತವಾಗಿ ಹರಿದುಬರುವ ಯಶಸ್ಸು ಹಣ, ಕೀರ್ತಿಗಳ ಏಟಿಗೆ ಸಿಕ್ಕರೆ ಹೇಗೆ ತತ್ತರಿಸುತ್ತದೆ ಎನ್ನುವುದಕ್ಕೆ ದರ್ಶನ್ ಫ್ಯಾಮಿಲಿ ನೇರ ಉದಾಹರಣೆಯಾಗಿದೆ.

'ಮಕ್ಕಳೇ ನನ್ನ ಆಸ್ತಿ ಎರಡು ಮಕ್ಕಳು ನನ್ನೆರಡು ಕಣ್ಣುಗಳು' ಎಂದು ನಂಬಿ ಅವರ ಭವಿಷ್ಯ ರೂಪಿಸಿದ ತಾಯಿ, ಹೊಸದಾಗಿ ಸೇರಿದ ಸೊಸೆಯಂದಿರು. ಈ ತಾಯಿ ಮತ್ತು ಸೊಸೆಯಂದಿರ ಮಧ್ಯೆ ಮೂಡಿದ ಚಿಕ್ಕಪುಟ್ಟ ಮಿಸ್‌ಅಂಡರ್‌ಸ್ಟಾಂಡಿಗ್‌ಗಳು ಈ ನಡುವೆ ಸಂಸಾರದಲ್ಲಿ ಮೂಡುವ ಬಿರುಕು... ಇದು ಎಲ್ಲ ಮನೆಗಳಲ್ಲೂ ಇದ್ದದ್ದೇ. ಅದು ದರ್ಶನ್‌ನಂಥ ಸ್ಟಾರ್ ಕುಟುಂಬವನ್ನೂ ಹೊರತಾಗಿಸಿಲ್ಲ.

ಸಮಸ್ಯೆ ಇಷ್ಟೇ ಆಗಿದ್ದಿದ್ದರೆ ಯಾರೂ ತಲೆ ಕೆಡಿಸಿಕೊಳ್ಳುವ ಅನಿವಾರ್ಯವಿರಲಿಲ್ಲ. ಯಾವ ದರ್ಶನ್ ಸಭ್ಯ ಕಂಡಕಂಡಲ್ಲಿ ಹುಲ್ಲು ಮೇಯುವುದಿಲ್ಲ...' ಎಂದೆಲ್ಲಾ ಉದ್ಯಮ ಮತ್ತು ಅಭಿಮಾನಿಗಳು ನಂಬಿದ್ದರೋ ಅದನ್ನು ಸ್ವತಃ ದರ್ಶನ್ ಹುಸಿಯಾಗಿಸುತ್ತಿದ್ದಾರೆ. ದರ್ಶನ್‌ನ ಕೌಟುಂಬಿಕ ಕಲಹ ಈಗ ಬೀದಿಗೆ ಬೀಳುವ ಹಂತ ತಲುಪಿದೆ. ಹದಿನೈದಿಪ್ಪತ್ತು ದಿನಗಳಿಗೆ ಮುಂಚೆ ಮಧ್ಯ ರಾತ್ರಿ ತನ್ನ ಪತ್ನಿ ವಿಜಯಲಕ್ಷ್ಮಿಯೊಂದಿಗೆ ದರ್ಶನ್ ತಾರಾಮಾರ ಕಿತ್ತಾಡಿಕೊಂಡಿದ್ದಾನೆ. ಅದು ಯಾವ ಮಟ್ಟಕ್ಕೆ ಎಂದರೆ, ಆವೇಶಕ್ಕೆ ಒಳಗಾದ ದರ್ಶನ್ ಮನೆ ಮುಂದಿದ್ದ ಹೂಕುಂಡಗಳನ್ನು ಕುಕ್ಕಿ ಪುಡಿಮಾಡಿದ್ದಾನೆ. ಇದರಿಂದ ಗಾಬರಿಯಾದ ವಿಜಯಲಕ್ಷ್ಮಿ ನಡುರಾತ್ರಿಯ 12ರ ಸುಮಾರಿಗೆ ಮನೆಯಿಂದ ಹೊರಬಂದು ರಸ್ತೆ ಪಕ್ಕದಲ್ಲಿ ಕೂತುಬಿಟ್ಟಿದ್ದರಂತೆ. ಈ ವಿಷಯ ಅದೇ ರಸ್ತೆಯಲ್ಲಿರುವ ಮತ್ತೊಬ್ಬ ಮಾಜಿ ನಾಯಕ ನಟಗೂ ಗೊತ್ತಾಗಿದೆ. ಆದರೆ ಅವರ ವೈಯಕ್ತಿಕ ಜಗಳದಲ್ಲಿ ಮಧ್ಯಪ್ರವೇಶಿಸುವುದು ಬೇಡ ಎಂದು ಜಗಳ, ಕೂಗಾಟವನ್ನು ಕಂಡೂ ಆ ನಟ ಸುಮ್ಮನಾಗಿದ್ದಾರೆ. ಆದರೆ ಇತರ ಅನೇಕ ಜನ ಇದನ್ನು ನೋಡಿದ್ದಾರೆ.

ಹೀಗೆ ಹಾದಿ, ಬೀದಿ ತನಕ ಗೊತ್ತಾಗಿರುವ ದರ್ಶನ್ ದಾಂಪತ್ಯ ಕಲಹದ ವಿಚಾರ ಈಗ ರಾಜರಾಜೇಶ್ವರಿ ನಗರವನ್ನೂ ಧಾಟಿ, ಸದಾಶಿವನಗರದವರೆಗೂ ಹಬ್ಬಿದೆ. ಸ್ವತಃ ದರ್ಶನ್ ಪತ್ನಿ ವಿಜಯಲಕ್ಷ್ಮಿ ತನ್ನ ಗಂಡನನ್ನು ಸರಿ ಮಾಡಿಕೊಡಿ, ಆತನಿಗೊಂದಿಷ್ಟು ಬುದ್ಧಿವಾದ ಹೇಳಿ ಎಂದು ಶಿವರಾಜ್



ಕುಮಾರ್ ಮತ್ತು ಗೀತಾ ಶಿವರಾಜ್‌ಕುಮಾರ್‌ರನ್ನು ಕೇಳಿಕೊಂಡಿದ್ದಾರಂತೆ.

ಈಗ ಒಂದು ವಾರಕ್ಕೆ ಮುಂಚೆ ದರ್ಶನ ಸಹೋದರ ದಿನಕರ್‌ನ ಚಂದ್ರಾ ಲೇಔಟ್ ಮನೆಯಲ್ಲಿ ಸಂಧಾನ ಸಭೆಯೊಂದು ನಡೆದು 'ಇನ್ನು ಮುಂದೆ ಗಂಡ ಹೆಂಡಿರು ಕಿತ್ತಾಡಿಕೊಳ್ಳಬಾರದು' ಎಂದು ತೀರ್ಮಾನವಾಗಿದೆ.



ನಿಖಿತಾ ಮತ್ತು ದರ್ಶನ್ ಜಗಿತ!

ಇತ್ತೀಚಿನ ದಿನಗಳಲ್ಲಿ ದರ್ಶನ್ ಮೊದಲಿನಂತಿಲ್ಲ. ನಟಿ ಶಿರಿನ್‌ಜೊತೆ ಒಂದಷ್ಟು ದಿನ ಐಟಂ ಸಾಂಗ್‌ನಲ್ಲಿ ಕಾಣಿಸಿಕೊಂಡ ಚಾಲೆಂಜಿಂಗ್ ಸ್ಟಾರ್ ಈಗ ನಟಿ ನಿಖಿತಾಳೊಂದಿಗೆ ಹಗಲೂ ರಾತ್ರಿಯೆನ್ನದೆ ನಿಗಿನಿಗಿ ನರ್ತಿಸಲು ಶುರುಮಾಡಿದ್ದಾರೆ. ಸದ್ಯ ಮೈಡೂರಿನಲ್ಲಿ 'ಪ್ರಿನ್ಸ್' ಚಿತ್ರದ ಶೂಟಿಂಗ್‌ನಲ್ಲಿ ತೊಡಗಿರುವ ದರ್ಶನ್ ಮೈಸೂರಿನ ಸಂದೇಶ್ ಹೋಟೆಲ್‌ನಲ್ಲಿ ಬಿಡಾರ ಹಾಕಿದ್ದಾರೆ. ಮೈಸೂರಿನಲ್ಲೇ ತನ್ನ ತಾಯಿ ಮತ್ತು ಸ್ವಂತ ಮನೆಯನ್ನೂ ಹೊಂದಿರುವ ದರ್ಶನ್ ಹೋಟೇಲ್‌ನಲ್ಲಿ ತಂಗುವ ಅಗತ್ಯವೇ ಇಲ್ಲ, ಹಾಗೊಮ್ಮೆ ಹೋಟೇಲ್‌ನಲ್ಲಿ ಉಳಿಯುವ ಅಗತ್ಯವಿದ್ದರೂ ಪ್ರತ್ಯೇಕ ರೂಂನಲ್ಲಿರಬಹುದಿತ್ತು, ಆದರೆ ನಿಖಿತಾಳ ರೂಮಿನಲ್ಲೇ ಪ್ರತಿ ದಿನವೂ ಪವಡಿಸುವ ಅನಿವಾರ್ಯ ದರ್ಶನ್‌ಗೆ ಏನಿತ್ತೋ ಸಂದೇಶ್ ಹೋಟೆಲ್‌ನ ಗೋಡೆಗಳೇ ಹೇಳಬೇಕು! ಇನ್ನು ಚಿತ್ರೀಕರಣದ ಬಿಡುವು ಸಿಕ್ಕರೆ ನಿಖಿತಾಳೊಂದಿಗೆ ದರ್ಶನ್ ಬಾಂಬೆ ಟೂರ್ ಹೊರಟುನಿಲ್ಲುತ್ತಾರೆ ಅಥವಾ ಯುಬಿ ಸಿಟಿಯಲ್ಲಿ ಪಾರ್ಟಿಗೆ ಹಾಜರಾಗುತ್ತಾರೆ ಎಂಬ ಮಾತುಗಳೂ ಇವೆ.

ಹೀಗೆ ಚಿತ್ರೀಕರಣದ ನೆಪದಲ್ಲಿ ವಾರಗಟ್ಟಲೆ ಮನೆಗೆ ಬರದೇ ಇರುವುದು, ಮತ್ತು ಆತನಲ್ಲಿ ಬದಲಾದ ನಡವಳಿಕೆಗಳು ದರ್ಶನ್ ಹೆಂಡತಿ ವಿಜಯಲಕ್ಷ್ಮಿಯ ಅನುಮಾನದ ಬೆಂಕಿಗೆ ಮತ್ತಷ್ಟು ತುಪ್ಪ ಸುರಿದಿದೆ. ದರ್ಶನ್ ತನ್ನ ಬಹುಪಾಲು ಆಸ್ತಿಯನ್ನು ವಿಜಯಲಕ್ಷ್ಮಿ ಹೆಸರಿನಲ್ಲೇ ಇಟ್ಟಿದ್ದಾನಂತೆ. ಕೇವಲ ಆಸ್ತಿ ಅಂತಸ್ತುಗಳನ್ನು ಆಕೆಯ ಹೆಸರಿನಲ್ಲಿ ಇಟ್ಟ ಮಾತ್ರಕ್ಕೆ ತನ್ನನ್ನು ಬೇರೇನೂ ಪ್ರಶ್ನಿಸಬಾರದು ಎಂಬ ಮನಸ್ಥಿತಿ ದರ್ಶನ್‌ನದ್ದು.

ದರ್ಶನ್ ನಟಿ ನಿಖಿತಾಳೊಂದಿಗೆ ಅದೆಂಥ ನಂಟು ಹೊಂದಿದ್ದಾನೋ ಗೊತ್ತಿಲ್ಲ, 'ಯೋಧ' ದಲ್ಲಿ ನಟಿಸಿದ ನಂತರ ನಿಖಿತಾಳೊಂದಿಗೆ 'ಪ್ರಿನ್ಸ್'ನಲ್ಲೂ ಅವಕಾಶ ಸಿಕ್ಕಿತು. ಮುಂದೆ ನಿರ್ಮಾಣವಾಗಲಿರುವ 'ಸಂಗೊಳ್ಳಿ ರಾಯಣ್ಣ' ಚಿತ್ರಕ್ಕೂ ದರ್ಶನ್ ಜೊತೆ ನಿಖಿತಾ ನಟಿಸುವುದಾಗಿ ನಿಕ್ಕಿಯಾಗಿದೆ.

ಪೊರ್ಕಿ ಪೊಗರು...!

ದರ್ಶನ್‌ಗೆ ತಾನು ನಟಿಸುವ ಸಿನಿಮಾದ ಪಾತ್ರಗಳಿಗೂ, ಸಾರ್ವಜನಿಕ ಬದುಕಿಗೂ, ಪರ್ಸನಲ್ ಲೈಫಿಗೂ ವ್ಯತ್ಯಾಸವೇ ತಿಳಿದಂತಿಲ್ಲ. ಎಲ್ಲಡೆಯೂ ಈತನದ್ದು ಒಂದೇ ರೀತಿಯ ಪೊಗರೇ. ಹೀಗಾಗೇ ದರ್ಶನ್ ಮೇಲಿಂದ ಮೇಲೆ ವಿವಾದಗಳಲ್ಲಿ ಸಿಕ್ಕಿಬೀಳುವುದು. ಕಾಸು ಕೊಟ್ಟರೆ ಚೆಡ್ಡಿ ತೊಟ್ಟು ನಟಿಸುತ್ತೇನೆ ಎಂದು ಹಿಂದೊಮ್ಮೆ ಹೇಳಿಕೆ ಕೊಟ್ಟಿದ್ದು ನಟಿ ಜಯಮಾಲಾ ಸತ್ತರೂ ಮುಖಕ್ಕೆ ಬಣ್ಣ ಹಚ್ಚುತ್ತೇನೆ ಎಂದಿದ್ದು, ನಿರ್ಮಾಪಕ ರಮೇಶ್ ಯಾದವ್ ದುಡ್ಡು ಕೊಟ್ಟಿಲ್ಲ ಎಂಬ ಕಾರಣಕ್ಕೆ ಚಿತ್ರೀಕರಣಗೊಂಡ ರೀಲುಗಳನ್ನು ಹೊತ್ತೊಯ್ದಿದ್ದು, ಪತ್ರಕರ್ತರ ವಿರುದ್ಧ ಈತ ಆಡಿರುವ ಅವಹೇಳನಕಾರಿ ಮಾತುಗಳು ಮತ್ತು ಈಗ ಸಂಸಾರದಲ್ಲೂ ಎಡವಟ್ಟು ಮಾಡಿಕೊಳ್ಳುತ್ತಿರುವುದು ದರ್ಶನ್ ನಿಜಜೀವನದಲ್ಲೂ 'ಹೀರೋಯಿಸಂ'ಗೆ ಗಂಟುಬಿದ್ದಿರುವುದನ್ನು ಸ್ಪಷ್ಟವಾಗಿ ತೋರಿಸುತ್ತಿದೆ. ದರ್ಶನ್‌ಗೆ ನಿಜಕ್ಕೂ ಒಳ್ಳೆ ಸಿನಿಮಾಗಳಲ್ಲಿ ನಟಿಸಬೇಕು, ಜನರ ನೆನಪಿನಲ್ಲಿ ಉಳಿಯುವಂಥ ಕಲಾವಿದನಾಗಬೇಕು ಎಂಬ ಬಯಕೆಯೇ ಇದ್ದಂತಿಲ್ಲ.

ಇರುವ ನಟರಲ್ಲೇ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ದರ್ಶನ್ ಹೀಗೆ ಕಾಲಿಟ್ಟಲ್ಲೆಲ್ಲಾ ಆಭಾಸಗಳನ್ನು ಸೃಷ್ಟಿಸಿಕೊಳ್ಳುವುದನ್ನು ಬಿಡಬೇಕಿದೆ. ದರ್ಶನ್‌ಗಿನ್ನೂ ವಯಸ್ಸಿದೆ. ಅವಕಾಶಗಳೂ ಇವೆ. ಹಣ, ಕೀರ್ತಿ, ಪಡೆದಾಗಿದೆ. ಆದರೆ ವಿವೇಕ ಒಂದು ಇರುವಂತೆ ಕಾಣುತ್ತಿಲ್ಲ. ತನ್ನ ಹಾಗೂ ಕುಟುಂಬದ ಹಿತದೃಷ್ಟಿಯಿಂದಲಾದರೂ ದರ್ಶನ್ ಬದಲಾದರೆ ಒಳಿತು..

● ಆದಿತ್ಯ


'ಫೈರ್' ಹುಡುಗಿ ನಿಖಿತಾ!



ಈ ನಿಖಿತಾ ಮುಂಬೈ ಬೆಡಗಿ ಹೆಚ್ಚು ಹೆಸರು ಮಾಡಿದ್ದು ತಮಿಳು ಮತ್ತು ತೆಲುಗು ಚಿತ್ರರಂಗದಲ್ಲಿ. ಆರಂಭದಲ್ಲಿ ಹೀರೋಯಿನ್ ಆಗಲೆಂದು ಬಂದ ನಿಖಿತಾಗೆ ತಮಿಳು ತೆಲುಗಲ್ಲಿ ಸಿಕ್ಕಿದ್ದು ಬರೀ ಐಟಂ ನಟಿ ಪಾತ್ರಗಳೇ. ಇದೇ ಹೊತ್ತಿಗೆ ಆಕೆಗೆ ರತ್ನಗಂಬಳಿ ಹಾಸಿ 'ರಾಜಕುಮಾರಿ'ಯನ್ನಾಗಿ ಮಾಡಿ ಕನ್ನಡಕ್ಕೆ ಕರೆತಂದವರು ಗಂಡುಗಲಿ ಕೊಬ್ಬರಿ ಮಂಜು. ನಂತರ ಉಪೇಂದ್ರನ ದುಬೈ ಬಾಬು, ಪುನೀತ್ ಜೊತೆಗೆ ವಂಶಿ, ದರ್ಶನ್‌ನ ಯೋಧ ಚಿತ್ರಗಳಲ್ಲಿ ನಟಿಸಿದ್ದಳು. ಹೀಗೆ ಪರಭಾಷೆಗಳಲ್ಲಿ ಐಟಂ ನಟಿಯಾಗಿ ಇಲ್ಲಿ ದೊಡ್ಡ ನಟರೊಂದಿಗೆ ನಟಿಸುವ ಹೀರೋಯಿನ್‌ಳಂತೆ ಅವತಾರವೆತ್ತಿದ ನಿಕಿತಾ ಮೊದಮೊದಲು ಕಿರಿಕ್ಕು ಮಾಡಿಕೊಂಡಿದ್ದು ನಿರ್ದೇಶಕ ಓಂಪ್ರಕಾಶ್ ಜೊತೆ ಎಕೆ 56ನಲ್ಲಿ. ಅಪ್ಸರಲ್ಲಾಗಲೇ ಇದೇ ಓಂ ಜೊತೆ 'ಯೋಧ' ದಲ್ಲಿ ಕೆಲಸ ಮಾಡಿದ್ದ ನಿಖಿತಾಳನ್ನು 'ಎಕೆ 56' ಚಿತ್ರದಲ್ಲಿ 'ಈಕೆ ಸರಿಯಾಗಿ ಅಡ್ಜೆಸ್ಟ್ ಆಗುತ್ತಿಲ್ಲ, ತುಂಡು ಉಡುಗೆ ತೊಡಲು ನಖರಾ ಮಾಡ್ತಾಳೆ' ಎಂದು ಓಂ ಪ್ರಕಾಶ್ ಈಕೆಯನ್ನು ಚಿತ್ರದಿಂದ ಹೊರದಬ್ಬಿದ್ದರು. ನಿಖಿತಾ ಕಾಸ್ಟೂಮ್ ವಿಚಾರದಲ್ಲಿ ಅಡ್ಜೆಸ್ಟ್ ಆಗಲಿಲ್ಲವಾ ಅಥವಾ ಬೇರಿನ್ಯಾವ ಕಾರಣಕ್ಕೋ ಎಂಬುದು ಆಗ ಗಾಂಧಿನಗರವನ್ನು ಕಾಡಿದ್ದ ಪ್ರಶ್ನೆ. ನಿಖಿತಾ ಕೂಡಾ 'ಓಂ ಪ್ರಕಾಶ್ ನನಗೆ ಕಿರುಕುಳ ಕೊಟ್ಟಿದ್ದಾರೆ' ಎಂದು ಘೋರವಾಗಿ ಆರೋಪಿಸಿದ್ದಳು. ಒಬ್ಬರನ್ನೊಬ್ಬರು ಇಷ್ಟೆಲ್ಲಾ ಪರಚಿಕೊಂಡ ನಂತರವೂ ಓಂ ಪ್ರಕಾಶ್ ಮತ್ತು ನಿಖಿತಾ 'ಪ್ರಿನ್ಸ್' ಚಿತ್ರದಲ್ಲಿ ಮತ್ತೆ ಒಂದಾಗಿದ್ದೂ ಆಯಿತು. ಓಂ ಪ್ರಕಾಶ್ ನಿಖಿತಾಳ 'ಕ್ಯಾರೆಕ್ಟರ್' ಬಲ್ಲವರೆಲ್ಲಾ ಅಂತೂ ಮೇಡ್ ಫಾರ್ ಈಚ್ ಅದರ್ ಎಂದು ಗೊಣಗಿದ್ದುಂಟು!

ಹೀಗೆ ಹಲವಾರು ಕಿರಿಕಿರಿಗಳ ನಡುವೆ ಬಹಳಷ್ಟು ಸಿನಿಮಾಗಳಲ್ಲಿ ನಟಿಸುವ ನಿಖಿತಾ ರಾತ್ರಿಯಾಯಿತೆಂದರೆ ಕಂಠಮಟ್ಟ ಕುಡಿದು ಪಾಡ್ಸುಗಳಲ್ಲಿ ರಾದ್ಧಾಂತ ಎಬ್ಬಿಸುತ್ತಾಳೆ, ಹೇರ್ ಡ್ರೆಸ್ ಹುಡುಗಿಯರನ್ನು ರಾತ್ರಿಯಿಡೀ ಜಡೆ ಹೆಣೆಯುವಂತೆ 'ಕಿರುಕುಳ' ಕೊಡುತ್ತಾಳೆ.. ಎಂಬಿತ್ಯಾದಿ ಆರೋಪಗಳಿವೆ. ಈಗ ಈ 'ಫೈರ್' ನಿಖಿತಾಳೊಂದಿಗೆ ದರ್ಶನ್ ಹೆಸರು ತಳುಕು ಹಾಕಿಕೊಂಡಿರುವುದೇ ರಂಗೀನ್ ದುನಿಯಾದ ಹೊಸ ಅಬ್ಬರ!

ವೀರಶೈವ ಮಹಾಸಭಾ ಯಡ್ಡಿ ಫ್ಯಾಮಿಲಿ ಪ್ರಾಪರ್ಟಿ



ಕರ್ನಾಟಕದ ಬಲಿಷ್ಠ ಜಾತಿ ಜನಾಂಗವಾಗಿರುವ ಲಿಂಗಾಯತರಿಗೆ ಅಖಿಲ ಭಾರತ ವೀರಶೈವ ಮಹಾಸಭಾ ಎಂಬ ಬೃಹತ್ ಸಂಘಟನೆಯಿದೆ. ಅದಕ್ಕೆ ಕೋಟಿಗಟ್ಟಲೇ ಬೆಲೆಯ ಆಸ್ತಿ, ಲಕ್ಷಗಟ್ಟಲೆ ತಿಂಗಳ ವರಮಾನವೂ ಇದೆ. ರಾಜ್ಯದ ಸಮಸ್ತ ಲಿಂಗಾಯತ ಮಠಗಳು, ಮಠಾಧೀಶರುಗಳು ವೀರಶೈವ ಮಹಾಸಭಾ ದೊಂದಿಗೆ ಇರುತ್ತಾರೆ. ಇದಕ್ಕೆ ಲಕ್ಷಾಂತರ ಸಂಖ್ಯೆಯಲ್ಲಿ ಲಿಂಗಾಯತ ಮೆಂಬರುಗಳೂ ಇದ್ದಾರೆ.

ಇಂಥ ವೀರಶೈವ ಮಹಾಸಭಾ ಈಗ ಮುಖ್ಯಮಂತ್ರಿ ಯಡಿಯೂರಪ್ಪನ ಫ್ಯಾಮಿಲಿ ಪ್ರಾಪರ್ಟಿಯಾಗುತ್ತಿದೆ.

ಕಳೆದ ವಾರವಷ್ಟೇ ಯಡ್ಡಿಯ ಸಂಸದ ಪುತ್ರ ರಾಘವೇಂದ್ರನನ್ನು ಅಖಿಲ ಭಾರತ ವೀರಶೈವ ಮಹಾಸಭಾದ ಯುವ ವೇದಿಕೆ ಘಟಕದ ಅಧ್ಯಕ್ಷನನ್ನಾಗಿ ನೇಮಿಸಲಾಗಿದೆ. ಅತ್ತ ವೀರನೂ ಅಲ್ಲದ ಇತ್ತ ಶೈವನೂ ಆಗಿರದ ಬ್ರಾಹ್ಮಣ ಹೆಸರಿನ ರಾಘವೇಂದ್ರ, ಹೀಗೆ ಏಕಾಏಕಿ ಲಿಂಗಾಯತ ಜಾತಿ ಸಂಘದ ನಾಯಕನಾಗಿ ಅವತಾರವೆತ್ತಿರುವ ಹಿಂದೆ ಅನೇಕ ಮಸಲತ್ತುಗಳೂ, ಲೆಕ್ಕಾಚಾರಗಳೂ ಕಾಣಿಸುತ್ತಿವೆ.

ಇದಕ್ಕೆ ಹಿನ್ನೆಲೆಯಾಗಿ ಇನ್ನೂ ಒಂದೆರಡು ವಿಚಾರಗಳನ್ನು ಹೇಳಬೇಕು. ಯಡ್ಡಿಯ ಪುತ್ರಿ ಅರುಣಾ ಈಗಾಗಲೇ ವೀರಶೈವ ಮಹಾಸಭಾದ ಮಹಿಳಾ ಘಟಕದ ಕಾರ್ಯದರ್ಶಿಯಾಗಿದ್ದಾರೆ. ಅಷ್ಟೇ ಅಲ್ಲ ಯಡ್ಡಿಯ ಬೀಗಿತ್ತಿ ಅರ್ಥಾತ್ ಅಳಿಯ ಸೋಹನ್ ಕುಮಾರ್‌ನ ತಾಯಿ ವಿನೋದಾ ನಟರಾಜ್ ಕೂಡಾ ವೀರಶೈವ ಮಹಿಳಾ ಘಟಕದ ಗೌರವಾಧ್ಯಕ್ಷೆಯಾಗಿ ಕುರ್ಚಿ ಹಿಡಿದಿದ್ದಾರೆ. ಈಕೆ ಯಡ್ಡಿಯ ಮಗಳು ಉಮಾದೇವಿಯ ಖಾಸಾ ಅತ್ತೆ. ಹೀಗೆ ಈ ಅತ್ತೆ-ಕತ್ತೆಗಳೆಲ್ಲಾ ವೀರಶೈವ ಮಹಾಸಭಾವನ್ನು ಕಂಟ್ರೋಲಿಗೆ ತೆಗೆದುಕೊಳ್ಳುತ್ತಿರುವಾಗಲೇ ವಿ.ಸೋಮಣ್ಣ ಮಂತ್ರಿಯಾದ ಮರುಗಳಿಗೆಯಲ್ಲೇ ಇನ್ನೊಂದು ಬಾಂಬ್ ಹಾಕಿದ್ದಾರೆ.


ಅದು ಮಹಾಸಭಾದ ಅಧ್ಯಕ್ಷ ಭೀಮಣ್ಣ ಖಂಡ್ರೆ ವಿರುದ್ಧ ಹಾಕಿದ ಮಾತಿನ ಬಾಂಬ್. ಯಡ್ಡಿಯ ಲಿಂಗಾಯತ ಕ್ಯಾಬಿನೆಟ್‌ನ ಹೊಸ ಸೇರ್ಪಡೆ ವಿ.ಸೋಮಣ್ಣ ಸಚಿವನಾಗಿ ಪ್ರಮಾಣವಚನ ಸ್ವೀಕರಿಸಿದ ತಕ್ಷಣ ನೇರ ಸಿದ್ಧಗಂಗಾ ಮಠಕ್ಕೆ ಹೋಗಿ ಕರ್ನಾಟಕ ರತ್ನದ ಕಾಲಿಗೆ ಬಿದ್ದರು. ನಂತರ ಅಲ್ಲಿಂದಲೇ ಒಂದು ಫರ್ಮಾನು ಹೊರಟಿತು.

"ವೀರಶೈವ ಮಹಾಸಭಾಗೆ ಖಂಡ್ರೆ ಒಬ್ಬರೇ ಅಧ್ಯಕ್ಷರಾಗಿರಬೇಕಾ? ಅವರು ಜಾಗ ಖಾಲಿ ಮಾಡಿ ಯುವಕರಿಗೆ ಅವಕಾಶ ಕೊಡಲಿ" ಅಂದಿದ್ದರು ಸೋಮಣ್ಣ.

ಈ ಧಮಕಿಯ ಮಾತುಗಳು ಸಿದ್ಧಗಂಗಾ ಸ್ವಾಮಿಗಳ ಸಮ್ಮುಖದಲ್ಲೇ ಹೊರಟವೆಂಬುದು ಗಮನಾರ್ಹ. ಸೋಮಣ್ಣನ ಈ ಹೇಳಿಕೆಗೆ ಸುತ್ತೂರು ಮಠದ ಸ್ವಾಮಿಯ ಕುಮ್ಮಕ್ಕು ಇತ್ತೆಂಬುದು ಈಗ ಗುಟ್ಟೇನಲ್ಲ.

ರಾಜಕೀಯ ಕಾರಣಗಳು

ಯಡ್ಡಿ ಮುಖ್ಯಮಂತ್ರಿಯಾದಾಗಿನಿಂದಲೂ ಲಿಂಗಾಯತ ಮಠಗಳಿಗೆ ನೂರಾರು ಕೋಟಿ ರೂಪಾಯಿಗಳ ಸರ್ಕಾರಿ ಅನುದಾನ ಕೊಡುತ್ತಾ ಬರುತ್ತಿದ್ದಾರೆ. ತಾನು ಬಿಜೆಪಿಯ ನಾಯಕ ಎಂಬುದಕ್ಕಿಂತ ಲಿಂಗಾಯತರ ರಾಜಕೀಯ ನಾಯಕ ಎಂದು ಬಿಂಬಿಸಿಕೊಳ್ಳಲು ಯಡ್ಡಿ ಬಯಸುತ್ತಿದ್ದಾರೆ. ಹಾಗಾಗಿಯೇ ಹಿಂದೆಂದೂ ಇರದಷ್ಟು ಸಂಖ್ಯೆಯಲ್ಲಿ ಅಂದರೆ ಹನ್ನೊಂದು ಮಂದಿ ಲಿಂಗಾಯತರು ಈಗ ಮಂತ್ರಿಗಳಾಗಿದ್ದಾರೆ. ಜೊತೆಗೆ ಪೊಲೀಸ್, ಗೂಢಚರ್ಯೆ, ಕೈಗಾರಿಕೆ, ಅಬಕಾರಿ, ಗ್ರಾಮೀಣಾಭಿವೃದ್ಧಿ ಮುಂತಾದ ಇಲಾಖೆಗಳ ಆಯಕಟ್ಟಿನ ಸ್ಥಾನಗಳಿಗೆ ಲಿಂಗಾಯತ ಉನ್ನತಾಧಿಕಾರಿಗಳನ್ನೇ ತಂದು ಯಡ್ಡಿ ಕೂರಿಸುತ್ತಿದ್ದಾರೆ. ಅದೆಷ್ಟೋ ಇರದ ಕಾಂಜಿಪೀಂಜಿ ಲಿಂಗಾಯತ ಮಠಗಳಿಗೂ ಈಗ 25 ಲಕ್ಷ, 50 ಲಕ್ಷದ ಸರ್ಕಾರಿ ದುಡ್ಡನ್ನೂ ಯಡ್ಡಿ ಮೂಲಕ ಗಿಟ್ಟಿಸುವುದು ಸಲೀಸಾಗಿ ಬಿಟ್ಟಿದೆ.



ಬಹುಶಃ ಯಡ್ಡಿ ಬಹಳ ದೂರದ ತನಕ ಯೋಚಿಸುತ್ತಿರುವಂತೆ ಕಾಣುತ್ತಿದೆ. ರಾಜ್ಯ ಬಿಜೆಪಿ ಈಗ ಒಡೆದ ಮನೆ. ರೆಡ್ಡಿಗಳೊಂದು ಕಡೆ, ಅನಂತು ಗ್ಯಾಂಗ್ ಮತ್ತೊಂದೆಡೆ ಯಡ್ಡಿಯನ್ನು ಎಳೆದಾಡುತ್ತಿವೆ. ಅತ್ತ ದೆಹಲಿಯಲ್ಲು ಹೈಲ್ಯಾನ್ ಗಡ್ಕರಿ ಗುಂಪು, ವರಮಹಾಲಕ್ಷ್ಮಿ ಸುಷ್ಮಾ ಗ್ಯಾಂಗು, ಅಡ್ವಾನಿ ಗುಂಪುಗಳು ಕೋಲ್ಡ್‌ವಾರ್ ಮಾಡಿಕೊಳ್ಳುತ್ತಿವೆ.

ಈ ಗುಂಪುಗಾರಿಕೆಯ ಸಂಘರ್ಷಕ್ಕೆ ಸಿಲುಕಿ ಚಿಂದಿಯಾಗಬಾರದೆಂದರೆ ತನಗೆ ಬಜೆಪಿ ಚೌಕಟ್ಟಿನಿಂದಾಚೆಗೂ ಒಂದು ಬೆಂಬಲದ ಗುಂಪು, ಸ್ಥಾನಮಾನ, ಪ್ರಭಾವ ಇದ್ದರೆ ಒಳಿತೆಂದು ಯಡ್ಡಿಗೆ ಅನಿಸಿದೆ.

ಹಾಗಾಗಿಯೇ ಯಡ್ಡಿ ಈಗ ಸಂಪೂರ್ಣ ಲೀಡರ್ ಆಗಲು ಹೊರಟು ನಿಂತಿದ್ದಾರೆ.

ಅಖಿಲ ಭಾರತ ವೀರಶೈವ ಮಹಾ ಸಭಾ... ಮಾಡಿಕೊಳ್ಳಲು ಹೊರಟಿರುವುದು ಅದೇ ...

ಈ ಹಿಂದೆ ಬಿಜೆಪಿಗಳು ಕೆಎಂಎಫ್ ... ಮಾಡಿಕೊಂಡರು. ಆದರೆ ಅದು ರೆಡ್ಡಿ ಗ... ಬಣಕ್ಕೆ ಹೋಯಿತು. ಈಗ ಯಡ್ಡಿಗೆ ಉ... ಜಾತಿ ಹೆಸರಿನ ಸಂಘಟನೆಯೊಂದೇ ಆಗಿದೆ.

ಹಾಗೆಂದು ಯಡ್ಡಿಯಾಗಲಿ ಈತನ ಚೆಡ್ಡಿ ... ಲಿಂಗಾಯತ ಸಂಘದ ಪದಾಧಿಕಾರಿಗಳಾಗಬಾ... ಅಲ್ಲ, ಆದರೆ ವೀರಶೈವ ಮಹಾಸಭಾದ ... ಯಾಗಬೇಕೆಂದರೆ ಅದಕ್ಕೂ ಕೆಲವು ರೀತಿರಿ... ಬೈಲಾ ಇದೆ. ಪದಾಧಿಕಾರಿಗಳು ಚುನಾವ... ಆರಿಸಿಬರಬೇಕಾಗುತ್ತದೆ. ಆದರೆ ಮಹಾಸಭಾ... ಯೊಂದಿಗೆ ಯಡ್ಡಿ ಎಂತದ್ದೋ ಒಂದ... ಕುದುರಿಸಿದಂತೆ ಕಾಣುತ್ತಿದೆ. ಖುದ್ದು ಖಂಡ್ರೆಯ... ನಿಂತು ರಾಘವೇಂದ್ರನನ್ನು ಯುವ ವೇದಿ... ಅಧ್ಯಕ್ಷನನ್ನಾಗಿಸಿದ್ದಾರೆ. ಈ ಹಿಂದಿನ ಅಧ್ಯಕ್ಷ ... ಸೋಡಾ ಚೀಟಿ ಕೊಟ್ಟು... ಲಾಗಿದೆ. ಸಕ್ಕರೆ ಕಾರ್ಖಾನೆ... ಖಂಡ್ರೆ ಕೋಟ್ಯಂತರ ರೂ... ಮಾಡಿರುವುದು, ಕುಟುಂಬ... ಆಸ್ತಿ ವ್ಯವಹಾರಗಳಿಗೆ... ಕಾನೂನಿನ ಕೊಡುವ ಭ... ದ್ದಾರಂತೆ. ಅವಕ್ಕೆ ಪ್ರತು... ಈಗ ರಾಘವೇಂದ್ರನಿಗೆ ಖ... ಸಭಾದ ನಾಯಕ ಸ್ಥಾನ ಕ...


ಸದ್ಯಕ್ಕೆ ಕರ್ನಾಟಕದ... ಮುಖ್ಯ ರಾಜಕೀಯ... ಕಾಣುತ್ತಿವೆ. ಕರ್ನಾಟಕ ... ವಾಗುವುದು ಹೆಚ್ಚುತ್ತಿದೆ. ಬಿಜೆಪಿಯೊಳಗೆ ಲಿ... ಪ್ರಾಬಲ್ಯ ಜಾಸ್ತಿಯಾಗುತ್ತಿದೆ ಕೊನೆಯದಾ... ಯೊಳಗಿರುವ ಹಾಗೂ ಹೊರಗಿರುವ ಲಿಂಗಾ... ಯಡ್ಡಿ ಅಂಡ್ ಫ್ಯಾಮಿಲಿಯವರೇ ನಾಯ... ಹೊರಟದ್ದಾರೆ.

• ಪಾವ...

ಬಸವತತ್ವಕ್ಕೆ ದ್ರೋಹ ಬಗೆದ ಖಂಡ್ರೆ-ಮುದ್ನಾಳ

ಅಖಿಲ ಭಾರತ ವೀರಶೈವ(ಲಿಂಗಾಯತ) ಮಹಾಸಭೆಗೆ ತೊಗಲು ಬಾವಲಿಯಂತೆ ತಗಲು ಬಿದ್ದಿರುವ ಭೀಮಣ್ಣ ಖಂಡ್ರೆ ಮಹಾ ಪಾಕಡಾ ಆಸಾಮಿ. ಈ ಮನುಷ್ಯ ಅ.ಭಾ.ವೀ.ಮ.ಸಭೆಗೆ ಕಡಿದು ಕಟ್ಟೆ ಹಾಕಿದ್ದು ನಮ್ಮೆಲ್ಲರ ಕಣ್ಣ ಮುಂದೆಯೇ ಇದೆ. ವೀರಶೈವ ಮಹಾಸಭೆಯನ್ನು ತನ್ನ ಊರುಗೋಲನ್ನಾಗಿ ಮಾಡಿಕೊಂಡಿರುವ ಖಂಡ್ರೆ ವೀರಶೈವ(ಲಿಂಗಾಯತ)ರನ್ನು ತನ್ನ ತೀಟೆಗೆ ಬಳಸಿಕೊಳ್ಳುತ್ತಿದ್ದಾನೆ. ಈತನ ಹುಟ್ಟೂರು ಭಾಲ್ಕಿಗೆ ಬಂದು ನೀವು ಯಾರನ್ನೇ ಕೇಳಿದರೂ ಈ ಮನುಷ್ಯ ಅಪ್ಪಟ ಲಿಂಗವಂತ ಮಠಾಧೀಶರಾದ ಪೂಜ್ಯ ಶ್ರೀ ಚೆನ್ನಬಸವಪಟ್ಟದ್ದೇವರಿಗೇ ಮೂರು ನಾಮ ಹಾಕಿದ್ದನ್ನು ಹೇಳುತ್ತಾರೆ.

ನಡೆದಾಡುವ ದೇವರು ಎಂದೇ ಖ್ಯಾತನಾಮರಾಗಿದ್ದ ಪೂಜ್ಯ ಶ್ರೀ ಲಿಂ. ಚೆನ್ನಬಸವಪಟ್ಟದ್ದೇವರು ಅಪ್ಪಟ ಬಸವ ಅನುಯಾಯಿಗಳು. ಸರಳ- ಸಹೃದಯ ಜೀವಿಗಳು. ಸದಾ ಕಾಯಕ ಮಾಡುತ್ತ ವಿನಯವನ್ನು ತುಂಬಿಕೊಂಡು ನಿಂತ ತುಂಬಿದ ಕೊಡ. ಅದೇ ವೇಳೆಗೆ ಯಾರೇನೆಂದರೂ ಓರಂತಿಪ್ಪುದೇ ಸಮತೆ ಎಂದು ಬದುಕಿ ಎಲ್ಲರ ಬಾಳಿಗೆ ಬೆಳಕಾದವರು. ಇಂಥ ಅಪ್ಪಟ ಅಪರಂಜಿ ಶ್ರೀಸಾಮಾನ್ಯರ ಜೊತೆಗೂಡಿ ಕಟ್ಟಿದ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯನ್ನು ಇಂದು ಮಠದಿಂದಲೇ ಹೈಜಾಕ್ ಮಾಡಿಕೊಂಡು ತನ್ನ ಕುಲಪುತ್ರ ಈಶ್ವರ ಖಂಡ್ರೆಯನ್ನು ಸಂಸ್ಥಾಪಿಸಿದ ಕಳ್ಳ ಕೀರ್ತಿ ಭೀಮಣ್ಣ ಖಂಡ್ರೆಯವರಿಗೆ ಸಲ್ಲುತ್ತದೆ !



ವಿಶ್ವನಾಥ

ಸದರಿ ಸಂಸ್ಥೆಯನ್ನು ಪೂಜ್ಯ ಶ್ರೀ ಚೆನ್ನಬಸವಪಟ್ಟದ್ದೇವರು ಸಂಸ್ಥಾಪಿಸಿದ್ದರೂ ಅದರ ಅಧ್ಯಕ್ಷರನ್ನಾಗಿ ಆರ್.ವಿ.ಬಿಡಪ್ಪ ಎಂಬುವರನ್ನು ನೇಮಿಸುತ್ತಾರೆ. ಆದರೆ ರಾಜಕೀಯ ಪಗಡೆ ಆಟದಲ್ಲಿ ಪಳಗಿದ ಆಸಾಮಿಯಾಗಿರುವ ಖಂಡ್ರೆ ಹಿಂದಿನ ಇತಿಹಾಸವನ್ನೆಲ್ಲ ಅಳಿಸಿ ಇಂದು ಸಂಸ್ಥೆಗೆ ಹೊಸ ಇತಿಹಾಸವನ್ನೆ ಸೃಷ್ಟಿಸಿದ್ದಾರೆ. ತಾವೇ "ಶಾಂತಿವರ್ಧಕ ಶಿಕ್ಷಣ ಸಂಸ್ಥೆ"ಯ ಸಂಸ್ಥಾಪಕ ಅಧ್ಯಕ್ಷರು ಎಂದು ಯಾವ ನಾಚಿಕೆಯೂ ಇಲ್ಲದೆ ಹೇಳಿಕೊಳ್ಳುತ್ತಾರೆ. ಈ ಸಂಸ್ಥೆಯಿಂದ ಆರಂಭಿಸಿದ "ಶ್ರೀ ಹರಳಯ್ಯ ಪಾಲಿಟೆಕ್ನಿಕ್ ಕಾಲೇಜ್", "ಅಕ್ಕಮಹಾದೇವಿ ಕಾಲೇಜ್", ಹಾಗೂ "ಭಾಲ್ಕಿ ರೂರಲ್ ಇಂಜಿನಿಯರಿಂಗ್ ಕಾಲೇಜ್" ಗಳನ್ನೆಲ್ಲ ತನ್ನ ಬುಟ್ಟಿಗೆ ಹಾಕಿಕೊಂಡು ಕುಳಿತುಕೊಂಡಿದ್ದಾನೆ.

ಹಾಗೆ ನೋಡಿದರೆ ಖಂಡ್ರೆ ಹುಟ್ಟಿದ ಮನೆ ಶ್ರೀಮಂತ ಮನೆತನವ್ವಾಗಿರಲಿಲ್ಲ, ರಾಯ್ ಕಾಶಿರಾಯ್ ಎಂಬ ಊರಿನ ವತನದಾರಿ ದೇಶಮುಖರಲ್ಲಿ ಭೀಮಣ್ಣ ಖಂಡ್ರೆ ಹಾಗೂ ಲಿಂ.ಸಿದ್ಧಲಿಂಗಪ್ಪ ಕಾಕನಾಳೆ ಇಬ್ಬರೂ ಕಾರಕೂನರಾಗಿ ಕೆಲಸ ಮಾಡುತ್ತಿದ್ದರು. ದೇಶಮುಖರಿಗಾದರೋ ಸಮಾಜಮುಖಿಯಾದ ತುಡಿತವಿತ್ತು, ಆ ಗುಣಗಳನ್ನು ಅನೂಚಾನವಾಗಿ ಪಾಲಿಸಿಕೊಂಡು ತನ್ನ ಬದುಕನ್ನು ಸಮಾಜಕ್ಕೆ ಅರ್ಪಿಸಿ ಸಿದ್ಧಲಿಂಗಪ್ಪ ಕಾಕನಾಳೆ ಕಣ್ಮರೆಯಾದರೆ, ಈ ಖಂಡ್ರೆ ಮಾತ್ರ ತಾನು ಕುಳಿತಿದ್ದ ಗಿಡದ ಟೊಂಗೆಯನ್ನೆ ತನ್ನ ಊರುಗೋಲಾಗಿ ಬಳಸುತ್ತ ದುಡ್ಡು ಕಮಾಯಿಸಿ ಇಟ್ಟುಕೊಂಡಿದ್ದಾನೆ. ಜನಸಾಮಾನ್ಯರಿಗೆ ಇಲ್ಲದ ಆಮಿಷ ತೋರಿಸಿ 'ಮಹಾತ್ಮ ಗಾಂಧಿ ಷುಗರ್ ಫ್ಯಾಕ್ಟರಿ'ಯನ್ನು ಖಂಡ್ರೆ ಆರಂಭಿಸಿದ್ದರೂ ಅದರ ಏನೆಲ್ಲ ವಹಿವಾಟುಗಳನ್ನು ತನ್ನ ಖಾಸಗಿ ಆಸ್ತಿಯಂತೆ ಇಂದಿಗೂ ಬಳಸಿಕೊಳ್ಳುತ್ತಿದ್ದಾನೆ.

ತತ್ವ - ಸಿದ್ಧಾಂತಗಳ ಬಗ್ಗೆ ನಂಬಿಕೆಯೆ ಇಲ್ಲದ (ಅಥವಾ ಗೊತ್ತಿಲ್ಲದ) ಖಂಡ್ರೆ ಒಬ್ಬ ಅವಕಾಶವಾದಿ ಎಂಬುದರಲ್ಲಿ ಎರಡು ಮಾತಿಲ್ಲ, ಚಿತ್ರದುರ್ಗದ ಶ್ರೀ ಶಿವಮೂರ್ತಿ ಶರಣರನ್ನು ಕರೆಯಿಸಿ ಬಸವ ತತ್ವದ ಪರಿಮಳವನ್ನು ಎಲ್ಲೆಡೆ ಹಬ್ಬಿಸುವ ಹರಿಕಾರನಂತೆ ಕಂಡುಬಂದರೆ ಅದು ಮೇಲು ನೋಟದ ಸತ್ಯಮಾತ್ರ! ಆದರೆ ಒಳಗಡೆ ಅಪ್ಪಟ ಬಸವತತ್ವ ಅನುಯಾಯಿಯಾದ ಪೂಜ್ಯ ಚೆನ್ನಬಸವ ಪಟ್ಟದ್ದೇವರ ಶಿಷ್ಯರಾದ ಇಂದಿನ ಹಿರೇಮಠ ಸಂಸ್ಥಾನದ ಡಾ.ಬಸವ ಲಿಂಗಪಟ್ಟದ್ದೇವರನ್ನು ಹಣಿಯುವ ಎತ್ತುಗಡೆ ಇರುತ್ತದೆ. ಏಕೆಂದರೆ ಡಾ.ಬಸವಲಿಂಗ ಪಟ್ಟದ್ದೇವರು ಬೆಳೆಯುತ್ತ ಹೋದರೆ ತನ್ನ ಬುಡಕ್ಕೆ ಎಲ್ಲಿ ನೀರು ಬರುತ್ತವೋ? ಎಂಬ ಹೆದರಿಕೆ. ಹೀಗಾಗಿಯೆ ಬಾತಂಭ್ರದ ಶಿವಯೋಗಿಗಳನ್ನು, ಹುಲಸೂರಿನ ಶಿವಾನಂದ ಸ್ವಾಮಿಗಳೆಂಬ ಬಾವುಲಿಗಳನ್ನು ತನ್ನ ಬುಟ್ಟಿಯಲ್ಲಿಟ್ಟುಕೊಂಡು ಸಮಾಜ ಮುಖಂಡನ ಪೋಜು ಕೊಡುತ್ತಾನೆ.

ಪಂಚಾಚಾರ್ಯ ಜಗದ್ಗುರುಗಳು ಈ ಮೊದಲು (ತಪ್ಪದ ಕಾರಣಗಳಿಗಾಗಿ) ಬಸವನ ನಾಡಾದ ಬೀದರ ಜಿಲ್ಲೆಯಲ್ಲಿ ತಿರುಗಾಡಲು, ಅಡ್ಡಪಲ್ಲಕ್ಕಿ ಉತ್ಸವಗಳಲ್ಲಿ ಭಾಗ ವಹಿಸಲು ಹೆದರುತ್ತಿದ್ದರು. ಆದರೆ ತನ್ನ ಸ್ವಾರ್ಥಲಾಲಸೆಗಾಗಿ ಖಂಡ್ರೆ ಮಹಾಶಯ ಬಸವಾದಿ ಶರಣರ ಆಶಯಗಳನ್ನು ಗಾಳಿಗೆ ತೂರಿ ಜಗದ್ದುರು (ಜಾಗದ ಗುರು)ಗಳೆಲ್ಲರ ಅಡ್ಡ ಉದ್ದ ಪಲ್ಲಕ್ಕಿಯನ್ನು ತಾನೆ ಉತ್ಸುಕತೆಯಿಂದ ಹೊತ್ತು ಮೆರೆಯುತ್ತಾನೆ. ಖಂಡ್ರೆಯ ಈ ಊಸರವಳ್ಳಿತನವನ್ನು ಚೆನ್ನಾಗಿಯೆ ಮನಗಂಡಿರುವ ಗದುಗಿನ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಖಂಡ್ರೆಯನ್ನು ಅವರ ಊರಾದ ಭಾಲ್ಕಿಯಲ್ಲಿಯೆ ಕ್ಯಾಕರಿಸಿ ಉಗುಳಿದ್ದಾರೆ.


ಭೀಮಣ್ಣ ಖಂಡ್ರೆ

ಪತ್ರಕರ್ತ ಡಾ.ಪಾಟೀಲ ಪುಟ್ಟಪ್ಪನವರಂತೂ ಖಂಡ್ರೆಯ ಎಡಬಿಡಂಗಿತನವನ್ನು ಗುರುತಿಸಿ ಕೆಂಡಾಮಂಡಲರಾಗುತ್ತಾರೆ. "ಗೊರಲೆ ಹುಳು(ಪೂಜ್ಯ ಚೆನ್ನಬಸವಪಟ್ಟದ್ದೇವರು) ಹುತ್ತ ಕಟ್ಟಿದರೆ ಅದರಲ್ಲಿ ಬಂದು ವಾಸವಾಗಿರುವುದು ಈ ಹಾವು (ಭೀಮಣ್ಣ ಖಂಡ್ರೆ)"! ಎಂದು ಸಾರ್ವಜನಿಕವಾಗಿಯೆ ಛೇಡಿಸುತ್ತಾರೆ.

ತೀರಾ ಒಂದೆರಡು ವರ್ಷಗಳ ಹಿಂದಿನವರೆಗೆ ಈ ಮಹಾಶಯನಿಗೆ ಮತ್ತೊಬ್ಬ ಆಸಾಮಿ ಜೊತೆಗೂಡಿದ್ದ. ಆತ ಯಾದಗಿರಿ ಜಿಲ್ಲೆಯ ದಿ.ವಿಶ್ವನಾಥರೆಡ್ಡಿ ಎಂಬ ಜೋಭದ್ರಗೇಡಿ. ನಮ್ಮ ಜೊತೆ ಇಂದು ಇಲ್ಲದವರ ಬಗ್ಗೆ ಕೆಟ್ಟ ಮಾತು ಬರೆಯಬಾರದು ಎಂದು ಹೇಳುತ್ತಾರೆ. ಆದರೆ ಮುದ್ನಾಳ ವಿಶ್ವನಾಥರೆಡ್ಡಿ ತನ್ನ ಕಪಟ ನಾಟಕದ ಮೂಲಕ ಲಿಂಗಾಯತ ಸಮಾಜಕ್ಕೆ ಮಾಡಿದ ದ್ರೋಹ ನೆನೆದರೆ ಅದನ್ನು ಬರೆಯದೆ ಇರಲು ಆಗುವುದೇ ಇಲ್ಲ. ನೇತಾಜಿ ಸುಭಾಷ ಚಂದ್ರ ಬೋಸ ಅವರ ತತ್ವಗಳಿಗೆ ಮಾರು ಹೋಗಿರುವುದಾಗಿ ಹೇಳುತ್ತಿದ್ದ ಮುದ್ನಾಳ ಮೇಲುನೋಟಕ್ಕೆ ಶಿಸ್ತಿನ ಸಿಪಾಯಿಯಂತೆ ಕಾಣುತ್ತಿದ್ದರು. ಆದರೆ ಸುಭಾಷರ ತತ್ವಗಳನ್ನು ಮಾತ್ರ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲಿಲ್ಲ.

ಪತ್ರಿಕೆಯ ಮೂಲಕ ಸಮಾಜ ಸುಧಾರಣೆ ಸಾಧ್ಯವಾಗಬಹುದೆಂದು ಹಂಬಲಿಸಿ ಬಿ.ಮಹಾದೇವಪ್ಪನನ್ನು ಸಂಪಾದಕನನ್ನಾಗಿಸಿಕೊಂಡು ವಿಶ್ವಕಲ್ಯಾಣ ಎಂಬ ವಾರಪತ್ರಿಕೆ ಯನ್ನು ಆರಂಭಿಸಿ, 25 ವರ್ಷಗಳ ಕಾಲ ಅದನ್ನು ನಡೆಸಿ ಕೊಂಡು ಬಂದರು. ಆದರೆ ಅದೇಕೋ 'ವಿಶ್ವಕಲ್ಯಾಣ' ಪತ್ರಿಕೆ ಈ ಭಾಗದ ಜನಗಳ ಜೀವನಾಡಿ ಆಗುವುದಕ್ಕೆ ಹೊರತಾಗಿ "ವಿಶ್ವನಾಥರೆಡ್ಡಿ ಕಲ್ಯಾಣ ಪತ್ರಿಕೆ" ಎಂಬಂತಾಗಿ ಹೋಯಿತು.

ಅಖಿಲ ಭಾರತ ವೀರಶೈವ ಮಹಾಸಭೆ... ಉಪಾಧ್ಯಕ್ಷರಾಗಿ ಹಾಗೂ 'ಬಸವ ಸಮಿತಿ'ಯ... ರಾಗಿ ಸಮಾಜಕ್ಕೆ ಸ್ಪಷ್ಟವಾದ ತಿಳಿವಳಿಕೆ ನೀ... ಅದನ್ನೊಂದು ಕಮರ್ಷಿಯಲ್ ಸಂಘಟ... ರೂಪಿಸುವುದರಲ್ಲೂ ವಿಶ್ವನಾಥರೆಡ್ಡಿ, ಭೀಮಣ್ಣ... ಕೈ ಇರುವುದು ಗೊತ್ತಾಗುತ್ತದೆ. 'ಬಸವಸಮಿ... ಕೊಂಡು ಬಸವಾದಿ ಶರಣರ ವಿಚಾರಗಳನ್ನು ಪ್ರ... ಕಾರ್ಯವನ್ನು ಕೈಗೆತ್ತಿಕೊಳ್ಳುವುದಕ್ಕೆ ಬದಲ... ವಿರೋಧಿಗಳಾದ ಪಂಚಾಚಾರ್ಯರ ಪಲ್ಲ... ಮೆರೆಸಿದ್ದನ್ನೇ ತಮ್ಮ ಸಾಧನೆಯನ್ನಾಗಿ ತಿಳಿದುಕ... ಅಲ್ಲದೆ ಬಸವ ಸಮಿತಿಯನ್ನು ತಾವು ಕೊನೆ ... ವವರೆಗೆ ಅದನ್ನೊಂದು ಊರುಗೋಲನ್ನಾಗಿ ... ದ್ದರೆ ಏನು ಅದಕ್ಕೆ ಮುದ್ನಾಳರ ಕೊಡ... ಇರಲಿಲ್ಲ, ಜಗದ್ಗುರುಗಳ ಸಂಪ್ರೀತಿಗೆ ಪಾತ್ರರಾ... ಬಯಸಿ ತಮ್ಮ ಒಡ್ಡೋಲಗದಲ್ಲಿ ನೇಮಿಸಿಕೊಂ... ಗಾರ ಬಿ.ಮಹಾದೇವಪ್ಪನಿಂದ "ಬಸವಣ್ಣ ಮೂ... ಯತನಾಗಿದ್ದ" ಎಂಬ ಕಳಪೆ ಸಂಶೋಧನೆ ಮ... ರಿಂದಲೂ ಹೆಟ್ಟಿಸಿಕೊಂಡಿದ್ದರು. ಕೋರ್ಟ್ ಕ... ಅಡಗೋಲಜ್ಜಿ ಕಥೆಯನ್ನು ತಿರಸ್ಕರಿಸಿ ಅವ... ಮಾಡಿತ್ತು.

ಹೀಗೆ ವಿಶ್ವನಾಥರೆಡ್ಡಿ ಮುದ್ನಾಳ ಹಾಗೂ ... ಖಂಡ್ರೆ ಒಂದೇ ಬಣ್ಣದಲ್ಲಿ ಅದ್ದಿದ ಬಟ್ಟೆಗಳು... ಲಿಂಗೈಕ್ಯರಾಗುವವರೆಗೆ ಹೇಗೆ ಬಸವ ಸಮಿ... ವೀರಶೈವ ಮಹಾಸಭೆಯನ್ನು ತೊರೆಯಲಿಲ್ಲವೋ... ಭೀಮಣ್ಣ ಖಂಡ್ರೆಯೂ ಅ.ಭಾ.ವೀ.ಮ... ಅಧ್ಯಕ್ಷಗಿರಿಯನ್ನು ಬಿಟ್ಟು ತೊಲಗಲಾರ. ಬದಾಮಿಗೆ ಸಮೀಪವಿರುವ ಶಿವಯೋಗ... ಕಾರ್ಯಕ್ರಮದಲ್ಲಿ ಗದುಗಿನ ತೋಂಟದಾರ್ಯ... ಗಳು ಭೀಮಣ್ಣ ಖಂಡ್ರೆಯಂಥ ವೃದ್ಧರು ತ... ಪದವಿಯನ್ನು ಯುವಕರಿಗಾಗಿ ಬಿಟ್ಟುಕೊಡ... ಮಾತುಗಳನ್ನಾಡಿದ್ದಕ್ಕೆ, ಸಭೆಯಲ್ಲಿ ದಾಂಧ... ಕಳಿಸಿಕೊಟ್ಟ ಕೀರ್ತಿ ಖಂಡ್ರೆಗೆ ಸಲ್ಲಬೇಕು.

ಅಕ್ಷರಶಃ ಉಡುವಿನಂತೆ ವೀರಶೈವ ... ಒರಲಿಕೊಂಡಿರುವ ಭೀಮಣ್ಣ ಖಂಡ್ರೆಯನ್ನು ... ಮಾತ್ರ ಆ ಸಂಸ್ಥೆ ಬಸವಾದಿ ಶರಣರ ವಿಚಾರ... ಹಾಕಬಹುದೆನಿಸುತ್ತದೆ ! ಅಲ್ಲವೆ ?

• ವಿಶ್ವಾರಾಧ್ಯ ಸತ...

satyampet1969@...

ಮೈಸೂರು : ನಕಲಿ ಸಂಘಟಕ-ಪತ್ರಕರ್ತ

ತೋಂಟೇಶ್‌ಗೆ ಭರ್ತಿ ಗೂಸ..!

ವಂಚಕರು ಹೀಗೂ ಇರ್ತಾರೆ... ಇದು ಅಂತಿಂಥಾ ...ಯಮಲ್ಲ..! ಕೇಳಲು, ನೋಡಲು ತಮಾಷೆಯಂತೆ ... ಸಹ ವಂಚನೆ ಮಾತ್ರ ಸತ್ಯ. ಡಿಗ್ರಿ ಮಾಡಿದ ...ದ್ಯೋಗಿಗಳು ಉದ್ಯೋಗ ಸಿಗದೆ ಅಸಹಾಯಕರಾಗಿ ...ವರ ಬಲೆಗೆ ಬೀಳುತ್ತಾರೆ ಎಂಬುದಕ್ಕೂ ಇದೊಂದು ...ದರಣೆ. ಈ ನಿಜಕಥೆಯ ಕಥಾನಾಯಕ ಎಚ್.ಎಸ್. ...ಟೇಶ್ ಅಲಿಯಾಸ್ ತೋಂಟದಾರ್ಯ ಸ್ವಾಮಿ. ...ತಿಭಯಂಕರ ಒಂದು "ದೊಡ್ಡ" ಪತ್ರಿಕೆಯ ...ಪಕನೂ ಹೌದು. ಅದರ ಹೆಸರು ತೋಂಟೇಶ್ ... ಅದರ ಉಪ ಶೀರ್ಷಿಕೆ - ಕರ್ನಾಟಕ ರಾಜ್ಯ ...ನಿ ಬೆಂಗಳೂರಿಗೆ ಲಂಕೇಶ್ ಪತ್ರಿಕೆ - ಸಾಂಸ್ಕೃತಿಕ ...ನಿ ಮೈಸೂರಿಗೆ ತೋಂಟೇಶ್ ಪತ್ರಿಕೆ!

...ಷ್ಟೇ ಇವರ ವಿಶೇಷ ಅಂದುಕೊಳ್ಳಬೇಡಿ. ಇವರು ... ಸಂಘಟನೆಯಾದ ಕರ್ನಾಟಕ ಸ್ವಾಮಿ ವೇದಿಕೆಯ ...ಧ್ಯಕ್ಷರೂ ಹೌದು. ಇದು 'ಕರ್ನಾಟಕದ ನೊಂದ ...ದ ಹಾಗೂ ವಂಚನೆಗೊಳಗಾದವರ ಪರ ಸಂಘಟನೆಗಳ ...ಟ'ವಂತೆ.

...ವರ ಲೀಲೆಗಳೂ, ಬಿರುದು- ಬಾವಲಿ ...ಸಾಕಷ್ಟು ಇದ್ದಾವಾದರೂ, ಮೊನ್ನೆ ...ರಿನ ಕುವೆಂಪುನಗರದ ಚಾಮರಾಜ ...ದ್ದದ ಮುಖ್ಯ ಬೀದಿಗಳಲ್ಲಿ ಈತನಿಗೆ ...ತ್ರಿಕೆಯ ನೌಕರರೇ ಬಟ್ಟೆ ಹರಿದು ... ಬಡಿದು ಮೆರವಣಿಗೆ ಮಾಡಿದ ...ಒಂದು ಪ್ರಸಂಗವನ್ನು ಇಲ್ಲಿ ಕಾಣಿಸು...



...ಂಡ್ಲುಪೇಟೆ ತಾಲ್ಲೂಕಿನ ಹಳ್ಳಿ ಯಿಂದ ...ರಿಗೆ ಉದ್ಯೋಗ ಹುಡುಕಿ ಕೊಂಡು ... ಈತ ನೆಟ್ಟಗೆ ಉದ್ಯೋಗ ಮಾಡದೆ ...ರಿ ಹಿಡಿದ. ಮೊದಮೊದ ಲಿಗೆ ...ದ್ಯೋಗಕ್ಕಾಗಿ ಅಲೆದು ಉದ್ಯೋಗ ...ದ್ದಗ ಉದ್ಯೋಗ 'ಕೊಡಿಸುವ ವಂಚನೆಯನ್ನ ಶುರುಹಚ್ಚಿ ... ಮತ್ತು ಅದಕ್ಕಾಗಿಯೆ ಸಂಘಟನೆ ಸೃಷ್ಟಿಸಿ ಎತ್ತುವಳಿ ...ಪ್ರಾರಂಭಿಸಿದ.


...ದೇ ಬಗೆಯಲ್ಲಿ ಕಳೆದ 6 ತಿಂಗಳ ಹಿಂದೆ ತನ್ನ ...ಲ್ಲೇ ಒಂದು ಪತ್ರಿಕೆ ತೆರೆದಿದ್ದಾನೆ. ಅದರ ನಾಮಾಂಕಿತ ...ಟೇಶ್ ಪತ್ರಿಕೆ ಎಂತಲೂ, ಅದಕ್ಕೆ ಸ್ಥಾಪಕ ಸಂಪಾದಕ ...ಟದಾರ್ಯ ಅಲಿಯಾಸ್ ತೋಂಟೇಶ್ ಎಂದು ...ರಿನ ಹತ್ತಾರುಕಡೆ ವರ್ಣರಂಜಿತವಾಗಿ ವಾಲ್‌ರೈಟ್ ...ಸಿದ್ದಾನೆ. ಇದೆಲ್ಲಾ ಪ್ರಚಾರಕ್ಕಾಗಿ ಹಾಗೂ ...ಳಿಗಾಗಿ ಅನ್ನುವುದು ಎಂಥ್‌ವರಿಗೂ ...ಗುವ ವಿಚಾರಬಿಡಿ.

...ಯ ಪತ್ರಿಕೆಗಳಲ್ಲಿ ತನ್ನ ಪತ್ರಿಕೆಗೆ ವರದಿ ... ಮ್ಯಾನೇಜರ್‌ಗಳು ಬೇಕಾಗಿದ್ದಾರೆ ಎಂದು ...ದೇ ಜಾಹಿರಾತು ನೀಡಿದ್ದಾನೆ. ಜಾಹಿರಾತು ...ದ ಹತ್ತಾರು ಪದವೀಧರರು ಬಂದಿದ್ದಾರೆ. ...ದ ವರದಿಗಾರರಿಗೆ 20,000, ಮ್ಯಾನೇ... 50000, ಉಪಸಂಪಾದಕರಿಗೆ ಒಂದು ...ಗೆ ಪ್ರತೀ ಹುದ್ದೆಗೂ ಠೇವಣಿ ಇಡಬೇ... ಕಟ್ಟಿಸಿಕೊಂಡಿದ್ದಾನೆ. ವಂಚಕ ತೋಂಟದಾರ್ಯ ...ಳೇ ಮಾತಿನ ಮಲ್ಲ, ಸುಳ್ಳು ಹೇಳುವುದರಲ್ಲಿ ನಿಸ್ಸೀಮ. ... ಬಿಟ್ಟ ರೀಲನ್ನೇ ರಿಯಲ್ ಎಂದು ತಿಳಿದು ... ಸಾಲಸೋಲ ಮಾಡಿ ಬರೋಬರಿ 5 ಲಕ್ಷ ...ಮನ್ನ ರಾಘವೇಂದ್ರನಾಂನ ಮೊದಲ ಬ್ಯಾಚ್ ಒಪ್ಪಿಸಿದೆ. ...ಚಕ ತೋಂಟದಾರ್ಯ ವರದಿಗಾರರು ಇಟ್ಟ ಠೇವಣಿ ...ಲ್ಲೇ ವರ್ಣರಂಜಿತ ಪತ್ರಿಕೆಯನ್ನೂ ಸಹ ತಂದು ... ತಿಂಗಳು ವಿರಾಮಕೊಟ್ಟಿದ್ದಾನೆ. ನಂತರ ಎತ್ತುವಳಿ ...ಟ್ಟಿಕೊಂಡಿದ್ದಾನೆ. ಈ ಅಸಲೀ ವಿಚಾರ ರಾಘ... ...ರಾಂಪ ಟೀಂಗೆ ಗೊತ್ತಾದದ್ದೇ ತಡ, ತಮ್ಮ ಠೇವಣಿ ...ಳಿದ್ದಾರೆ. ತೋಂಟದಾರ್ಯ ಸುಮ್ಮನಿರದೆ, ನಂಜನ... ... ನಾಗರಾಜೇಂದ್ರ ಸ್ವಾಮೀಜಿ ನನ್ನ ಮಾವ, ಸಿ.ಎಂ. ...ಡಿಯೂರಪ್ಪ ನಮ್ಮ ಸಂಬಂಧಿ, ಹಣ ಕೇಳಿದರೆ ಹುಷಾರ್ ... ಧಮಕೀ ಹಾಕಿದ್ದಾನೆ.

...ತೋಂಟದಾರ್ಯನ ವಂಚನೆಯ ಪುರಾಣ ಇಷ್ಟಕ್ಕೆ ...ನಿಲ್ಲ, ಮತ್ತೆ ಜಾಹಿರಾತು ನೀಡಿ 2-3 ಬ್ಯಾಚ್‌ಗಳಿಗೆ ಮೊದಲಿನ ರೀತಿಯಲ್ಲೇ ಹಲವರಿಂದ ಠೇವಣಿ ಕಟ್ಟಿಸಿಕೊಂಡಿದ್ದಾನೆ. ಪತ್ರಿಕೆಯನ್ನೂ ಹೊರತರದೆ, ಸಂಬಳವನ್ನೂ ನೀಡದೆ ಅಲೆದಾಡಿಸಿದ್ದಾನೆ. ಆದರೆ ಕೊನೆಯ ಬ್ಯಾಚ್‌ನಲ್ಲಿ ಕುಂಬಾರ ಕೊಪ್ಪಲಿನ ಪ್ರಶಾಂತ, ರಘು ಎಂಬುವವರು ಮಾಡಿರುವ ಕೆಲಸಕ್ಕೆ ಸಂಬಳ ಮತ್ತು ಠೇವಣಿ ಹಣ ವಾಪಸ್ ಕೇಳಿದ್ದಾರೆ. ಅದಕ್ಕೆ ಮತ್ತೆ ಅದೇ ಧಮಕೀ ಬಿಟ್ಟಿದ್ದಾನೆ. ಇದು ಈ ಯುವಕರನ್ನು ಕೆರಳಿಸಿದೆ. ವಂಚನೆಗೊಳಗಾದವರನ್ನ ಸೇರಿಸಿಕೊಂಡು, ಮಾಧ್ಯಮದವರನ್ನ ಕರೆಸಿಕೊಂಡು ಕುವೆಂಪು ನಗರದಲ್ಲಿನ ವಂಚನೆಯ ಅಂಗಡಿಯಿಂದ ಬೀದಿಬೀದಿಗಳಲ್ಲಿ ತೋಂಟದಾರ್ಯನಿಗೆ ಭರ್ತಿ ಒದೆಕೊಟ್ಟು, ಕುವೆಂಪುನಗರ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ. ಆದರೆ ಎಸ್‌ಐ ಪ್ರಸನ್ನಕುಮಾರ್ ಪ್ರಸಾದ ತಿಂದು, ತೋಂಟದಾರ್ಯ ತಪ್ಪಿಸಿಕೊಳ್ಳುವಂತೆ ಮಾಡಿದ್ದಾನೆ ಎಂಬ ಆರೋಪಗಳು ಕೇಳಿಬರುತ್ತಿವೆ.

ತೋಂಟದಾರ್ಯನ ವಂಚನೆಗೆ ಹತ್ತಾರುಮಂದಿ ಅಕ್ಷರವಂತ, ಪದವೀಧರರೇ ವಂಚನೆಗೊಳಗಾಗಿದ್ದಾರೆ. ಅದರಲ್ಲೂ ಚಾಮರಾಜನಗರದ ಪೊಲೀಸ್ ಅಧಿಕಾರಿಯೊಬ್ಬರ ಸಹೋದರಿಯೊಬ್ಬಳು ಸಹ ವಂಚನೆಗೊಳಗಾಗಿದ್ದಾಳೆಂಬ ಸುದ್ದಿಯಿದೆ. ಅಷ್ಟೇಅಲ್ಲದೇ ತಾನೇ ಸಂಸ್ಥಾಪಕ ರಾಜ್ಯಾಧ್ಯಕ್ಷನಾಗಿರುವ ತೋಂಟದಾರ್ಯನ 'ಕರ್ನಾಟಕದ ನೊಂದ ಜೀವಗಳ ಹಾಗೂ ವಂಚನೆಗೊಳಗಾದವರ ಪರ ಸಂಘಟನೆಗಳ ಒಕ್ಕೂಟದ ಕರ್ನಾಟಕ ಸ್ವಾಮಿ ವೇದಿಕೆಯಲ್ಲಿನ ಪದಾಧಿಕಾರಿಗಳನ್ನಾಗಿ ಮಾಡಿಕೊಂಡಿರುವವರಿಗೂ ಇದೇ ರೀತಿ ವಂಚಿಸಿ ಅನ್ಯಾಯ ಎಸಗಿದ್ದಾನೆ. ರಾಜ್ಯ ಸಮಿತಿಗೆ ಹೆಸರು ಸೇರಿಸಿಕೊಳ್ಳಲು ತಲಾ ಐದೈದು ಲಕ್ಷ, ನಗರ ಸಮಿತಿಗೆ ತಲಾ ಎರಡೆರಡು ಲಕ್ಷಗಳನ್ನ ಎತ್ತಿದ್ದಾನೆ. ಇದಕ್ಕೆ ನಂಜನಗೂಡಿನ ಶರಣ ಸಂಗಮ ಮಠದ ಘಟಿಂಗ ಸ್ವಾಮೀಜಿಯಂತಿರುವ ತನ್ನ ಖಾಸಾ ಮಾವ ನಾಗರಾಜೇಂದ್ರ ಸ್ವಾಮೀಜಿ ಎಂಬುವವನನ್ನು ಬಳಸಿಕೊಂಡು ಬರೋಬ್ಬರಿ 20 ಲಕ್ಷಗಳನ್ನ ಸ್ವಾಮೀಜಿಯೊಂದಿಗೆ ಮೆಯ್ದಿದ್ದಾನೆ.

ತೋಂಟದಾರ್ಯನಿಗೆ ತನ್ನ ಪತ್ರಿಕೆಯವರಿಂದಲೇ ಗೂಸಾಬಿದ್ದ ಸುದ್ದಿ ತಿಳಿಯುತ್ತಿದ್ದಂತೆ ಈತನಿಗೆ ಠೇವಣಿ ಕೊಟ್ಟವರು ಕಣ್ಣುಬಾಯಿ ಬಿಡುತ್ತಿದ್ದಾರೆ. ವಂಚಕ ತೋಂಟದಾರ್ಯನ ಮಾತಿಗೆ ಮರುಳಾಗಿ ಠೇವಣಿ ಇಟ್ಟು ವಂಚನೆಗೊಳಗಾದ ಹಲವರು ಸಾಲಸೋಲಮಾಡಿದವರ ಗೋಳು ಅಷ್ಟಿಷ್ಟಲ್ಲ. ಅಂಥವರಲ್ಲಿ ನಂಜನಗೂಡಿನ



ನರಸಿಂಹಮೂರ್ತಿ ಎಂಬ ಹುಡುಗನಂತೆ ತಮ್ಮ ಆಸ್ತಿಯನ್ನೇ ಮಾರಿ ಠೇವಣಿ ಕಟ್ಟಿರುವವರು ಇದ್ದಾರೆ.


ಇಂತಹ ಕೆಲಸಕೊಡುವ ಮತ್ತು ಕೆಲಸಕೊಡಿಸುವ ಹೆಸರಿನಲ್ಲಿನ ವಂಚನೆಗಳು ಮೈಸೂರು ಸೇರಿದಂತೆ ಎಲ್ಲಾ ಕಡೆಯೂ ಹೆಚ್ಚಾಗುತ್ತಿವೆ. ತೋಂಟದಾರ್ಯನಂತಹ ಮಹಾನ್ ವಂಚಕ ಪತ್ರಿಕೆಗಳ ಹೆಸರಿನಲ್ಲಿ ಮತ್ತು ಸಂಘಟನೆಗಳ ಹೆಸರಿನಲ್ಲಿ ನಡೆಸುತ್ತಿರುವ ವಂಚನೆಯನ್ನ ತಡೆಯುವ ಜವಾಬ್ದಾರಿ ಪೊಲೀಸರ ಮೇಲಿದೆ. ಮೈಸೂರಿನಲ್ಲಿ ಸುನಿಲ್ ಅಗರ್‍ವಾಲ್‌ರಂತಹ ಕಮಿಷನರ್ ಇದ್ದಾಗ್ಯೂ ಕುವೆಂಪು ನಗರದ ಪೊಲೀಸರು ವಂಚಕರ ಎಂಜಲುಕಾಸಿಗೆ ಕೈಯೊಡ್ಡಿ ತೋಂಟದಾರ್ಯನಂತಹ ಮಹಾನ್ ವಂಚಕರು ತಪ್ಪಿಸಿಕೊಳ್ಳುವಂತಾಗಿದೆ.

ಹಾಗಾದರೆ ವಂಚನೆಗೊಳಗಾದವರು, ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಕೊಡಿಸುವವರು ಯಾರು?

• ಲಕ್ಷ್ಮಣ್ ಚೀರನಹಳ್ಳಿ
lakshmancheeranahally@gmail.com

ಬ್ರಾಹ್ಮಣರೊಡನೆ ಭೋಜನ ಮಾಡುವುದು ಅಷ್ಟು ಸುಲಭವಲ್ಲ

ಆಧುನಿಕ ಮನು ಪೇಜಾವರ ಬ್ರಾಹ್ಮಣ್ಯದ ಪುನರುತ್ಥಾನಕ್ಕಾಗಿ ಹೋರಾಡುತ್ತಿರುವವರೇ ಹೊರತು, ಇವರಿಂದ ಜಾತಿಗಳ ಸಾಮರಸ್ಯವಾಗಲಿ, ಜನಾಂಗದ ಸಮಾನತೆಯಾಗಲಿ ಸೃಷ್ಟಿಯಾಗುವುದಿಲ್ಲವೆಂದು ಚಾರ್ವಾಕ ಶಿವಸುಂದರ್ ಹೇಳುತ್ತ ಹೊರಟಿದ್ದಾರಂತಲ್ಲಾ, ದಲಿತರಿಗೆ ವೈಷ್ಣವ ದೀಕ್ಷೆ ಕೊಡುವುದರ ಹಿಂದೆ ಅವರು ಮತಾಂತರವಾಗದೆ ಸ್ವಸ್ಥಾನದಲ್ಲಿ ದೀಕ್ಷಾ ಸಂದರ್ಭ ನೆನೆಯುತ್ತ ಕಾಲಹಾಕುವಂತಾಗಿದೆಯೇ ಹೊರತು, ಇನ್ನೇನೂ ಸಾಧ್ಯವಿಲ್ಲ, ಸಹಪಂಕ್ತಿ ಭೋಜನಕ್ಕೆ ತಲೆಹೋಗದಿರುವ ಪೇಜಾವರ ಶ್ರೀಗಳು, ಮಾಂಸ ಮದ್ಯ ಸೇವನೆಯಂತಹ ನಿತ್ಯ ನಾರಕಿಗಳ ಆಹಾರ ಪದ್ಧತಿಯವರೊಂದಿಗೆ ಎಂದೆಂದೂ ಭೂರಿಭೋಜನ ಸಾಧ್ಯವೇಯಿಲ್ಲವೆಂದು ಕಡ್ಡಿ ಮುರಿದಂತೆ ಹೇಳಿರುವ ಸಂದರ್ಭದಲ್ಲೇ ಪಂಡಿತ ರಾಮಕೃಷ್ಣ ಶಾಸ್ತ್ರಿಗಳೆಂಬ ವಿಪ್ರೋತ್ತಮರು, ಬ್ರಾಹ್ಮಣರಾದ ನಾವು ಶೂದ್ರರೊಡನೆ ಸಹಪಂಕ್ತಿ ಭೋಜನಕ್ಕೆ ತಯಾರಿದ್ದೇವೆ. ಆದರೆ ಊಟಕ್ಕೆ ಮುನ್ನ ಶೂದ್ರರು ಶುಚಿಯಾಗಿ ಮೈತೊಳೆದುಕೊಂಡು ದೋತ್ರಪುಟ್ಟು ಶಿಖಿಯನ್ನು ನೀವಿಕೊಂಡು ಎಲೆಯ ಮುಂದೆ ಕೂರಬೇಕು. ಕುಳಿತ ನಂತರ ಬರುವ ಊಟದ ಐಟಂಗಳ ಸ್ಯಾಂಪಲ್‌ಗಳು ಪೂರ್ಣವಾಗುವವರೆಗೂ ಕಾಯಬೇಕು, ನಂತರ ಶ್ಲೋಕ ಹೇಳುವವರೆಗೂ ಕೈ ಬಿಡದಂತೆ ಕಾದು ನಂತರ ಭೋಜನ ಭುಂಜಿಸಬೇಕು. ಎಲೆ ಸುತ್ತ ಒಂದಗಳನ್ನೂ ಚೆಲ್ಲಬಾರದು. ಮಧ್ಯೆ ಮಧ್ಯೆ ನೀರು ಕುಡಿಯಬಾರದು. ಕೈನೆಕ್ಕುವ ಶಬ್ದದ ಹೊರತಾಗಿ ಮಧ್ಯೆ ಮಧ್ಯೆ ಪಚಪಚ ಶಬ್ದ ಮಾಡಬಾರದು. ಊಟ ಬಡಿಸುವಾಗಲೇ ಕೈಹಾಕಿ, ಪಲ್ಯ ಕೋಸಂಬರಿ, ಪತ್ರೊಡೆಗಳನ್ನು ಕಣ್ಮರೆ ಮಾಡಬಾರದು. ಪಲ್ಯಗಳು ಮತ್ತಿತರೆ ಊಟದ ಪರಿಕರಗಳು ಅನ್ನ ತುಂಬಲು ಸಹಾಯಕವಾದ ಪಕ್ಕವಾದ್ಯಗಳೇ ಹೊರತು ಬರೀ ಅತೀ ಊಟವಲ್ಲ, ಈ ನಿಯಮಗಳನ್ನು ಅರಿತು ಎಲ್ಲರೂ ಒಂದೇ ಬಾರಿಗೆ ಊಟ ಆರಂಭಿಸಿ, ಒಂದೇ ಬಾರಿಗೆ ಮೇಲೇಳಬೇಕು. ಉದಾಹರಣೆಗೆ ಮುಸ್ಲಿಮರು ನಮಾಜು ಮಾಡುವಾಗ ಒಂದೇ ಬಾರಿಗೆ ಬಗ್ಗಿ ಒಂದೇ ಬಾರಿಗೆ ಮೇಲೇಳುತ್ತಾರಲ್ಲ, ಮುಸ್ಲಿಮರು ಧಾರ್ಮಿಕ ನಂಬಿಕೆಯಲ್ಲಿ ತೋರಿದ ಭಕ್ತಿಯನ್ನು ನಾವು ಭೋಜನದಲ್ಲಿ ತೋರಿದ್ದೇವೆ. ತೋರುತ್ತಾ ಬಂದಿದ್ದೇವೆ. ಆದ್ದರಿಂದ ಬ್ರಾಹ್ಮಣರೊಡನೆ ಭೋಜನ ಮಾಡುವುದು ಅಷ್ಟು ಸುಲಭದ ಮಾತಲ್ಲ ಎಂದು ಶಾಸ್ತ್ರಿಗಳು ಹೆದರಿಸಿದ್ದಾರಂತಲ್ಲಾ ಥೂತ್ತೇರಿ!



* * * * * *



ಅಷ್ಟಕ್ಕೂ ಬ್ರಾಹ್ಮಣರೊಡನೆ ಭೋಜನ ಮಾಡಲೇಬೇಕೆಂಬ ಹಠವೇಕೆ? ನಾವೇನು ಉಣ್ಣಬಾರದ್ದನ್ನು ಉಣ್ಣುತ್ತೇವೆಯೇ? ಎಳೆ ಬಾಳೆ ಎಲೆ ಮೇಲೆ ಬಿಸಿ ಅನ್ನ ಹಾಕಿಸಿಕೊಂಡು ಅದಕ್ಕೆ ಹುಳಿ ಹಾಕಿಸಿಕೊಳ್ಳುತ್ತೇವೆ. ನಂತರ ಸಾರು, ಮಜ್ಜಿಗೆ, ಇದ್ದರೆ ಹಪ್ಪಳ, ಇಲ್ಲದಿದ್ದರೆ ಸಂಡಿಗೆ ಇದಿಷ್ಟನ್ನು ಸಮಯಕ್ಕೆ ಸರಿಯಾಗಿ ಬಾರಿಸುತ್ತೇವೆ. ಅದೂ ಆರೋಗ್ಯದ ಕಾಳಜಿಯಿಂದ. ಈ ಕಾರಣಕ್ಕೆ ನಾವ್ಯಾರೂ ನಿಮ್ಮಂತೆ ಆಸ್ಪತ್ರೆಯ ಎದುರು ಕ್ಯೂ ನಿಂತಿರುವುದಿಲ್ಲ, ದೇಹಕ್ಕೆ ಮನಸ್ಸಿಗೆ ಯಾವುದು ಒಳ್ಳೆಯದೊ ಅದನ್ನ ಸೇವಿಸುತ್ತೇವೆ. ಈ ಮಾಹಿತಿಯನ್ನು ಪಡೆದು ನೀವೂ ಹಾಗೇ ಮಾಡಿ. ಅದು ಬಿಟ್ಟು ನಮ್ಮೊಂದಿಗೆ ಭೋಜನಕ್ಕೆ ಕುಳಿತರೆ ಏನು ಬಂತು. ನಾವೇನು ದಿನಾ ನಿಮ್ಮ ಜೊತೆ ಊಟ ಮಾಡುತ್ತೇವೆಯೇ? ಆಕಸ್ಮಾತ್ ಊಟ ಮಾಡಿಯೇಬಿಟ್ರೊ ಅನ್ನಿ ನಿಮ್ಮ ಮಹಾ ಪೌರುಷದ ಹಠದ ಕತೆ ಏನೂ ನಿಮಗೆ ಮಣ್ಣು ತಿನ್ನಿಸಿ ನಾವು ಅನ್ನ ತಿನ್ನುತ್ತಿದ್ದರೆ ನಮ್ಮೊಡನೆ ಊಟ ಮಾಡುವ ಹಠ ಮಾಡಬಹುದಿತ್ತು, ನಾವೂ ನಿಮ್ಮಂತೆ ಅನ್ನ ತಿನ್ನುತ್ತೇವೆ. ನಿಮಗೆ ಗೊತ್ತಿಲ್ಲ, ನಾವು ನೀವು ಬಹಳ ವರ್ಷಗಳಿಂದ ಹೋಟೆಲ್‌ನಲ್ಲಿ ಕುಳಿತು ಜೊತೆಯಲ್ಲೇ ಊಟ ಮಾಡುತ್ತಿದ್ದೇವೆ ಎಂದು ಶೃಂಗೇರಿ ಕಡೆಯ ವಟುವೊಂದು ದಲಿತರಂತೆ ಕಾಣುವ ಶಿವಸುಂದರ್‌ಗೆ ಪತ್ರ ಬರೆದಿದ್ದಾನಂತಲ್ಲಾ ಥೂತ್ತೇರಿ!

* * * * * *

ಮಂಡ್ಯದ ಗಂಡುಮೆಟ್ಟಿದ ನೆಲದಲ್ಲಿ ನಿಂತು ಸಾರಾ ಅಬೂಬಕ್ಕರ್, ಭೈರಪ್ಪ ಮೂರನೇ ದರ್ಜೆ ಕಾದಂಬರಿ ಲೇಖಕ ಎಂದು ಬೆಸಗರಹಳ್ಳಿ ರಾಮಣ್ಣನಂತೆ ಘರ್ಜಿಸಿದ್ದರಂತಲ್ಲಾ ಇದಕ್ಕೆ ಉತ್ತರವಾಗಿ ಮಂಡ್ಯದ ಜನ ಭರ್ಜರಿ ಕರತಾಡನ ಮಾಡಿದರಂತಲ್ಲಾ, ಇದರಿಂದ ಇನ್ನ ಉತ್ತೇಜನಗೊಂಡ ಸಾರಾ ಅವರು ಇಂದಿನ ಮಹಿಳೆ ಎಚ್ಚೆತ್ತುಕೊಂಡಿದ್ದಾಳೆ, ಎಚ್ಚೆತ್ತ ಮಹಿಳೆಗೆ ಸಮಾನತೆ ತೋರುವುದು ಬಿಟ್ಟು, ಅವಳನ್ನೇ ವಂಚಕಿ, ಮೋಸಗಾತಿ ಮಾಟಗಾತಿ ಎಂದು ಬರೆಯುವ ಭೈರಪ್ಪ ನಿಜಕ್ಕೂ ಮೂರನೇ ದರ್ಜೆಯವನು ಎಂದರಂತಲ್ಲಾ ಇದನ್ನ ಕೇಳಿಸಿಕೊಂಡ ಮಂಡ್ಯದ ಕೆಲ ಹೈದರು ಇವತ್ತಲ್ಲ ನಾಳೆ ಭೈರಪ್ಪ ಮೊದಲನೆ ದರ್ಜೆಗೆ ತರ್ತಾನೆ ಬಿಡಿ ಎಂದವಂತಲ್ಲಾ, ಆಗ ಕೆಲ ಬುದ್ಧಿಜೀವಿಗಳು ಗೃಹಭಂಗ ಬರೆದ ಭೈರಪ್ಪ ಮೊದಲ ದರ್ಜೆಯವನಾಗಿದ್ದ, ಆವರಣ ಬರೆದು ಎರಡನೇ ದರ್ಜೆಗೆ ಬಂದ, ಈಗ ಕವಲು ಬರೆದು ಮೂರನೇ ದರ್ಜೆಗಿಳಿದ, ನಾಲ್ಕನೆ ದರ್ಜೆಗಿಳಿದ ಕೂಡಲೇ ಖಂಡಿತ ಆತ ನಾಲ್ಕು ಜನರ ಮೇಲೆ ಹೊರಟೇಹೋರಡುತ್ತಾನೆ ಬಿಡಿ ಎಂದು ನಕ್ಕರಂತಲ್ಲಾ, ಹೆಣ್ಣುಭ್ರೂಣ ಹತ್ಯೆಯಲ್ಲಿ ಮೊದಲಸ್ಥಾನಕ್ಕಾಗಿ ಸ್ಪರ್ಧಿಸುತ್ತಿರುವ ಮಂಡ್ಯ ಜಿಲ್ಲೆಯಲ್ಲಿ ಭೈರಪ್ಪ ಹುಟ್ಟಿದ್ದರೆ ಸಾರ್ಥಕವಾಗುತ್ತಿತ್ತೆಂದು ಸುಮಾರು ಜನ ಅಭಿಪ್ರಾಯಪಟ್ಟರಂತಲ್ಲಾ ಥೂತ್ತೇರಿ.

* * * * * *

ಕನಸುಮನಸ್ಸಿನಲ್ಲೂ ಸಾವಿನ ಬಗ್ಗೆ ಕೊಲ್ಲುತ್ತಿದ್ದ ಬಂಗಾರಪ್ಪನವರು, ಸಾವಿನ ಬಗ್ಗೆ ಉಪನ್ಯಾಸವನ್ನೇ ಶುರುಮಾಡಿದ್ದಾರೆಂದು, ಕುಮಾರ್ ಬಂಗಾರಪ್ಪನ ಕಡೆಯ ಹೈದರು ಆಡಿಕೊಳ್ಳುತ್ತಿದ್ದಾರಂತಲ್ಲಾ, ಅವರ ಪ್ರಕಾರ 'ಬಂ', ಸಾವಿನ ಬಗ್ಗೆ ಮಾತನಾಡುವುದು ಸಹಜ, ಯಾರೇ ಆಗಲಿ ಸಾವಿನ ವಾಸನೆ ಗ್ರಹಿಸಿ ಮಾತನಾಡಲು ಮುಖ್ಯಕಾರಣ, ವಯಸ್ಸು ಮತ್ತು ಆರೋಗ್ಯ 'ಬಂ' ಎದುರು ಅವರೆಡೂ ಸಮಸ್ಯೆಗಳಿವೆ. ಅದೂ ಅಲ್ಲದೆ, ಹಾಹಾಕೃತ್ಯಕ್ಕೆ ಸಮನಾದ ಪಕ್ಷಾಂತರದ ಸಮಸ್ಯೆಗಳ ಪರಿಣಾಮಗಳೂ ಇವೆ. ಇದ್ದಕ್ಕಿದ್ದಂತೆ ಕೈಯಲ್ಲಿ ಕಮಲ ಹಿಡಿದು ಬಿಜೆಪಿ ಸೇರಿಬಿಟ್ಟ 'ಬಂ' ಮೋದಿ ಕೈಹಿಡಿದು ಮೆರೆದ ಸಂದರ್ಭ ಮರೆಯಲಾದೀತೆ? ಇಡೀ ಈಡಿಗ ಸಮೂಹವನ್ನ ಬಿಜೆಪಿಗೆ ಸೇರಿಸಿ ಕಡೆಗೆ ತಾನೊಬ್ಬನೆ ಬಂದು ಕಾಂಗ್ರೆಸ್ ಎಂಬ ಹಳೆಮನೆ ಬಾಗಿಲು ತಟ್ಟಿದ್ದೂ ಅಲ್ಲದೇ, ಹಠಮಾಡಿ ಟಿಕೆಟ್ ಪಡೆದು ಎಡೂರಪ್ಪನ ಎದುರು ಸೋತಿದ್ದೂ ಸಾಲದೆಂಬಂತೆ, ಆತನ ಮಗನ ಎದುರೂ ಮಣ್ಣು ಮುಕ್ಕಿದವನ ಬಾಯಲ್ಲಿ ಸಾವಿನ ವಿಷಯ ನುಸುಳುವುದು ಸಹಜ. ಈಗಲಾದರೂ ನಮ್ಮ ಕುಮಾರ್ ಬಂಗಾರಪ್ಪನನ್ನ ಎಡೂರಪ್ಪನ ಎದುರು ನಿಲ್ಲಿಸಿ ಮಧುವನ್ನ ಬೇಳೂರನ ಎದುರು ನಿಲ್ಲಿಸಿ ಕುಬುಟೂರಿನ ಸ್ವಗೃಹದಲ್ಲಿ ಕಾಲಹಾಕುವುದು ಒಳ್ಳೆಯದೆಂದು ನಕ್ಕರಂತಲ್ಲಾ ಥೂತ್ತೇರಿ!

ಕರ್ನಾಟಕ ಹೈಕೋರ್ಟ್‌ನ ಒಂದು ವಿಶಿಷ್ಟ ತೀರ್ಪು
ಸಂಘಪರಿವಾರದ ಮೌಢ್ಯದ ವಿರುದ್ಧ ವೈಚಾರಿಕತೆಯ ಗೆಲುವು


ನ್ಯಾ.ನಾಗಮೋಹನ್‌ದಾಸ್

ಭಾರತದ ನ್ಯಾಯ ವ್ಯವಸ್ಥೆ ಹಾಗೂ ಅದರ ಭಾಗವಾಗಿರುವ ಹಲವು ನ್ಯಾಯಾಧೀಶರುಗಳು, ನ್ಯಾಯವಾದಿಗಳ ಬಗ್ಗೆ ಆಗಾಗ ಅಪಸ್ವರಗಳು ಕೇಳಿಬರುವುದು ವಾಸ್ತವವಾದರೂ ಸಾಕಷ್ಟು ಬಾರಿ ಇದೇ ವ್ಯವಸ್ಥೆಯ ಒಳಗಿಂದಲೇ ಆಶಾಕಿರಣಗಳೂ ಹೊರ ಚಿಮ್ಮುವುದು ವಿಚಾರವಂತರಿಗೆ ಸ್ವಲ್ಪವಾದರೂ ಧೈರ್ಯ ಕೊಡುವ ಸಂಗತಿ. ಸಮಾಜವನ್ನು ಶತಮಾನಗಳಷ್ಟು ಹಿಂದಕ್ಕೆ ತಳ್ಳಬೇಕೆಂದು ಫ್ಯಾಸಿಸ್ಟ್ ಶಕ್ತಿಗಳ ಪ್ರಯತ್ನಗಳಿಗೆ ಇಂಥ ಬೆಳಕಿನ ಕಿರಣಗಳು ಅಡ್ಡಿಯಾಗಿ ನಿಲ್ಲುತ್ತದೆ. 2010 ರ ಸೆಪ್ಟೆಂಬರ್ 13 ರಂದು ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಎಚ್.ಎನ್. ನಾಗಮೋಹನ್‌ದಾಸ್ ಅವರು ನೀಡಿರುವ ತೀರ್ಪು ಆ ರೀತಿಯ ಬೆಳಕಿನ ಕಿರಣಗಳಲ್ಲಿ ಒಂದು.

ದೊಡ್ಡಬಳ್ಳಾಪುರದ ವಿವೇಕಾನಂದ ಹೈಯರ್ ಪ್ರೈಮರಿ ಶಾಲೆಯ ಶಿಕ್ಷಕರಾದ ಹುಲಿಕಲ್ ನಟರಾಜ್ ಅವರಿಗೆ ಪವಾಡಗಳನ್ನು ಬಯಲು ಮಾಡುವುದು ಪ್ರವೃತ್ತಿ. ತಮ್ಮದೇ ಆದ ರೀತಿಯಲ್ಲಿ ಅವರು ಮೌಢ್ಯದ ವಿರುದ್ಧ ತಮ್ಮ ಹೋರಾಟವನ್ನು ನಡೆಸುತ್ತಿದ್ದಾರೆ. ಅಂಥ ಒಂದು ಕಾರ್ಯಕ್ರಮದ ಭಾಗವಾಗಿ 26.2.2006 ರಂದು ಮಡಿಕೇರಿಯಲ್ಲಿ ಶಬರಿಮಲೆಯ ಮಕರಜ್ಯೋತಿ, ಗರುಡಗಂಬವನ್ನು ಸುತ್ತುವ ಹದ್ದು ಮತ್ತು ಭಾಗಮಂಡಲದ ತೀರ್ಥೋದ್ಭವಗಳ ಬಗೆಗಿನ ಮಿಥ್ಯೆಗಳನ್ನು ಬಯಲಿಗೆಳೆದಿದ್ದರು. ಇವೆಲ್ಲವೂ ಸುಳ್ಳು ಎಂಬುದನ್ನು ಸಾಬೀತುಪಡಿಸಿದರು. (ಇತ್ತೀಚೆಗೆ ಅಯ್ಯಪ್ಪ ದೇವಾಲಯದ ಒಬ್ಬ ಧರ್ಮದರ್ಶಿಯೇ ಮಕರಜ್ಯೋತಿ ಮಾನವ ನಿರ್ಮಿತವೆಂದು ಪ್ರಕಟಿಸಿದ್ದೂ ಉಂಟು). 27.2.2010 ರಂದು ಭಜರಂಗದಳದ ಚೇತನ್ ಎನ್ನುವ ವ್ಯಕ್ತಿ ನಟರಾಜ್ ವಿರುದ್ಧ ಮಡಿಕೇರಿಯ ಪೊಲೀಸರಲ್ಲಿ ದೂರು ಸಲ್ಲಿಸಿದನು. ಮೇಲಿನ ವಿದ್ಯಮಾನಗಳನ್ನು ಟೀಕಿಸುವುದರ ಮೂಲಕ ಹಿಂದೂ ಭಾವನೆಗಳಿಗೆ ನೋವನ್ನು ಮಾಡಿದರೆಂದು ನಟರಾಜರ ವಿರುದ್ಧ ಆಪಾದನೆ. ದೇಶದ ಸಂವಿಧಾನವನ್ನಾಗಲಿ, ವೈಚಾರಿಕತೆಯನ್ನಾಗಲಿ ಅರ್ಥ ಮಾಡಿಕೊಂಡಿರದ ಪೊಲೀಸರು ಆ ದೂರನ್ನು ಮಡಿಕೇರಿಯ ನ್ಯಾಯಾಲಯದವರೆಗೂ ಹೊತ್ತರು. ನ್ಯಾಯಾಲಯವು ನಟರಾಜರ ವಿರುದ್ಧ ಜಾಮೀನುರಹಿತ ವಾರೆಂಟನ್ನು ಜಾರಿ ಮಾಡಿತು. ಆಜ್ಞೆಯನ್ನು ನಟರಾಜ್ ರಾಜ್ಯದ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದು ಶ್ರೀ ರವಿವರ್ಮಕುಮಾರ್ ಮತ್ತು ಅವರ ಸಹಾಯಕರಾದ ಶ್ರೀ ಇರ್ಷಾದ್‌ರವರು ನಟರಾಜರ ಪರ ವಾದಿಸಿದ್ದಾರೆ.

ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ತಮ್ಮ ತೀರ್ಪಿನಲ್ಲಿ ನಟರಾಜರ ವಿರುದ್ಧದ ದಾವೆಯನ್ನು ಏಕೆ ಮಾನ್ಯ ಮಾಡಲು ಸಾಧ್ಯವಿಲ್ಲವೆಂಬುದನ್ನು ಹಲವು ಉದಾಹರಣೆಗಳು ಹಾಗೂ ಸೂಕ್ಷ್ಮ ವಿಶ್ಲೇಷಣೆಯ ಮೂಲಕ ವಿವರಿಸಿದ್ದಾರೆ. ವಾಕ್ ಸ್ವಾತಂತ್ರ್ಯ ಮೌಢ್ಯ ವೈಚಾರಿಕತೆ ಮತ್ತು ಸಂವಿಧಾನಾತ್ಮಕ ಮೂಲಭೂತ ಕರ್ತವ್ಯಗಳು ಎಂಬ ಶೀರ್ಷಿಕೆಗಳಡಿಯಲ್ಲಿ ಎಲ್ಲ ಅಂಶಗಳನ್ನು ವಿವರವಾದ ಚರ್ಚೆಗೆ ಒಳಪಡಿಸಿದ್ದಾರೆ. ಅಮೆರಿಕ, ಇಂಗ್ಲೆಂಡ್ ಮತ್ತು ಭಾರತದ ನ್ಯಾಯಾಲಯಗಳಲ್ಲಿ ಇಂಥ ವಿಷಯಗಳಲ್ಲಿ ಹೊರಬಿದ್ದ ತೀರ್ಪುಗಳನ್ನು ಹಾಗೂ ಹಲವರು ಚಿಂತಕರು, ಸಮಾಜ ಸುಧಾರಕರು, ಉದಾಹರಣೆಗೆ ಬುದ್ಧ, ಬಸವ, ನೆಹರು, ರಾಧಾಕೃಷ್ಣನ್‌ರವರು ಹೇಳಿದ ಮಾತುಗಳನ್ನು ಉಲ್ಲೇಖಿಸಿದ್ದಾರೆ. ತೀರ್ಪಿನ ಕೊನೆಯ ಭಾಗದಲ್ಲಿ ನಟರಾಜರ ವಿರುದ್ಧ ಮಡಿಕೇರಿಯ ನ್ಯಾಯಾಲಯ ಹೊರಡಿಸಿದ ಆದೇಶವನ್ನು ತಿರಸ್ಕರಿಸಿದ ನ್ಯಾಯಮೂರ್ತಿಗಳು ಅಲ್ಲಿನ ನ್ಯಾಯಮೂರ್ತಿಗಳು ಯಾವ ರೀತಿ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕಿತ್ತೆಂಬ ಬಗ್ಗೆ ಸೂಚನೆಗಳನ್ನೂ ನೀಡಿದ್ದಾರೆ. ಈಗ ನಟರಾಜ್ ಆರೋಪ ಮುಕ್ತ ಹಾಗೂ ಅವರ ಗೆಲುವು ವೈಚಾರಿಕತೆಗೆ ಸಂದ ಗೆಲುವು. 1994ರಲ್ಲಿ ರಾಜಸ್ಥಾನದ ಭಾವರೀದೇವಿಯ ಮೇಲೆ ಅತ್ಯಾಚಾರ ಮಾಡಿದವರನ್ನು ಆರೋಪಮುಕ್ತಗೊಳಿಸಿದ ಆ ರಾಜ್ಯದ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳು ಅವರೆಲ್ಲರೂ ಮೇಲ್ಜಾತಿಗಳಿಗೆ ಸೇರಿದವರಾದ್ದರಿಂದ ಒಬ್ಬ ದಲಿತ ಮಹಿಳೆಯ ಮೇಲೆ ಅತ್ಯಾಚಾರ ನಡೆಸಲು ಸಾಧ್ಯವಿಲ್ಲ ವೆಂಬ ತೀರ್ಮಾನವನ್ನು ಪ್ರಕಟಿಸಿದರು. ಇಂಥ ಪೂರ್ವಗ್ರಹಪೀಡಿತ ನ್ಯಾಯ ಮೂರ್ತಿಗಳು, ಸಂಘಪರಿವಾರದಂಥ ಸಮಾಜ ವಿರೋಧಿ ಶಕ್ತಿಗಳು ಒಂದು ಕಡೆ ನಿಜವಾದ ಸಾಮಾಜಿಕ ಪ್ರಗತಿಯನ್ನು ತಡೆಯಲು ಪ್ರಯತ್ನಗಳನ್ನು ನಡೆಸುತ್ತಲೇ ಇರುತ್ತವೆ. ಇಂಥ ಚಿಂತನೆಯ ವಿರುದ್ಧವಾಗಿ ನ್ಯಾಯಮೂರ್ತಿ ನಾಗಮೋಹನ್ ದಾಸ್ ಮತ್ತು ನ್ಯಾಯಮೂರ್ತಿ ಕೃಷ್ಣಯ್ಯರ್ ಅಂಥವರೂ ನಮ್ಮ ನಡುವೆ ಇದ್ದಾರೆ ಎಂಬುದೇ ಒಂದು ಸಾಂತ್ವನ. ಇಂಗ್ಲಿಷ್ ಭಾಷೆಯ ಬಳಕೆಯಲ್ಲಿನ ಕೆಲವು ತೊಡಕುಗಳು ಈ ತೀರ್ಪಿನ ಚಾರಿತ್ರಿಕ ಪ್ರಾಮುಖ್ಯತೆಯನ್ನು ಕಿಂಚಿತ್ತೂ ಕಡಿತಗೊಳಿಸುವುದಿಲ್ಲ. ಇಂಥ ವಿದ್ಯಮಾನಗಳ ಆಧಾರದ ಮೇಲೆಯೇ ಪ್ರಗತಿಪರರು ಧೃತಿಗೆಡದೆ ಪ್ರತಿಗಾಮಿ ಶಕ್ತಿಗಳ ವಿರುದ್ಧ ತಮ್ಮ ಹೋರಾಟವನ್ನು ಮುಂದುವರೆಸಬೇಕಾಗಿದೆ.

• ನಗರಗೆರೆ ರಮೇಶ್

ಅಮೀರ್‌ಖಾನ್
ತನ್ನದೇ ಹಾದಿ ಹಿಡಿದ ನಟ

• ಪಾರ್ವತೀಶ

ನಟ-ನಿರ್ಮಾಪಕ ಅಮೀರ್‌ಖಾನ್‌ನ 'ಪೀಪ್ಲಿ ಲೈವ್' ಸಿನಿಮಾ ಮುಂದಿನ ವರ್ಷದ ಆಸ್ಕರ್ ಪ್ರಶಸ್ತಿಗಾಗಿ ಭಾರತದಿಂದ ಅಧಿಕೃತವಾಗಿ ನಾಮಿನೇಟ್ ಆಗಿದೆ. ಸ್ಪರ್ಧೆಯಲ್ಲಿದ್ದ ಒಟ್ಟು 27 ಸಿನಿಮಾಗಳನ್ನು ನೋಡಿದ ಭಾರತೀಯ ಫಿಲಂ ಫೆಡರೇಶನ್ 'Best Foreign Language Cinema' ವಿಭಾಗದ ಪ್ರಶಸ್ತಿಗಾಗಿ 'ಪೀಪ್ಲಿ ಲೈವ್' ಅನ್ನು ಆಸ್ಕರ್‌ಗೆ ಶಿಫಾರಸ್ಸು ಮಾಡಿದೆ. ಈ ಹಿಂದೆ 2001ರಲ್ಲಿ ಅಮೀರ್‌ನ 'ಲಗಾನ್' ಹಾಗೂ 2007ರಲ್ಲಿ 'ತಾರೆ ಜಮೀರ್ ಪರ್' ಸಿನಿಮಾಗಳೂ ಆಸ್ಕರ್ ಪ್ರಶಸ್ತಿಗಾಗಿ ಹೋಗಿದ್ದವು. ಆಗ ಪ್ರಶಸ್ತಿ ಸಿಕ್ಕದಿದ್ದರೂ ಆ ಸಿನಿಮಾಗಳಂತೂ ಸೂಪರ್‌ಹಿಟ್ ಆಗಿದ್ದವು. ಆ ಸಿನಿಮಾಗಳ ಬಗ್ಗೆ ವಿಪರೀತ ಚರ್ಚೆಗಳಾಗಿದ್ದವು.

ಈ ಅಮೀರ್ ಖಾನ್ ಮುಂಬೈ ಸಿನಿಮಾ ಜಗತ್ತಿನ ಸಾಧಾರಣ ಕುಟುಂಬದಿಂದ ಬಂದವನು. ಅಮೀರ್ ಹುಸೇನ್ ಖಾನ್ ಇವನ ಪೂರ್ತಿ ಹೆಸರು. 1965ರಲ್ಲಿ ಹುಟ್ಟಿದ ಅಮೀರ್ 1973ರಲ್ಲೇ ಬಾಲನಟನಾಗಿ'ಯಾದೋಂಕಿ ಭಾರತ್'ನಲ್ಲಿ ನಟಿಸಿದ್ದ. ತಂದೆ ತಾಹೀರ್ ಹುಸೇನ್ ಚಿತ್ರ ನಿರ್ಮಾಪಕ. ಸೋದರ ಮಾವ ನಾಸಿರ್ ಖಾನ್ ಕೂಡ ನಿರ್ಮಾಪಕನೇ. ಸ್ವಾತಂತ್ರ್ಯ ಹೋರಾಟಗಾರ ಮೌಲನಾ ಅಬ್ದುಲ್ ಕಲಂ ಆಜಾದ್‌ರ ಕುಟುಂಬದ ಕವಲು ಇವರದು. 1984ರಲ್ಲಿ 'ಹೋಳಿ' ಎನ್ನುವ ಸಿನಿಮಾ ದ ಮೂಲಕ ಪೂರ್ಣ ಪ್ರಮಾಣದ ಹೀರೋ ಆದ ಅಮೀರ್ ಖಾನ್ ಮೊದಲ ಹಿಟ್ ಸಿನಿಮಾ ನೀಡಿದ್ದು 1988ರಲ್ಲಿ, ಅದು 'ಖಯಾಮತ್ ಸೆ ಖಯಾಮತ್ ತಕ್' ಅಮೀರ್ ಅದಕ್ಕೆ ಫಿಲ್ಮ್‌ಫೇರ್, Debut Actor ಪ್ರಶಸ್ತಿ ಪಡೆದ. ನಂತರ 'ರಂಗೀಲಾ (1995)', 'ರಾಜಾ ಹಿಂದೂಸ್ತಾನಿ (1996)', 'ಲಗಾನ್ (2001)', 'ಮಂಗಲ್‌ಪಾಂಡೆ (2005)', 'ರಂಗ್ ದೇ ಬಸಂತಿ (2006)', 'ತಾರೆ ಜಮೀರ್ ಪರ್ (2007)', 'ಘಜನಿ (2008)', 'ತ್ರೀ ಈಡಿಯೆಟ್ಸ್ (2009)' ಸಿನಿಮಾಗಳು ಬಂದವು. ಇವೆಲ್ಲವೂ ಬಾಕ್ಸ್ ಆಫೀಸ್ ಹಿಟ್‌ಗಳೇ.

ಅಮೀರ್ ಖಾನ್ ಒಬ್ಬ ಡಾಕ್ಟರ್ ಅಥವಾ ಇಂಜಿನಿಯರ್ ಇಲ್ಲ ಕೊನೆಗೆ ಒಬ್ಬ ಚಾರ್ಟೆಡ್ ಅಕೌಂಟೆಂಟ್ ಆದರೂ ಆಗಲಿ ಎಂದು ಅವನ ತಂದೆ ತಾಹೀರ್ ಹುಸೇನ್ ಬಯಸಿದ್ದರಂತೆ. ಆದರೆ ಅಮೀರ್ ಸಿನಿಮಾ ನಟನಾದ, ಈಗ ನಿರ್ಮಾಪಕನೂ ಆಗಿದ್ದಾನೆ. ಅಮೀರ್ ತನ್ನ ಹದಿನಾರನೇ ವಯಸ್ಸಿನಲ್ಲಿದ್ದಾಗ ಗೆಳೆಯನೊಬ್ಬನ ಶಾರ್ಟ್‌ಫಿಲ್ಮ್‌ಗೆ ಸಹಾಯಕನಾಗಿ ಕೆಲಸ ಮಾಡಿದ. ಅವತ್ತೇ ಅವನಿಗೆ 'ತಾನು ಸಿನಿಮಾ ರಂಗಕ್ಕೆ ಹೋಗಿ ಸೇರಬೇಕಾದವನು' ಅನಿಸಿತಂತೆ.

ನಮಗೆ ಏನು ಮಾಡಬೇಕೆನಿಸುತ್ತದೋ ಅದನ್ನೇ ಮಾಡಬೇಕೆಂಬ ಅಮೀರ್‌ನ ನಿಲುವು 'ತ್ರೀ ಈಡಿಯೆಟ್ಸ್' ಸಿನಿಮಾದಲ್ಲೂ ಬಿಂಬಿತವಾಗಿದೆ.

ಈ ಅಮೀರ್ ಖಾನ್ ಬಗ್ಗೆ ಹೇಳಲು ಇನ್ನೂ ಬೇಕಾದಷ್ಟು ವಿಚಾರಗಳಿವೆ.

ಸಿನಿಮಾ ಪತ್ರಕರ್ತರೊಮ್ಮೆ 'ಈಗ ಬಾಲಿವುಡ್‌ನ ನಂ.ಒನ್ ಯಾರು?' ಎನ್ನುವ ಚರ್ಚೆ ಹುಟ್ಟುಹಾಕಿದರು. ಅವರಿಗೆ ಶಾರೂಕ್ ಖಾನ್ ಅಥವಾ ಅಮೀರ್ ಖಾನ್ ಎನ್ನುವ ಜಗಳ ಶುರುವಾಗಲಿ ಎಂಬ ಕಿತಾಪತಿ ಕಾಳಜಿಯಿತ್ತು, ಆದರೆ ಜಪ್ಪಯ್ಯ ಅಂದರೂ ಅಮೀರ್ ಬಾಯಿ ಬಿಡಲಿಲ್ಲ, ಆದರೆ ಶಾರೂಕ್ ತನ್ನ ಅಹಂಕಾರದ ಒಂದು ಕ್ಷಣದಲ್ಲಿ "ನಾನೇ ನಂಬರ್ ಒನ್" ಅಂದುಬಿಟ್ಟ. ಈ ಪತ್ರಕರ್ತರು ತಕ್ಷಣ ಅಮೀರ್ ಬಳಿ ಹೋಗಿ 'ಈಗ ನೀನೇನು ಹೇಳುತ್ತೀಯಾ?' ಅಂತ ಕೆಣಕಿದರು.

ಅವರಿಗೆ ಅಮೀರ್ ಖಾನ್ ಕೊಟ್ಟ ಉತ್ತರ ಹೀಗಿತ್ತು:

"ನೋಡಿ ಸಚಿನ್ ತೆಂಡೂಲ್ಕರ್ ಆಗಲಿ, ಇಲ್ಲಾ ಲತಾ ಮಂಗೇಶ್ಕರ್ ಆಗಲಿ ತಾವಾಗಿಯೇ ತಾನು ನಂಬರ್ ಒನ್ ಅಂತ ಹೇಳಿಕೊಂಡಿದ್ದಾರಾ? ಚೆಸ್ ಚಾಂಪಿಯನ್ ವಿಶ್ವನಾಥನ್ ಆನಂದ್ ಯಾರ ಹತ್ತಿರವಾದರೂ 'ನಾನೇ ನಂಬರ್ ಒನ್ ಅಂದಿದ್ದಾನಾ?' ಅವರವರ ಸಾಧನೆಗಳೇ ಅವರನ್ನು ನಂಬರ್ ಒನ್ ಸ್ಥಾನಕ್ಕೆ ತಂದು ನಿಲ್ಲಿಸುತ್ತವೆ. ಈಗ ಶಾರೂಕ್ ನಾನೇ ನಂಬರ್ ಒನ್ ಅನ್ನುತ್ತಿದ್ದಾನೆ ಅಂತ ನೀವೆಲ್ಲಾ ಹೇಳುತ್ತಿದ್ದೀರಿ, ಇರಲಿ ಆದರೆ ನಾನು ಎಕ್ಕಾ (ಇಸ್ಪೀಟ್‌ನ 'Ace' ಕಾರ್ಡ್) ತಿಳಿದುಕೊಳ್ಳಿ"–ಇದು ಭಾರೀ ಮಜಾ ಅನ್ನಿಸುವ ಉತ್ತರ.

ಇನ್ನೊಮ್ಮೆ ಇಂಗ್ಲೆಂಡಿನ ಮೇಡಂ ಟುಸೇಡ್ಸ್ ಎಂಬುವವಳಿಗೆ ಅಮೀರ್ ಖಾನ್ ಒಂದು ಪಾಠ ಕಲಿಸಿದ. ಈಕೆ ಪ್ರಖ್ಯಾತ ಸಿನಿಮಾ ನಟರ ಮೇಣದ ಪ್ರತಿಮೆಗಳನ್ನು ಮಾಡಿಸಿ ಲಂಡನ್‌ನಲ್ಲಿ ಪ್ರದರ್ಶಿಸುತ್ತಾಳೆ. ಇಂತಹ ಪ್ರತಿಮೆಗಳದ್ದೇ ಮ್ಯೂಸಿಯಂ ಅಲ್ಲಿದೆ. ಅಮಿತಾಬ್, ಶಾರೂಕ್, ಐಶ್ವರ್ಯಾ ರೈ ಮೇಣದ ಪ್ರತಿಮೆಗಳೂ ಅಲ್ಲಿವೆ. ಈ ಅಮೀರ್ ಖಾನ್‌ನ ಪ್ರತಿಮೆ ಮಾಡಿಸಲು ತೀರ್ಮಾನಿಸಿ ಅವನ [illegible] ಹೇಳಿಕಳುಹಿಸಿದಳು.

ಆದರೆ ಅಮೀರ್ 'ನೋ' ಅಂದುಬಿಟ್ಟ. "ಅದಕ್ಕೆಲ್ಲ ನನಗೆ ಟೈಮ್ ಇಲ್ಲ, ಅದರಿಂದ ನನಗೇನೂ ಪ್ರಯೋಜನ. ನನ್ನ ಸಿನಿಮಾ ಚೆನ್ನಾಗಿದ್ದರೆ ಜನ ನೋಡುತ್ತಾರೆ, ನನಗೆ ಅಷ್ಟೇ ಸಾಕು" ಅಂದುಬಿಟ್ಟ.

ಇನ್ನೊಮ್ಮೆ ಪ್ರಸಿದ್ಧ ಕಾರ್ಪೋರೇಟ್ ಸಿನಿಮಾ ಕಂಪೆನಿಯೊಂದು ಅಮೀರ್ ಕಾಲ್‌ಶೀಟ್ ಕೊಟ್ಟರೆ ತಕ್ಷಣ 20 ಕೋಟಿ ರೂಪಾಯಿ ಸಂಭಾವನೆ ಕೊಡುವುದಾಗಿ ಹೇಳಿಕಳುಹಿಸಿದ್ದರು.

"ಸರಿ ಸಿನಿಮಾ ಕತೆ ಏನು ಹೇಳಿ, ಸ್ಕ್ರಿಪ್ಟ್ ಕೊಡಿ" ಅಂದ ಅಮೀರ್. ಅದಕ್ಕೆ ಅವರು "ಕಾಲ್‌ಶೀಟ್ ಕೊಡಿ, ಕತೆ ಆಮೇಲೆ ಮಾಡೋಣ, ನೀವೂ ಒಪ್ಪುವ ಕತೆಯನ್ನೇ ಆರಿಸೋಣ" ಅಂತೆಲ್ಲಾ ಗೋಗರೆದರೂ ಅಮೀರ್ ಒಪ್ಪಲಿಲ್ಲ, ಸರಿಯಾದ ಪ್ಲಾನ್ ಇಲ್ಲದೆ, ಕತೆಯೇ ಇರದ ಅವರ ಆಫರ್ ಬಿದ್ದುಹೋಯಿತು. ಇದಕ್ಕೆ ವ್ಯತಿರಿಕ್ತವಾದ ಇನ್ನೊಂದು ಉದಾಹರಣೆಯೆಂದರೆ ಕೋಲಾ ಕಂಪೆನಿಯವರಿಂದ ಹಣ ಪಡೆದು ಅಮೀರ್ ಕೋಲಾ ಜಾಹೀರಾತು ಕೊಟ್ಟಿದ್ದ. ಬಹುಶಃ ಆ ಕಾಲಘಟ್ಟದಲ್ಲಿ ಒಂದು ಕೋಟಿ ರೂ. ಅಂದರೆ ಅಮೀರ್‌ಗೂ ದೊಡ್ಡ ಮೊತ್ತ ಆಗಿದ್ದಿರಬಹುದು. ಇದೆಲ್ಲಾ ಅಮೀರ್‌ನ ಪ್ರೊಫೆಶನಲಿಸಂ ಅನ್ನು ಮಾತ್ರ ತೋರಿಸುತ್ತಿಲ್ಲ, ಬದಲಿಗೆ ಅವನ ಶ್ರದ್ಧೆ ಮಾಡುತ್ತಿರುವ ತನ್ನದ ಕೆಲಸದ ಬಗೆಗಿನ ಅರ್ಪಣಾ ಮನೋಭಾವವನ್ನೂ ತೋರುತ್ತಿದೆ. 2008ರಲ್ಲಿ ಅಮೀರ್ 'ಘಜನಿ' ಸಿನಿಮಾದಲ್ಲಿ ನಟಿಸುವಾಗ ಅದಕ್ಕೂ ಆರು ತಿಂಗಳ ಹಿಂದಿನಿಂದಲೇ ತನ್ನ ಮೈಕಟ್ಟು ಹುರಿಗಟ್ಟಿಸಿಕೊಳ್ಳುವ ಸಾಧನೆಯಲ್ಲಿ ತೊಡಗಿದ್ದ. ಆ ಸಿನಿಮಾ ಪಾತ್ರ ಅದನ್ನೂ ಕೇಳುತ್ತಿತ್ತು. ಆ ನಂತರ 2009ರಲ್ಲಿ 'ತ್ರೀ ಈಡಿಯೆಟ್ಸ್'ನಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿ ರ್‍ಯಾಂಚೋ ಪಾತ್ರ ಮಾಡಬೇಕಾಗಿ ಬಂತು. ಹಾಗಾಗಿ ಅಮೀರ್ ತನ್ನ ಸಿಕ್ಸ್ ಪ್ಯಾಕ್ ದೇಹವನ್ನು ಕರಗಿಸಿ ಸರಳ ಮೈಕಟ್ಟಿನ ಕಾಲೇಜು ಹುಡುಗನಂತೆ ಕಾಣಲು ತನ್ನ ಮೈ ಕರಗಿಸಿಕೊಂಡಿದ್ದ.

ಒಂದು ಸಿನಿಮಾ ಪಾತ್ರಕ್ಕಾಗಿ ನಟನೊಬ್ಬ ತನ್ನ ದೇಹವನ್ನೇ ಪಣಕ್ಕಿಡುವುದೆಂದರೆ ತಮಾಷೆಯ ಮಾತಲ್ಲ, ಅದಕ್ಕೆ ಅಪರಿಮಿತ ಇಚ್ಛಾಶಕ್ತಿಬೇಕು. ಕಮಲಹಾಸನ್ 'ನಾಯಗನ್' ಸಿನಿಮಾದಲ್ಲಿ ಮಾಫಿಯಾ ಡಾನ್ ವರದರಾಜನ್ ಮೊದಲಿಯಾರ್ ಪಾತ್ರಕ್ಕೆ ಸರಿಹೊಂದುವಂತೆ ತನ್ನ ದೇಹ ಸ್ಥೂಲಕಾಯವಾಗುವಂತೆ ಮಾಡಲು ಕೆಲದಿನ ಡ್ರಗ್ಸ್ ತೆಗೆದುಕೊಂಡರೆಂಬ ಸುದ್ದಿಯಿತ್ತು.

ಪರಿಪೂರ್ಣತೆ ಬಯಸುವ ಸಿನಿಮಾ ಕಲಾವಿದರು ಇಂತಹ ರಿಸ್ಕ್ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ.

ಅಮೀರ್ ಖಾನ್ ಅದೇ ತರಹದವನು.

ಅವನ ಮುಂದಿನ ಯಾವುದೋ ಸಿನಿಮಾದಲ್ಲಿ ಮರಾಠಿ ಭಾಷೆಯಲ್ಲಿ ಮಾತನಾಡುವ ಪಾತ್ರ ನಿರ್ವಹಿಸಲು ಅಮೀರ್ ಈಗ ಮರಾಠಿ ಭಾಷೆ ಕಲಿಯುತ್ತಿದ್ದಾನೆ. ಈಗಾಗಲೇ 'ಅಮೀರ್ ಖಾನ್ ಪ್ರೊಡಕ್ಷನ್ಸ್' ಎಂಬ ಚಿತ್ರ ನಿರ್ಮಾಣ ಸಂಸ್ಥೆ ಶುರು ಮಾಡಿರುವ ಅಮೀರ್ 'ಪೀಪ್ಲಿ ಲೈವ್'ನ ಖ್ಯಾತಿಯಲ್ಲಿರುವಾಗಲೇ 'ದೋಭಿ ಘಾಟ್' ಸಿನಿಮಾದ ಪ್ರಚಾರ ಕಾರ್ಯ ಪ್ರಾರಂಭಿಸಿದ್ದಾನೆ. ಅವನ ಪತ್ನಿ ಬೆಂಗಳೂರಿನ ಕಿರಣ್ ರಾವ್ ಅದರ ನಿರ್ದೇಶಕಿ.

ಕೊಂಚ ಎಚ್ಚರ ತಪ್ಪಿದರೂ ಅಮೀರ್‌ನ 'ಲಗಾನ್', 'ತಾರೆ ಜಮೀರ್ ಪರ್', 'ಪೀಪ್ಲಿ ಲೈವ್' ಸಿನಿಮಾಗಳು ಕಲಾತ್ಮಕ ಸಿನಿಮಾಗಳಾಗಿ ಮಾತ್ರ ಹೆಸರಾಗಿ ಹಣಗಳಿಸದೆ ಸೋಲುವ ಸಾಧ್ಯತೆಗಳಿದ್ದವು. ಆದರೆ ಅಮೀರ್ ಜಾಣ. ಈ ಸಿನಿಮಾಗಳಿಗೆ ಕೊಂಚ ಕಮರ್ಷಿಯಲ್ ಟಚ್ ಅನ್ನು ನೀಡಿ ರಂಜನೆ, ಬೋಧನೆ, ಪ್ರಚೋದನೆಯ ಪ್ಯಾಕೇಜ್ ಅಳವಡಿಸಿ ಯಶಸ್ವಿಯಾಗಿದ್ದಾನೆ. ಅವನ 'ಲಗಾನ್', 'ತ್ರೀ ಈಡಿಯೆಟ್ಸ್', 'ತಾರೆ ಜಮೀರ್ ಪರ್' ಮುಂತಾದ ಸಿನಿಮಾಗಳ ಒಟ್ಟಾರೆ ಮಾರುಕಟ್ಟೆ ಮೌಲ್ಯ ಒಂದು ಸಾವಿರ ಕೋಟಿ ರೂಪಾಯಿಗಳೆಂದರೆ ನೀವು ನಂಬುತ್ತೀರಾ?


ಜನಸಾಮಾನ್ಯರ ಅಪೇಕ್ಷೆ ಏನೆಂಬುದನ್ನು ಚೆನ್ನಾಗಿ ತಿಳಿದಿರುವ ಅಮೀರ್ ಹುಸೇನ್ ಖಾನ್ ಭಾರತೀಯ ಸಿನಿಮಾಗೆ ಹೊಸ ಸಾಧ್ಯತೆಯ ಹಾದಿ ತೋರಿಸುತ್ತಿದ್ದಾನೆ.

ಹಿಂದಿ ಸಿನಿಮಾದಲ್ಲೀಗ ಇದೊಂದು ಟ್ರೆಂಡ್ ಆಗಿ ಬೆಳೆಯುತ್ತಿದೆ. ಸೈಫ್ ಅಲಿ ಖಾನ್, ಕರೀನಾ ಕಪೂರ್, ಅಜಯ್‌ದೇವಗನ್, ಅಭಿಷೇಕ್ ಬಚ್ಚನ್ ತರದ ಪ್ರಖ್ಯಾತರೂ ಕೂಡ ಒಳ್ಳೆಯ ಕತೆ ಹೇಳುವ, ಸ್ಕ್ರಿಪ್ಟ್ ಮಾಡುವ ಪ್ರತಿಭಾವಂತರೆದುರು ವಿನಯದಿಂದ ಕುಳಿತು ಕೇಳಿಸಿಕೊಳ್ಳುತ್ತಿದ್ದಾರೆ. ಅಶುತೋಷ್ ಗೋವಿಕರ್, ಮಧುರ್ ಭಂಡಾರಕರ್, ವಿಶಾಲ್ ಭಾರದ್ವಜ್, ರಾಜ್‌ಕುಮಾರ್ ಹಿರಾನಿ ತರದ ನಿರ್ದೇಶಕರು ಕರೆದು ಪಾತ್ರ ನೀಡುತ್ತೇನೆಂದರೆ ಸಾಕು ಈ ನಟ ನಟಿಯರು ಬೇರೆಲ್ಲಾ ಕೆಲಸ ಬದಿಗಿಟ್ಟು ಸಂಭ್ರಮದಿಂದ ಶೂಟಿಂಗ್‌ಗೆ ಕಾಯುತ್ತಿರುತ್ತಾರೆ. "ಕೇವಲ ಹಣ, ಕೀರ್ತಿ ಮಾತ್ರವಲ್ಲ, ಸವಾಲೆನಿಸುವ, ಪಾತ್ರಗಳು, ಕ್ರಿಯೇಟಿವ್ ಆಗಿ ಸಿನಿಮಾ ಮಾಡುವ ರೀತಿ ನಮಗೂ ಏನನ್ನೋ ಸಾಧಿಸಿದ ಪರಿಪೂರ್ಣತೆ ಪಡೆದ ಅನುಭವ ನೀಡುತ್ತವೆ" ಎಂದು ಕರೀನಾ ಕಪೂರ್ ಒಮ್ಮೆ ಹೇಳಿದ್ದಳು.

"ಸಮಯ ಬಹಳ ಕಡಿಮೆ ಇದೆ, ಅಸಂಬದ್ಧ ಮಾತು, ನಿಷ್ಪ್ರಯೋಜಕ ಕೆಲಸ ಕಡಿಮೆ ಮಾಡು" ಅಂತ ಕರೀನಾಳ ಸಂಗಾತಿ ಸೈಫ್ ಅಲಿ ಖಾನ್ ಅವಳಿಗೆ ಒಮ್ಮೆ ಬುದ್ಧಿ ಹೇಳಿದ್ದನಂತೆ.

ಇದು ಇವರೆಲ್ಲರ ಹಾದಿಯ ಹುಡುಕಾಟದಲ್ಲಿ ತೆರೆದುಕೊಳ್ಳುತ್ತಿರುವ ಹೊಸ ಪಥ. ನಟ-ನಿರ್ಮಾಪಕ ಅಮೀರ್ ಖಾನ್ ಈ ರೇಸ್‌ನಲ್ಲಿ ವೇಗವಾಗಿ ಸಾಗುತ್ತಿದ್ದಾನೆ. ಅವನ ಸಾಧನೆಯ ಈ ಓಟ ಮೋಹಕವಾಗಿದೆ. ರಭಸ, ಕ್ರಿಯೇಟಿವಿಟಿ, ಸಿನಿಮಾ ವ್ಯಾಪಾರ, ಪ್ರೇಕ್ಷಕರ ಖುಷಿ ಎಲ್ಲವನ್ನೂ ಹದವಾಗಿ ಬೆರೆಸಿ ಯಶಸ್ಸು ಕಾಣುತ್ತಿದ್ದಾನೆ ಅಮೀರ್.

ಕನ್ನಡ ಸಿನಿಮಾಗೂ ಈ ತರದ ಒಂದು ಹೊಸ ಹಾದಿ ಬೇಕಿದೆ. ನಮ್ಮ ನಟ ನಿರ್ದೇಶಕರು ಅಮೀರ್ ಮುಂತಾದವರಿಂದ ಕಲಿಯುವುದೂ ಇದೆ.




...ಂದು ಹೊಸತನದ ಓದು

...ತಾ ಪ್ರಭುಶಂಕರ್ ಅವರು ಇಂಗ್ಲಿಷ್ ನಲ್ಲಿ ಬರೆದ 'beyond ...ll of voice' ಕಾದಂಬರಿಯನ್ನು ರವಿಕೃಷ್ಣಾರೆಡ್ಡಿಯವರು 'ಎದೆಯ ಮೀರಿ' ಎಂಬ ಹೆಸರಿನಲ್ಲಿ ಕನ್ನಡ ಅನುವಾದ ಮಾಡಿದ್ದಾರೆ. ಅಮೆ ...ಪಶ್ಚಿಮದ ಸ್ಯಾನ್‌ಹೋಸೆಯಲ್ಲಿ ಇಂಜಿನಿಯರ್ ಆಗಿರುವ ಅಸಿತಾ ...ರಡು ದಶಕಗಳಿಂದ ಅಲ್ಲಿ ನೆಲೆಸಿದ್ದಾರೆ. 'ಇವತ್ತಿನ' ಅಮೆರಿಕಾದಲ್ಲಿ ...ವ ಭಾರತೀಯರ ಕುರಿತು ಹಲವರು ಕಥೆ, ಕಾದಂಬರಿ ಬರೆದಿದ್ದಾರೆ. ...ತೆಯೊಬ್ಬಳು ಇಪ್ಪತ್ತೊಂದನೇ ಶತಮಾನದ ಅಮೆರಿಕಾದಲ್ಲಿ ಸ್ವತಂತ್ರವಾಗಿ ...ರೂಪಿಸಿಕೊಳ್ಳುವ ವಸ್ತುವನ್ನು ಆಧರಿಸಿ ಪೂರ್ಣಪ್ರಮಾಣದ ಕಾದಂಬ ...ಬಂದಿರುವುದು ಇದೇ ಮೊದಲು ಅನ್ನಿಸುತ್ತದೆ.

...ತಾ ಅಮೆರಿಕಾದಲ್ಲಿ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಭಾರತೀಯ ...ಸಹಾಯಕ್ಕಾಗಿರುವ 'ಮೈತ್ರಿ' ಎಂಬ ಸಂಸ್ಥೆಯಲ್ಲೂ ಸ್ವಯಂಸೇವೆ ...ದ್ದಾರೆ. ಈ ಅನುಭವಗಳನ್ನೂ ಅವರು ಇಲ್ಲಿ ಬಳಸಿಕೊಂಡಿದ್ದಾರೆ. ...ರಿಕಾದಲ್ಲಿ ಉದ್ಯೋಗಿಯಾಗಿರುವ ಸ್ವತಂತ್ರ ಮನೋಭಾವದ ಹುಡುಗಿ ...ಸತ್ಯನ್. ವೈದ್ಯೆ ತಾಯಿ, ಪ್ರಾಧ್ಯಾಪಕರಾದ ತಂದೆ ಅವಳನ್ನು ತನ್ನ ...ಜಿ ನಿಲ್ಲಬಲ್ಲ ಆತ್ಮವಿಶ್ವಾಸದ ಹುಡುಗಿಯಾಗಿ ಬೆಳೆಸಿದ್ದಾರೆ. ಅವಳಿಗೆ ...ಗೆಳೆಯ ಪವನ್ ಮತ್ತು ಅಮೆರಿಕಾದಲ್ಲಿ ಪರಿಚಿತನಾದ ಡೇನಿಯಲ್ ... ಸ್ನೇಹಿತರು. ಭಾರತದ ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದು ...ಡಲ್ಲಿ ನೆಲೆಸಿರುವ ಭಾರತೀಯನೊಬ್ಬನನ್ನು ...ಯಾಗಿ ಅವನ ದೌರ್ಜನ್ಯವನ್ನು ಸಹಿಸಲಾಗದೆ ... ವಿಚ್ಛೇದನ ಪಡೆದುಕೊಳ್ಳುತ್ತಾಳೆ. ತನ್ನ ...ಅಮೆರಿಕನ್ ತರುಣ ಡ್ಯಾನ್‌ನನ್ನು ಮದುವೆ ... ನಿರ್ಧಾರ ಮಾಡುತ್ತಾಳೆ. ಈ ಕಥೆಯನ್ನು ...ರುವಾಗ ಎರಡೂ ದೇಶಗಳ ಜೀವನಶೈಲಿ ...ಸಂಸ್ಕೃತಿಗಳನ್ನು ಲೇಖಕಿ ಪದೇಪದೇ ...ಮುಖಿಯಾಗಿಸುತ್ತಾರೆ.



...ದಲ ಭಾಗದಲ್ಲಿ ತುಂಬಾ ಕುತೂಹಲ ...ವ ನಿರೂಪಣೆ ಇದೆ. ಅನು ಸತ್ಯನ್ ...ಈ ನಿರೂಪಕಿಗೆ ಅಮೆರಿಕನ್ ಸ್ತ್ರೀಯರ ...ಸ್ವಾತಂತ್ರ್ಯದ ಆತ್ಮವಿಶ್ವಾಸದ ಬದುಕು ಆಕರ್ಷಕವಾಗಿ ಕಂಡು ... ಸ್ತ್ರೀ ಇನ್ನೂ ಸಂಪ್ರದಾಯದ ಸಂಕೋಲೆಯಲ್ಲಿದ್ದಾಳೆನ್ನಿಸುತ್ತದೆ. ...ಂಬರಿಯ ಕೇಂದ್ರವೇ ಅನುಸತ್ಯನ್‌ಳ ಆತ್ಮನಿವೇದನೆಯ ಶೈಲಿಯ ...ಿ. ಹೆಜ್ಜೆ ಹೆಜ್ಜೆಗೂ ಅನು ಎರಡೂ ದೇಶಗಳ ಮೌಲ್ಯಗಳನ್ನು ... ಹೋಲಿಸುತ್ತಾಳೆ. ಬದಲಾಗುತ್ತಿರುವ ಭಾರತೀಯ ಸ್ತ್ರೀಯ ...ನಗಳು ಚರ್ಚೆಗೆ ಒಳಗಾಗುತ್ತಿರುವ ಈ ಸಂದರ್ಭದಲ್ಲಿ ಅಸಿತಾ ...ಈ ಕಾದಂಬರಿ ಗಮನಾರ್ಹವಾಗಿದೆ. ಅನು ತನ್ನ ತಂದೆಯ ಜತೆ ... ದೇಶಗಳ ಸಮಾಜ ಮತ್ತು ಸಂಸ್ಕೃತಿಯ ಕುರಿತು ನಡೆಸುವ ಪತ್ರ ...,ಅಮೆರಿಕನ್ ಗೆಳೆಯನ ಜತೆ ಭಾರತದ ಜಾತಿಪದ್ಧತಿಯ ಕುರಿತು ... ಮಾತುಗಳು ಅವಳೊಬ್ಬ ಪ್ರಗತಿಪರ ಯೋಚನೆಗಳಿರುವ, ...ಕಾಂಕ್ಷೆಗಳ ತರುಣಿ ಎಂದು ತಿಳಿಸುತ್ತವೆ.




...ು ಮದುವೆಯಾಗಲು ನಿರ್ಧರಿಸಿದ ದೀಪಕ್ ರಂಜನ್ ಬಳಿ ತನಗೊಬ್ಬ ...ನ್ ಬಾಯ್ ಫ್ರೆಂಡ್ ಇರುವುದನ್ನು ಹೇಳಿದಾಗ ಅವನ ನಡವಳಿಕೆಯ ...ಸುತ್ತದೆ. ತುಂಬಾ ಸ್ವತಂತ್ರ ಮನೋಭಾವದ ಹುಡುಗಿ ಅನೂಗೆ ...ಅವಳನ್ನು ಕೇಳದೆ ತಾನೇ ಎಲ್ಲಾ ನಿರ್ಧಾರ ಗಳನ್ನು ತೆಗೆದುಕೊಳ್ಳುವುದು ...ಸುವುದಿಲ್ಲ. ಆದರೆ ಮೊದಲ ಸಲ ಅವನ ಮನೆ ನೋಡಿದಾಗ 'ಈ ...ನೇಗೋ ಹಾಗೆಯೇ ದೀಪಕ್ ಸಹ ಯಾವುದೇ ಹುಳುಕಿಲ್ಲದವನು ...ಂಡಳು ಅನು' (ಪುಟ 99) ಆದರೆ ಮದುವೆಗೆ ಕೇವಲ ಮೂರು ...ುವಾಗ ಅವಳು 'ದೀಪಕ್‌ನ ಪರಿಚಯವಾದ ನಂತರ ನಾನು ...ವಾಗಿ ಮಾತನಾಡುವುದನ್ನು ಕಳೆದುಕೊಂಡೆ. ನಾನು ನನ್ನ ಎದೆಯ ಕೂಗನ್ನು ಕಳೆದುಕೊಂಡೆ'ಎಂದು ಯೋಚಿಸುತ್ತಾಳೆ (ಪುಟ140). ತನ್ನ ಅಕ್ಕ ನೀತಾಳ ಬಳಿ 'ತಾನು ದೀಪಕ್ ಜತೆ ಬಹಳದಿನ ಇರುತ್ತೇನೆ ಎಂದುಕೊಂಡಿಲ್ಲ'(ಪುಟ 140) ಎಂದು ಹೇಳಿದಾಗ ಅವಳು 'ಅಪ್ಪ ಮತ್ತು ನಾನು ಇದರ ಬಗ್ಗೆ ಮಾತನಾಡಿದ್ದೆವು, ದೀಪಕ್ ಇನ್ನೊಬ್ಬರನ್ನು ನಿಯಂತ್ರಿಸುವ ವ್ಯಕ್ತಿತ್ವ ಹೊಂದಿದ್ದಾನೆ. ಇಬ್ಬರು ಬುದ್ಧಿವಂತ, ದೃಢ ಮನಸ್ಸಿನ ಸ್ವತಂತ್ರ ವ್ಯಕ್ತಿಗಳು ಒಂದೇ ಸೂರಿನಡಿ ಸಂತೋಷವಾಗಿ ಬದುಕಲಾಗುವುದಿಲ್ಲ'?ಪು140?. ಎಂದು ಮುಂದೆ ನಡೆಯಬಹುದಾದ ವಾದವಿವಾದಗಳ ಸೂಚನೆ ನೀಡುತ್ತಾಳೆ. ಅನು ಎಲ್ಲ ವಿಷಯಗಳ ಕುರಿತು ಖಚಿತ ಅಭಿಪ್ರಾಯ ಹೊಂದಿದ ಅವಳು ರಾಜಿ ಮಾಡಿಕೊಳ್ಳುವುದಿಲ್ಲ. ಭಾವನೆಗಳಿಗಿಂತ ವೈಚಾರಿಕತೆಗೆ ಹೆಚ್ಚು ಪ್ರಾಧಾನ್ಯತೆ ನೀಡುತ್ತಾಳೆ. ತನ್ನದೇ ಮನೆಯಲ್ಲಿ ತನಗೆ ಸರಿ ಕಂಡಂತೆ ಬದುಕುವುದನ್ನು ರೂಡಿಸಿಕೊಂಡಿದ್ದ ಅನುವಿಗೆ ದೀಪಕ್ ಜತೆಗಿನ ಸಂಸಾರ ಉಸಿರುಕಟ್ಟಿಸಿದಂತೆನಿಸುತ್ತದೆ. ಅವಳ ನಡತೆಯನ್ನು ಶಂಕಿಸುವ ಗಂಡ

"ಕಚೇರಿಯ ಪಾರ್ಕಿಂಗ್ ಜಾಗದಲ್ಲಿ, ಅಂಗಡಿಗಳಲ್ಲಿ, ಅವಳ ವ್ಯವಹಾರದ ಪ್ರವಾಸದ ಸ್ಥಳಗಳಲ್ಲಿ; ಹೀಗೆ ಎಲ್ಲೆಂದರಲ್ಲಿ ಆಕಸ್ಮಿಕ ಎನ್ನಲಾಗದಷ್ಟು ಸಲ, ಅವನು ಅವಳಿಗೆ ಎದುರಾಗುತ್ತಿದ್ದ. ಅವನು ನನ್ನನ್ನು ಸದಾ ಗಮನಿಸುತ್ತಿದ್ದಾನೆ, ನಿಜ ಹೇಳಬೇಕೆಂದರೆ ಕಾವಲು ಕಾಯುತ್ತಿದ್ದಾನೆ."(ಪು.169) ಎನಿಸುತ್ತದೆ ಅನುಗೆ. ಅವಳು ಡೋನಾಕರನ್ ಸೂಟ್ ನಂತಹ ಕಾಲು ಕಾಣಿಸುವ ಉಡುಪು ತೊಟ್ಟಾಗಲಂತೂ ಅವಳ ರವಿಕೆ ಹರಿದು ಅತ್ಯಾಚಾರ ಮಾಡಿ ಮನೋರೋಗಿಯಂತೆ ವರ್ತಿಸುತ್ತಾನೆ. ಮದುವೆಯ ನಂತರ ಉದ್ಯೋಗ ನಿಮಿತ್ತ ಪ್ರವಾಸಗಳನ್ನು ಕಡಿಮೆ ಮಾಡಿಕೊಳ್ಳುವಂತೆ ಅನುಗೆ ದೀಪಕ್ ಸೂಚಿಸುತ್ತಾನೆ. ಅವಳ ಅಮೆರಿಕನ್ ಗೆಳೆಯನ ಜತೆಗಿನ ಸ್ನೇಹ ಕುರಿತು ಕೀಳಾಗಿ ಮಾತನಾಡುತ್ತಾನೆ. ಅವಳ ಕ್ರೆಡಿಟ್ ಕಾರ್ಡ್ ಬಿಲ್ ಅನ್ನು ಗಮನಿಸುತ್ತಾನೆ. ಕೋಪದಿಂದ ಅವಳ ಹೊಟ್ಟೆಗೆ ಒದ್ದು ಅವಳಿಗೆ ಗರ್ಭಪಾತವಾಗಲು ಕಾರಣವಾಗುತ್ತಾನೆ.

ದೀಪಕ್ ಅವಳ ನಿಷ್ಠೆಯನ್ನು ಶಂಕಿಸಿ ಅವಳನ್ನು ಹಿಂಸಿಸಿದಾಗ ಅವಳು ತನ್ನ ಅಮೆರಿಕನ್ ಗೆಳೆಯನ ಸಹಾಯದಿಂದ ಆ ಮನೆಯಿಂದ ಹೊರಬರುತ್ತಾಳೆ. 'ಅವಳನ್ನು ಬೆಳೆಸಿರುವ ರೀತಿ'

ಶಿಕ್ಷಣ ಹಾಗೂ ಆರ್ಥಿಕ ಸ್ವಾವಲಂಬನೆ, ಇವು ಯಾವುವೂ ಅವಳನ್ನು ಒಬ್ಬ ಗಂಡಸು ನೆಲದ ಮೇಲೆ ಎತ್ತೆಸೆಯುವುದರಿಂದ ತಪ್ಪಿಸಲಾಗಲಿಲ್ಲ'(ಪುಟ 171) ದೀಪಕ್ ಮತ್ತೊಬ್ಬ ಭಾರತೀಯ ಹುಡುಗಿಯನ್ನು ಮದುವೆಯಾಗಿ ಅವಳನ್ನೂ ಹೊಡೆದು ಬಡಿದು ಕೊಲೆ ಬೆದರಿಕೆ ಹಾಕುತ್ತಾನೆ. ಅವಳಿಗೂ ಅನು ಸಹಾಯ ಮಾಡುತ್ತಾಳೆ. ಭಾರತದಿಂದ ಬರುವ ಬಾಲ್ಯಸ್ನೇಹಿತ ಪವನ್‌ಗೆ ಸ್ವತಂತ್ರ ವ್ಯಕ್ತಿತ್ವವೊಂದು ಇಲ್ಲವೆಂಬಂತೆ ಆತನ ಪಾತ್ರವಿದೆ. ಪದೇಪದೇ ಡೇನಿಯಲ್ ಕೂಪರ್ ಜತೆ ಭಾರತೀಯ ಪುರುಷರನ್ನು ಅನು ಹೋಲಿಸುತ್ತಾಳೆ. ಡೇನಿಯಲ್‌ನ ಭೂತಕಾಲದ ಬದುಕು ಅನುಗೆ ಮುಖ್ಯವಲ್ಲ. ಹಾಗೆಯೇ ಅನು ಒಮ್ಮೆ ಮದುವೆಯಾದವಳು ಎಂಬುದೂ ಡ್ಯಾನ್‌ಗೆ ಮುಖ್ಯವಲ್ಲ. ಆದರೆ ಭಾರತೀಯ ಮನಸ್ಸೊಂದು ಹಾಗಿರುವುದಿಲ್ಲ ಎಂಬುದನ್ನು ಲೇಖಕಿ ಸರಿಯಾಗಿ ಗುರುತಿಸಿದ್ದಾರೆ. ಈ ಎಲ್ಲ ನೋವಿನಿಂದ ಹೊರ ಬರಲು ಸಹಾಯ ಮಾಡಿದ ಡೇನಿಯಲ್ ನನ್ನು ಮದುವೆಯಾಗುವ ನಿರ್ಧಾರವನ್ನು ಅನು ಮಾಡುತ್ತಾಳೆ. ದೀಪಕ್ ಅಪಘಾತದಲ್ಲಿ ಸಾಯುವುದು, ಪೊಲೀಸರು ಅನುವನ್ನು ಶಂಕಿಸುವುದು, ದೀಪಕನ ವಿಧವಾ ಪತ್ನಿ ರೂಪಾಳನ್ನು ಪವನ್ ಮದುವೆಯಾಗಲು ನಿರ್ಧರಿಸುವುದು ಎಲ್ಲವೂ ಪತ್ತೇದಾರಿ ಕಥೆಯ ಧಾಟಿಯಲ್ಲಿವೆ. ಒಂದು ಹಿಂಸಾತ್ಮಕ ವಿಷಮ ದಾಂಪತ್ಯದ ಕಥೆ ಥ್ರಿಲ್ಲರ್ ಕಾದಂಬರಿಯಂತೆ ಮುಕ್ತಾಯವಾಗುತ್ತದೆ.



ಎದೆಯ ಕೂಗನು ಮೀರಿ
ಲೇ: ಅಸಿತಾ ಪ್ರಭುಶಂಕರ
ಕನ್ನಡಕ್ಕೆ : ರವಿ ಕೃಷ್ಣಾ ರೆಡ್ಡಿ
ಪುಟ : 322 ಬೆಲೆ : 160/-
ಪ್ರಕಾಶನ: ಪೌಲ್ಯಾಗ್ರಹ ಪ್ರಕಾಶನ,
ಬೊಮ್ಮಸಂದ್ರ, ಬೆಂಗಳೂರು-೯೯
ಮೊಬೈಲ್ : 9686080005

ಈ ಹಿಂಸೆಯ ಕಥೆಯ ನಡುವೆ ಅನು ಹತ್ತು ವರ್ಷದ ಹುಡುಗಿಯಾಗಿದ್ದಾಗ ತನ್ನ ತಂದೆಯ ಉದ್ಯೋಗದ ಕಾರಣ ತಾಯಿ ತಂಗಿಯರ ಜತೆ ವಾರಣಾಸಿಯಲ್ಲಿ ಕಳೆದ ದಿನಗಳು ಬಾಲ್ಯದ ಗೆಳೆಯ ಪವನ್ ಜತೆಗಿನ ನೆನಪುಗಳು, ಅಕ್ಕ ನೀತುವಿನ ಜತೆಗಿನ ಭಾವನಾತ್ಮಕ ಗಳಿಗೆಗಳು ಕಾದಂಬರಿಗೆ ಆರ್ದ್ರತೆಯ ಸ್ಪರ್ಶ ನೀಡಿವೆ. ಅನು ಭಾರತದಲ್ಲಿ ಕಳೆದ ಬಾಲ್ಯವನ್ನು ನೆನೆಸಿಕೊಳ್ಳುತ್ತಾ 'ಅಮೆರಿಕಾದಲ್ಲಿ ನಾನು ಎಷ್ಟು ವರ್ಷಗಳಿದ್ದರೂ ಅದು ನನ್ನ ಮನೆಯಾಗುವುದಿಲ್ಲ' ಅಂದುಕೊಳ್ಳುತ್ತಾಳಾದರು ಮರಳಿ ಭಾರತಕ್ಕೆ ಬರುವುದು ಆಕೆಗೆ ಇಷ್ಟವಿಲ್ಲ. ಅನು ತಾನು ಭಾರತೀಯಳಂತೆ ಯೋಚಿಸುತ್ತೇನೆಂದುಕೊಂಡರೂ ಅವಳ ವಿಚಾರಗಳು ಅಮೆರಿಕನ್ ಆಗಿವೆ. ಪವನ್ ಬೆರಳಿನಿಂದ ಅನ್ನ ಕಲೆಸುವುದನ್ನು ನೋಡಿ ಅಸಹ್ಯಿಸಿಕೊಳ್ಳುತ್ತಾಳೆ. ಡ್ಯಾನ್ ಜತೆಗಿನ ಅವಳ ನಡವಳಿಕೆಗಳು ಅದೇ ರೀತಿಯಲ್ಲಿವೆ. ಆದರೆ ಈ ಎಲ್ಲ ಮಿತಿಗಳ ನಡುವೆಯೂ ಕಾದಂಬರಿ ಹೆಣ್ಣು ಗಂಡಿನ ಲೈಂಗಿಕತೆಯ ಕುರಿತ ದ್ವಿಮುಖ ನೀತಿಯನ್ನು ಗಂಭೀರವಾಗಿ ಚಿಂತಿಸುವಂತೆ ಓದುಗರನ್ನು ಪ್ರೇರೇಪಿಸುವಲ್ಲಿ ಯಶಸ್ವಿಯಾಗಿದೆ. ಡ್ಯಾನ್ ಜತೆಗಿನ ಅನುವಿನ ಸ್ನೇಹ, ಪ್ರೀತಿಗಳನ್ನು ನಿರೂಪಿಸುವಾಗ ಮುಕ್ತವಾದ ಬರವಣಿಗೆಯನ್ನು ಲೇಖಕಿ ಸಾಧಿಸಿದ್ದಾರೆ. ಸೃಜನಶೀಲ ಬರವಣಿಗೆಯಲ್ಲಿ ತಾವು ಅನುಭವ ಹೊಂದಿಲ್ಲ, ಇದು ತಮ್ಮ ಮೊದಲ ಪ್ರಯತ್ನ ಎಂದು ಲೇಖಕಿ ಹೇಳಿಕೊಂಡಿದ್ದರೂ ಕಾದಂಬರಿಯ ಓಟ ಸರಾಗವಾಗಿದೆ. ಕುತೂಹಲದಿಂದ ಓದಿಸಿಕೊಳ್ಳುತ್ತದೆ. ರವಿಕೃಷ್ಣಾರೆಡ್ಡಿಯವರ ಅನುವಾದ ಚೆನ್ನಾಗಿದೆ. ಇದೇ ಸಮಯದಲ್ಲಿ ಚರ್ಚಿಸಲ್ಪಡುತ್ತಿರುವ 'ಕವಲು' ಕಾದಂಬರಿಯಲ್ಲಿ ಸ್ತ್ರೀಯರನ್ನು ಚಿತ್ರಿಸಿರುವ ರೀತಿ ಅಸಿತಾ ಅವರ ಬರವಣಿಗೆಗೆ ತದ್ವಿರುದ್ಧವಾಗಿದೆ. ಅಸಿತಾ ಬರವಣಿಗೆ ಜೀವಪರವಾಗಿದೆ. 'ಎದೆಯ ಕೂಗನು ಮೀರಿ' ಕೃತಿಯಲ್ಲಿ ಪ್ರಬುದ್ಧ ವೈಚಾರಿಕತೆಯ ಆತ್ಮವಿಶ್ವಾಸದ ಹುಡುಗಿಯೊಬ್ಬಳು ಒಲ್ಲದ ಮದುವೆಯಿಂದ ಹೊರಬರುವುದನ್ನು ಲೇಖಕಿ ಆರೋಗ್ಯಕರವಾದ ದೃಷ್ಟಿಕೋನದಿಂದ ಚಿತ್ರಿಸಿದ್ದಾರೆ. ಇದು ಎಲ್ಲ ಅರ್ಥದಲ್ಲೂ ಇಪ್ಪತ್ತೊಂದನೇ ಶತಮಾನದ ಬರವಣಿಗೆಯಾಗಿದೆ. ಅನುವಾದಕರಾದ ರವಿಕೃಷ್ಣಾರೆಡ್ಡಿಯವರು ಮುನ್ನುಡಿಯಲ್ಲಿ "ಕಾದಂಬರಿಯ ಕಥೆಯ ಬಹುಪಾಲು ಅಮೆರಿಕಾದಲ್ಲಿ ನಡೆದರೂ, ಲೇಖಕಿ ಭಾರತದ ಅತಿಸೂಕ್ಷ್ಮ ವಿಷಯಗಳಾದ ಅಸ್ಪೃಶ್ಯತೆ, ಜಾತಿಪದ್ಧತಿ, ದೌರ್ಜನ್ಯಗಳ ಬಗೆಗೆ ದಿಟ್ಟವಾಗಿ, ಧೈರ್ಯದಿಂದ ಚರ್ಚಿಸುತ್ತಾರೆ. ಇದು ಭಾರತದ ಬಗೆಗೆ ಭಾರತೀಯರಲ್ಲದವರು ಹೊಂದಿರುವ, ಆದರೆ ಭಾರತೀಯರು ಉತ್ತರಿಸಲು ಮುಜುಗರಪಡುವ ಪ್ರಶ್ನೆಗಳಿಗೆ ಉತ್ತರಿಸುತ್ತದೆ" ಎಂದು ಕಾದಂಬರಿಯ ವೈಚಾರಿಕ ಆಕೃತಿಯ ಕುರಿತು ಬರೆದಿದ್ದಾರೆ. ಅಪಾರ ಜೀವನಾನುಭವ ಮತ್ತು ಪ್ರಬುದ್ಧ ವೈಚಾರಿಕತೆಯುಳ್ಳ ಅಸಿತಾ ಇನ್ನಷ್ಟು ಬರೆಯಲಿ ಎಂದು ಆಶಿಸುತ್ತೇನೆ.

ಪುಸ್ತಕ ವಿಮರ್ಶೆ

• ಎಲ್.ಸಿ. ಸುಮಿತ್ರಾ ತೀರ್ಥಹಳ್ಳಿ



"ಕಾವ್ಯ ಎನ್ನುವುದು ನನಗೆ ಸರ್ವರ ಶಾಂತಿಗಾಗಿ ಮಾಡುವ ಪ್ರಾರ್ಥನೆ, ಹೃದಯಗಳನ್ನು ಬೆಸೆಯುವ ಪ್ರೇಮದ ನೂಲು... ಅಥವಾ ಒಂದು ಕ್ಷಿಪ್ರ ಬಿರುಗಾಳಿಯ ಸಂಕೇತ... ರಕ್ತ ಸುರಿಯುವ ಗಾಯದ ಮೇಲಿನ ಮುಲಾಮು... ಒಮ್ಮೊಮ್ಮೆ ಸಾಮಾಜಿಕ ...ಸಣೆಗೆ ಮುನ್ನುಡಿ ಬರೆಯುವ ಅಸ್ತ್ರ..."

...ಗೆ ಕಾವ್ಯವನ್ನು ವಿವರಿಸುವ ಮಲೆಯಾಳಂ ಕವಿ ಒ.ಎನ್.ವಿ ... ಅವರಿಗೆ 2007ರ ಸಾಲಿನ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಬಂದಿದೆ. ...ಗಳಿಗೆ ತಕ್ಕಂತೆ ಅವರ ಕಾವ್ಯದಲ್ಲಿ ಕ್ರಾಂತಿ, ಶಾಂತಿ ಮತ್ತು ...ಯತೆಗಳು ಹೊರಹೊಮ್ಮುತ್ತಾ ಬಂದಿವೆ. 'ಅಕ್ಷರಂ', 'ಭೂಮಿಕ್ ...ರಮ ಗೀತಂ', 'ಮಾಯಿಪೀಲಿ'-ಅವರ ಪ್ರಮುಖ ಕೃತಿಗಳಲ್ಲಿ ... ಕುರುಪ್ ಅವರ 'ಒಂದೇ ಕಡಲು' ಕವನದ ಅನುವಾದ ಇಲ್ಲಿದೆ. ... ಪತ್ರದ ಒಂದೆರಡು ಸಾಲುಗಳನ್ನು ಇಲ್ಲಿ ಮುದ್ರಿಸಿದೆ

...ಕೇಶ್ ಬಳಗಕ್ಕೆ,

...ವು ಕೇಳಿರುವಂತೆ ಜ್ಞಾನಪೀಠ ಪ್ರಶಸ್ತಿ ವಿಜೇತ ಶ್ರೀ ...ಕುರುಪ್ ಅವರ 'ಒಂದೇ ಕಡಲು' ಎಂಬ ಮೂಲ ಮಲೆಯಾಳಂ ಕನ್ನಡ ಅನುವಾದವನ್ನು ಕಳುಹಿಸಿದ್ದೇನೆ. ಅಯೋಧ್ಯೆ-ಬಾಬ್ರಿ ...ಮಿಗೆ ಸಂಬಂಧಿಸಿದ ನ್ಯಾಯಾಲಯದ ತೀರ್ಪು ಹೊರಬರುವಾಗ ...ಶ ಆತಂಕದಿಂದ ಚಡಪಡಿಸುತ್ತಿರುವಂತೆ ಕಾಣುತ್ತಿದೆ. ಈ ಹೊತ್ತಿನಲ್ಲಿ ...ಕುರುಪ್ ಅವರ 'ಒಂದೇ ಕಡಲು' ಎಂಬ ಈ ಕವಿತೆ ಎತ್ತಿ ...ರೂಪ ಪೌಲ್ಯ, ಮಹತ್ವದ್ದು ಮತ್ತು ಅರ್ಥಪೂರ್ಣವಾದುದು ...ಂದಿದ್ದೇನೆ.

—ತೇರ್‌ಳಿ ಎನ್.ಶೇಖರ್

ಕಡಲು ಏಳೆಂದು
ಯಾರು ಹೇಳಿದರು? ಬರೀ ಸುಳ್ಳು!
ಇರುವುದೊಂದೇ ಕಡಲಲ್ಲವೇ?
ಕೇವಲ ಒಂದು ಕಡಲು
ಹಿಂದೆ ಒಂದಾಗಿದ್ದ ಜನವಾಸದ ಮೋಹಕ
ಈ ಮಹಾತೀರ ಬಿರುಕು ಬಿಟ್ಟು ಬೇರ್ಪ
ಅತ್ತು ಕರೆದು ಆ ದಂಡೆ ಖಂಡಗಳನ್ನು
ಕೋಟಿ ಕರಗಳನ್ನು ಚಾಚಿ ಅಪ್ಪಿದೊಂದೇ
ಮೂಡಣದಲ್ಲಿ ತಥಾಗತನ
ಶರಣತ್ರಯ ಮಂತ್ರ
ಗಂಟು ಬಿಚ್ಚಿದ ತಾಣದಲಿ
ಅದು 'ಶಾಂತ ಸಾಗರ'
ಅತಲ ಕ್ಷೋಬೆಗಳ ಅಯಸ್ಕಾಂತದಲೆ
ಗಳಿಗಿಂತಲೂ ದೂರದಲ್ಯಾವುದೋ ದಿಕ್ಕಲ್ಲ
ಅದು 'ಅಟ್ಲಾಂಟಿಕ್'- ಮತ್ತೆ
ದಕ್ಷಿಣೇಶ್ವರದಿಂದ ಬಂದ
ಯೋಗಿಗಂಬಾ ದರುಶನ ಕರುಣಿಸಿದ
ಭಾರತದ ಪದಪೀಠ
'ಹಿಂದೂ ಸಾಗರ'ವೆಂದು ಮಂದಿ ಕರೆದ
ಈ ಕಡಲು, ಆ ಒಂದೇ ಕಡಲು
ಒಳಗಿಟ್ಟಿರುವ ಎಲ್ಲ ಸುಗಂಧವನು
ಕಡಲ್ಗಳ್ಳರಂತೆ ಕೈವಶ ಮಾಡಿಕೊಳ್ಳಲು
ಮುನ್ನುಗ್ಗಿ ಬರುವ ಗಾಳಿಯನ್ನೇ
ಸಹಾಯಕ್ಕೆಳೆವ ಅರಬ್ಬೀಯ
ಹಾಯಿಹಡಗು ಹಾದುಬಂದ ತಾಣ




ಒಂದೇ ಕಡಲು

ಮೂಲ: ಒ.ಎನ್.ವಿ.ಕುರುಪ್
ಅನು : ತೇರ್‌ಳಿ ಎನ್.ಶೇಖರ್

'ಅರಬ್ಬೀ ಸಮುದ್ರ'ವಂತೆ...
ಆರ್ದ್ರ ಹೃದಯವೂ

ಶೈತ್ಯದಲಿ ಮರಗಟ್ಟಲು
ಆರ್ತಗೊಳ್ಳುವುದು ಧ್ರುವಸೀಮೆಯ 'ಆರ್ಟಿಕ್'
ನಾನಾ ನಾಮಗಳಲಿ ಕರೆದರೂ
ಇವೆಲ್ಲವು ಒಂದೇ ಕಡಲು;
ಬಗೆಬಗೆಯಾಗಿ ಕಲ್ಪಿಸಿಕೊಳ್ಳುವ
ಅನೇಕಥೆಯೊಳಗಿನ ಕುರುಡರು
ಹಿಂದೆ ಒಂದಾಗಿದ್ದ ಜನವಾಸದ
ಭಿನ್ನಭಿನ್ನವಾದ ಈ ಭೂಖಂಡಗಳನು
ಶಯನ ಪ್ರದಕ್ಷಿಣೆ ಹಾಕುತ್ತಿರುವುದೊಂದೇ ಕಡಲು!
ಸೂರ್ಯನ ಕೈಗಳಲಿ
ಥಳಥಳಿಸುತ್ತಿರುವುದೊಂದೇ ಕಡಲು!
ಪಂಚಾಗವನು ತೆರೆದು
ಬೆರಳುಗಳನು ಮಡಚಿ, ಬಿಡಿಸಿ ಏನನು ಗುಣಿಸುವಿರಿ?
ತೀರಗಳು, ಹರಿದುಹೋದ ಹಾಸುಗೆಯಿಂದ
ಚದುರಿಹೋದ ಹತ್ತಿಯಂತೆ ಬಿದ್ದಿವೆ
ಇನ್ನೂ ತುಂಡರಿಸಲು ಪಾಲು ಮಾಡಿಕೊಳ್ಳಲು
ಪರಸ್ಪರ ಕಿತ್ತಾಡುವವರನ್ನು ಕಂಡು
ಬಿಕ್ಕಿಬಿಕ್ಕಿ ಅಳಲು ಇರುವುದೊಂದೇ ಕಡಲು!
ಮಕ್ಕಳೇ!
ಬನ್ನಿರಿ, ಹಡಗನು ಇಳಿಸಿ ಆಡಲು
ಸಾಲದೆ ಸಮಗ್ರ ಕಡಲು
ಈ ಒಂದೇ ಒಂದು ಕಡಲು...?

ಹುಬ್ಬಳ್ಳಿ: ಜೈನ್ ಬೋರ್ಡಿಂಗ್‌ನಲ್ಲಿ ಅಪರಾತಪರಾ



ಯಾವುದೇ ಸಮುದಾಯದ ಸಂಸ್ಥೆಗಳಲ್ಲಿ ರಾಜಕಾರಣಿಗಳು, ಪುಢಾರಿಗಳು ಹೊಕ್ಕರೆ ಏನಾಗುತ್ತದೋ ಅದೀಗ ಹುಬ್ಬಳ್ಳಿಯ ಜೈನ್ ಬೋರ್ಡಿಂಗ್‌ನಲ್ಲೂ ನಡೆಯುತ್ತಿದೆ.

1909ರಲ್ಲಿ ಹುಬ್ಬಳ್ಳಿಯ ಸ್ಟೇಷನ್ ರೋಡ್‌ನಲ್ಲಿ ಸ್ಥಾಪನೆಗೊಂಡ ಜೈನ್ ಬೋರ್ಡಿಂಗ್ ಕಟ್ಟುವಲ್ಲಿ ಉತ್ತರ ಕರ್ನಾಟಕದ ದಿಗಂಬರ ಜೈನರಷ್ಟೇ ಶ್ವೇತಾಂಬರ ಜೈನರ ಪಾತ್ರವೂ ಇತ್ತು, ಕಾಲಕ್ರಮೇಣ ಇದು ದಿಗಂಬರ ಜೈನರ ವಶವಾಯಿತು.



ಬಹುತೇಕ ಧಿಗಂಬರ ಜೈನರು ಕಾಂಗ್ರೆಸ್‌ನ ಬೆಂಬಲಿಗರಾಗಿದ್ದರಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಎ.ಬಿ. ಜಕನೂರ್, ವೀರಕುಮಾರ್ ಪಾಟೀಲ್ ತರಹದವರಿಗೆ ಸಚಿವಗಿರಿ ಸಿಗುವಂತೆ ನೋಡಿಕೊಂಡಿದ್ದರು. ಈಗ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಎಲ್ಲ ಮಠ, ಶಿಕ್ಷಣ ಸಂಸ್ಥೆಗಳಲ್ಲಿ ಮೂಗು ತೂರಿಸುತ್ತಿರುವಂತೆ ಇಲ್ಲೂ ಮಾಡಿತು. ಇದರ ಭಾಗವಾಗಿಯೇ 2008-2010 ರ ಅವಧಿಗಾಗಿ ಜೈನ್ ಬೋರ್ಡಿಂಗ್ ಆಡಳಿತ ಮಂಡಳಿಗೆ ಬಿಜೆಪಿಯ ಕಟ್ಟಾ ಚೆಡ್ಡಿ ದತ್ತಾ ಡೋರ್ಲೆ ಅಧ್ಯಕ್ಷನಾದ.

ಬಡ ಜೈನ ವಿದ್ಯಾರ್ಥಿಗಳಿಗೆ ಆಸರೆಯಾಗಿದ್ದ ಜೈನ್ ಬೋರ್ಡಿಂಗ್ ಆದಾಗಲೇ ವಾಣಿಜ್ಯೀಕರಣಗೊಳ್ಳತೊಡಗಿತ್ತು, ಬಿಜೆಪಿಯ ದರ್ತಾ ಡೋರ್ಲೆ ಇದನ್ನು ಹೈಲೆವೆಲ್‌ಗೆ ಒಯ್ದು ಕುಬಸದ ಗಲ್ಲಿಯಲ್ಲಿರುವ ಜೈನ್ ಬೋರ್ಡಿಂಗ್ ಕೋಟ್ಯಂತರ ಮೌಲ್ಯದ ಆಸ್ತಿಯನ್ನು ಜುಜುಬಿ 26 ಲಕ್ಷ ರೂ.ಗಳಿಗೆ ಮಾರಿ ತನ್ನ ಪಾಲನ್ನು ಕಿಸೆಗೆ ಹಾಕಿಕೊಂಡ. ಈ ಇದು ಬಯಲಿಗೆ ಬಂದಿದ್ದೆ ಜೈನ್ ಬೋರ್ಡಿಂಗ್ ಒಳಗೆ ಗುದುಮುರುಗಿ ಆರಂಭವಾಗಿದೆ. ಆಸ್ತಿ ಮಾರಿ ಬಂದ ಹಣವನ್ನು ಬ್ಯಾಂಕಿನಲ್ಲಿ ಡಿಪಾಸಿಟ್ ಇಟ್ಟಿರುವೆ, ಮುಂದೆ ಇದು ಬೋರ್ಡಿಂಗ್ ಅಭಿವೃದ್ಧಿಗೆ ಉಪಯೋಗವಾಗುತ್ತದೆ ಎಂದು ಡೋರ್ಲೆ ಬೊಗಳೆ ಬಿಡುತ್ತಿದ್ದಾನೆ.

ಬಿಜೆಪಿಯ ದರ್ತಾ ಡೋರ್ಲೆಯಿಂದ ಈ ಜೈನ್ ಬೋರ್ಡಿಂಗ್ ಅನ್ನು ಉಳಿಸಿಕೊಳ್ಳುವುದಾಗಿ ಹೇಳುತ್ತಿರುವ ಹಿಂದಿನ ಅಧ್ಯಕ್ಷ ಬಿ.ಟಿ. ರಾಜಮಾನೆ, ಬಿ.ಎ ಪಾಟೀಲ್, ಹೋಟಪೇಟೆ, ಗೊಂಗಡಿಗಳ ಮೇಲೆ 40 ಲಕ್ಷ ರೂ. ದುರುಪಯೋಗದ ಆರೋಪ ಹೊರಿಸಿರುವ ಡೋರ್ಲೆ ತಾನು ಕಡಿಮೆ ರೇಟಿಗೆ ಆಸ್ತಿ ಮಾರಿದ್ದನ್ನು ಮುಚ್ಚಿಡಲು ಪ್ರಯತ್ನಿಸುತ್ತಿದ್ದಾನೆ. ಕುಬಸದಗಲ್ಲಿಯ ಬೋರ್ಡಿಂಗ್ ಆಸ್ತಿ ಮಾರಲು ನಿರ್ಧರಿಸಿದ್ದು ಹಿಂದಿನ ಆಡಳಿತ ಮಂಡಳಿಯ ಬಿ.ಟಿ. ರಾಜಮಾನೆ ಮತ್ತು ಸಂಗಡಿಗರು ಎಂದು ಆರೋಪಿಸಿರುವ ದತ್ತಾ ಡೋರ್ಲೆ, ಅದನ್ನು ತಡೆಯುವ ಬದಲು ತಾನೇ ಮುಂದೆ ನಿಂತು ಮಾರಿದ್ದೇಕೆ? ಎಂಬ ಪ್ರಶ್ನೆಯೀಗ ಜೈನ ಸಮುದಾಯದಲ್ಲಿ ಎದ್ದಿದೆ.

ಅಧಿಕಾರ ಕೈತಪ್ಪಿದಾಗಿನಿಂದ ಬಾಲಸುಟ್ಟ ಬೆಕ್ಕುಗಳಂತೆ ಆಡುತ್ತಿರುವ ಬಿ.ಟಿ. ರಾಜಮಾನೆ, ಬಿ.ಎ. ಪಾಟೀಲ್‌ಗಳು 'ಉತ್ತರ ಕರ್ನಾಟಕ ಜೈನ್ ಸಭಾ' ಎಂಬ ಪರ್ಯಾಯ ಸಂಘಟನೆ ಹುಟ್ಟುಹಾಕಿದರು. ಹುಬ್ಬಳ್ಳಿಯ ಜೈನ್ ಬೋರ್ಡಿಂಗ್ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಕಚೇರಿ ಹೊಂದಿರುವ ದಕ್ಷಿಣ ಭಾರತ ಜೈನ್ ಸಭಾಕ್ಕೆ ಒಳಪಟ್ಟಿದೆ. ಈಗ ಉತ್ತರ ಕರ್ನಾಟಕ ಜೈನ್ ಸಭಾದ ರಾಜಮಾನೆ, ಪಾಟೀಲ್‌ಗಳು ಹುಬ್ಬಳ್ಳಿಯ ಜೈನ್ ಬೋರ್ಡಿಂಗ್ ತಮ್ಮ ಸಂಘಕ್ಕೆ ಬರಬೇಕೆಂದು ಕ್ಯಾತೆ ತೆಗೆದಿದ್ದಾರೆ. ಇದಕ್ಕಾಗಿ ಇವರು ಜೈನರಲ್ಲೇ ಮರಾಠಿಗರು, ಕನ್ನಡಿಗರು ಎಂದು ಒಡಕು ತರಲು ಮಾಡಲು ಯತ್ನಿಸುತ್ತಿದ್ದಾರೆ.


ಹೀಗೆ ದರ್ತಾ ಡೋರ್ಲೆ, ರಾಜಮಾನೆಗಳ ಸ್ವಾರ್ಥದ ಜಗಳದಲ್ಲಿ ಜೈನ್ ಬೋರ್ಡಿಂಗ್ ಬೀದಿಗೆ ಬಂದಿದೆ. ರಾಜಮಾನೆ, ಪಾಟೀಲ್‌ಗಳ ಮೇಲೆ 40 ಲಕ್ಷ ರೂ.ಗಳ ಆಪಾದನೆ ಹೊರಿಸಿರುವ ಡೋರ್ಲೆ ಅವರ ವಿರುದ್ಧ ಕ್ರಿಮಿನಲ್ ಕೇಸು ಹಾಕಿದ್ದಾನೆ. ಆದರೆ ಇನ್ನೊಂದು ಕಡೆ ಬೋರ್ಡಿಂಗ್‌ನ ಕೋಟ್ಯಂತರ ಮೌಲ್ಯದ ಆಸ್ತಿಯನ್ನು 26 ಲಕ್ಷಕ್ಕೆ ಮಾರಿಕೊಂಡಿದ್ದಾನೆ.

ಅಂದರಿಲ್ಲಿ ಎರಡು ಕಳ್ಳ ಗುಂಪುಗಳ ನಡುವಿನ ಕಿತ್ತಾಟದಲ್ಲಿ ಸರ್ಕಾರದ ಅನುದಾನ ಪಡೆಯುವ ಜೈನ್ ಬೋರ್ಡಿಂಗ್ ದಿವಾಳಿ ಆಗುತ್ತಿದೆ. ಅಸಲಿ ಜೈನರು ಕೂಡಲೇ ಎಚ್ಚೆತ್ತುಕೊಂಡು ಜೈನ್ ಬೋರ್ಡಿಂಗ್ ಅನ್ನು ಕಳ್ಳ ಖದೀಮರಿಂದ ಹಾಗೂ ರಾಜಕೀಯದಿಂದ ಮುಕ್ತಗೊಳಿಸಬೇಕಾಗಿದೆ.

• ಹುಬ್ಬಳ್ಳಿಯಾಂವ

ಚಾಮರಾಜನಗರ: ಮಾಂಬಳ್ಳಿ ಗ್ರಾ.ಪಂ. ಲೂಟಿ

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ವ್ಯಾಪ್ತಿಗೆ ಬರುವ ಮಾಂಬಳ್ಳಿ ಇಡೀ ಜಿಲ್ಲೆಗೆ ದೊಡ್ಡ ಗ್ರಾಮ. ಅತ್ಯಧಿಕ ಜನಸಂಖ್ಯೆ ಇರುವ ಈ ಮಾಂಬಳ್ಳಿ ಗ್ರಾಮಕ್ಕೆ ಪ್ರತ್ಯೇಕವಾದ ಗ್ರಾಮ ಪಂಚಾಯಿತಿಯೇ ಇದೆ. ನಡೆದಿರುವ ಅವ್ಯವಹಾರವು ಕೂಡ ಇಡೀ ರಾಜ್ಯದಲ್ಲೇ ದೊಡ್ಡ ಹಗರಣವಾಗಿ ಹೋಗಿದೆ.



ಬಸವಣ್ಣ

ಮಾಂಬಳ್ಳಿ ಗ್ರಾಮ ಪಂಚಾಯಿತಿಗೆ 2007-08 ಹಾಗೂ 2008-09 ನೇ ಸಾಲಿನಲ್ಲಿ ಬಿಡುಗಡೆಯಾಗಿದ್ದ ಕೋಟ್ಯಂತರ ರೂಪಾಯಿ ಸರ್ಕಾರದ ಹಣವನ್ನು ಕಳ್ಳ ಬಿಲ್‌ಗಳನ್ನು ಸೃಷ್ಟಿಸಿ ನುಂಗಿ ನೀರು ಕುಡಿದು ಸಿಕ್ಕಿಬಿದ್ದು ಸರ್ಕಾರದಿಂದ ಕ್ರಿಮಿನಲ್ ಕೇಸ್ ಜಡ್ಡಿಸಿಕೊಂಡು ಪೊಲೀಸರು ಬೀಸಿರುವ ಬಲೆಯಿಂದ ತಪ್ಪಿಸಿಕೊಂಡು ಕುಳಿತಿರುವುದು ಬೇರಾರು ಅಲ್ಲ, ಮಾಂಬಳ್ಳಿ ಗ್ರಾಮ ಪಂಚಾಯ್ತಿನ ಕಾರ್ಯದರ್ಶಿ ಕೆಸ್ತೂರು ಬಸವಣ್ಣ ಹಾಗೂ 2008-09 ರಲ್ಲಿ ಅಧ್ಯಕ್ಷನಾಗಿದ್ದ ಆರ್. ಮಲ್ಲೇಶ್ ಎಂಬ ಮಾಜಿ ಶಾಸಕ ಎಸ್. ಜಯಣ್ಣನ ಬಲಗೈ ಬಂಟರು!

ಪಂಚಾಯ್ತಿ ವ್ಯಾಪ್ತಿಗೆ ಬರುವ ಆಶ್ರಯಮನೆ ನಿರ್ಮಾಣ ಅಂಬೇಡ್ಕರ್ ಯೋಜನೆ. ಇಂದಿರಾ ಆವಾಸ್ ಯೋಜನೆ ಡಿ.ಸಿ ಬಿಲ್ಲು, ಪರಿಶಿಷ್ಟ ಜಾತಿ/ವರ್ಗದವರಿಗೆ ಬರುವ ಮೀಸಲಾತಿ ಹಣ, ಶೌಚಾಲಯ ನಿರ್ಮಾಣಕ್ಕೆ ಮಂಜೂರಾಗಿರುವ ಹಣ SJRY ಯೋಜನೆಯ ಕಾಮಗಾರಿಗೆ ಬಿಡುಗಡೆಯಾಗಿರುವ ಲಕ್ಷಾಂತರ ರೂಪಾಯಿ ಹಣ ಕೂಲಿಗಾಗಿ ಯೋಜನೆಗೆ ಬಿಡುಗಡೆಯಾಗಿರುವ ಹಣ. ಹಾಗೂ ಪಂಚಾಯ್ತಿಗೆ ವಿಶೇಷವಾಗಿ ಬಿಡುಗಡೆಯಾಗಿರುವ 12 ನೇ ಹಣಕಾಸು ಯೋಜನೆಗಳಲ್ಲೆಲ್ಲಾ ಕೋಟ್ಯಂತರ ಹಣವನ್ನು ನಕಲಿ ಬಿಲ್ ಸೃಷ್ಟಿಸಿಯೇ ಗುಳುಂ ಮಾಡಿರುವ ಈ ಪಂಚಾಯ್ತಿ ಅಧ್ಯಕ್ಷ ಆರ್. ಮಲ್ಲೇಶ್‌ನಿಗೆ ಸಾಥ್ ನೀಡಿದ್ದು ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಕೆಸ್ತೂರು ಬಸವಣ್ಣ ಮನೆಗಳಿಲ್ಲದ ಬಡ ಜನರಿಗೆ ಮನೆ ಗ್ರ್ಯಾಂಟ್ ಕೊಡುವ ಬದಲಿಗೆ ಅನರ್ಹರಾಗಿರುವ ಶ್ರೀಮಂತರಿಗೆ ತಲಾ 5 ಸಾವಿರ ರೂಪಾಯಿ ಪಡೆದು ಮನೆ ಮಂಜೂರಾತಿ ಆದೇಶದ ಪ್ರತಿಯನ್ನು ಕೊಡಲಾಗಿದೆ. ರಸ್ತೆ ಅಭಿವೃದ್ಧಿ, ಚರಂಡಿ ಅಭಿವೃದ್ಧಿ ಹಾಗೂ ಶೌಚಾಲಯದ ಅಭಿವೃದ್ಧಿಗೆಂದು ಬಂದಿದ್ದ ಹಣವನ್ನು ಕೆಲಸ ಮಾಡಿಸದೆಯೇ ನಕಲಿ ದಾಖಲಿ ಸೃಷ್ಟಿಸಿ, ಕೊಳ್ಳೆ ಹೊಡೆದಿರುವ ಈ ಕೆಸ್ತೂರು ಬಸವಣ್ಣನೆಂಬ ಪಂಚಾಯ್ತಿ ಕಾರ್ಯದರ್ಶಿ ಟಿ. ನರಸೀಪುರದ ತ್ರಿವೇಣಿ ನಗರದಲ್ಲೊಂದು ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಬಂಗಲೆ ಹಾಗೂ ಅಂಗಡಿ ಮಳಿಗೆಗಳನ್ನು ಕಟ್ಟಿಸಿಕೊಂಡಿರುವುದಲ್ಲದೆ, ತನ್ನ ಹುಟ್ಟೂರು ಕೆಸ್ತೂರು ಗ್ರಾಮದಲ್ಲಿ ಲಕ್ಷಾಂತರ ರೂಪಾಯಿ ಬೆಲೆಬಾಳುವ ಜಮೀನು ಹೊಂದಿದ್ದಾನೆ. ಕೊಳ್ಳೇಗಾಲದ ಗೀತಾ ಏಜೆನ್ಸಿಯವರ ಜೊತೆ ಒಳಒಪ್ಪಂದ ಮಾಡಿಕೊಂಡು ಟೆಂಡರ್ ಕರೆಯದೆ ಅಂಗಡಿಯವರಿಂದ ನಕಲಿ ಬಿಲ್ ಸೃಷ್ಟಿಸಿಕೊಂಡು ಗೀತಾ ಏಜೆನ್ಸಿಯವರಿಗೆ ಕಮಿಷನ್ ಕೊಟ್ಟು ಹತ್ತಾರು ಲಕ್ಷ ಹಣವನ್ನು ಮುಂಡಾಮೋಚಿದ ಈ ಬಸವಣ್ಣನಿಗೆ ಗೀತಾ ಏಜೆನ್ಸಿಯವರು ಒಂದು ಕಾರ್ ಅನ್ನು ಸಹ ಗಿಫ್ಟ್ ಆಗಿ ಕೊಟ್ಟಿರುವುದು ಗುಟ್ಟೇನಲ್ಲ!



ಗ್ರಾ.ಪಂ ಅಧ್ಯಕ್ಷ ಆರ್.ಮಲ್ಲೇಶ್

ಮಾಂಬಳ್ಳಿ ಗ್ರಾಮ ಪಂಚಾಯತಿಯಲ್ಲಾಗಿರುವ ಸುಮಾರು 89 ಲಕ್ಷದ 36 ಸಾವಿರದ ಹಗರಣವನ್ನು ಪಕ್ಕಾ ದಾಖಲೆಗಳ ಸಹಿತ ಪತ್ತೆಹಚ್ಚಿದ ಜಿಲ್ಲಾ ಪಂಚಾಯ್ತಿ ಸಿಇಓ ಆಗಿರುವ ದಕ್ಷ ಅಧಿಕಾರಿ ಸುಂದರ್‌ನಾಯಕ್ ರಾಜಕಾರಣಿಗಳ ಯಾವ ಮುಲಾಜಿಗೂ ಸೊಪ್ಪು ಹಾಕದೆ ಮಾಂಬಳ್ಳಿ ಗ್ರಾಮ ಪಂಚಾಯ್ತಿನ ಕಾರ್ಯದರ್ಶಿ ಕೆಸ್ತೂರು ಬಸವಣ್ಣ ಹಾಗೂ ಮಾಜಿ ಅಧ್ಯಕ್ಷ ಆರ್. ಮಲ್ಲೇಶ್‌ರ ಮೇಲೆ ಐಪಿಸಿ ಸೆಕ್ಷನ್ 420,468/34 IPC ರಡಿಯಲ್ಲಿ ಕ್ರಿಮಿನಲ್ ಕೇಸ್ ದಾಖಲಿಸಿದ್ದಾರೆ. ಇದರಿಂದ ತಡಬಡಿಸಿಹೋದ ಈ ಕಳ್ಳಮಳ್ಳ ಜೋಡಿ ಓಡೋಡಿ ಬಂದು ತನ್ನ ಗುರು ಮಾಜಿ ಶಾಸಕ ಎಸ್. ಜಯಣ್ಣನ ಕಾಲಿಡಿದಿದ್ದಾರೆ. ಈತ ಸಂಸದ ಆರ್. ಧ್ರುವನಾರಾಯಣ್‌ರ ಮೂಲಕ ತನ್ನಿಬ್ಬರು ಶಿಷ್ಯರನ್ನು ಪೊಲೀಸರು ಮುಟ್ಟದ ಹಾಗೆ ಮಾಡಿಬಿಟ್ಟ. ಕೇಸ್ ದಾಖಲಿಸಿದ್ದೆ ತಡ ಕಾಯದರ್ಶಿ ಹುದ್ದೆಯಿಂದ ಅಮಾನತಾಗಿರುವ ಬಸವಣ್ಣ ನರಸೀಪುರದ ಮನೆಯಲ್ಲೇ ಕುಳಿತಿದ್ದರೆ ಚೀಟಿಂಗ್ ಕೇಸ್ ಜಡಿಸಿಕೊಂಡಿದ್ದರು. ಯಾರ ಭಯವು ಇಲ್ಲದೆ ಅಧ್ಯಕ್ಷ ಆರ್. ಮಲ್ಲೇಶ್ ಮಾತ್ರ ಪೊಲೀಸರಿಗೆ ತನ್ನ ಬಡ್ಡಿ ದಂಧೆಯ ಎಂಜಲು ತಿನ್ನಿಸಿ ಆರಾಮವಾಗಿ ಓಡಾಡಿಕೊಂಡಿದ್ದಾನೆ. ಇಂತಹ ಖದೀಮರಿಗೆ ರಕ್ಷಣೆ ನೀಡುವ ಸಂಸದ ಧ್ರುವನಾರಾಯಣಗೆ ಬುದ್ಧಿ ಬರುವುದು ಯಾವಾಗ?

ಬಹುಜನ ಸಮಾಜ ಪಕ್ಷದವರು ಈ ಅಕ್ರಮಗಳ ವಿರುದ್ಧ ಈಗ ಹೋರಾಟ ನಡೆಸುತ್ತಿದ್ದಾರೆ. ಗ್ರಾಮೀಣಾಭಿವೃದ್ಧಿ ಸಚಿವ ಜಗದೀಶ ಶೆಟ್ಟರ್ ಕೊಂಚ ಇತ್ತ ಗಮನ ಹರಿಸಲಿ

• ಚಿಕ್ಕಮಾಳಿಗೆ

ದಂಡನಾಯಕ ಸಂಗೊಳ್ಳಿ ರಾಯಣ್ಣ

2

ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಆಕೆಯಂತೆ ದೇಶದ ಹಲವಾರು ರಾಜ ಹಾಗೂ ಪಾಳೆಗಾರಿ ಮನೆತನದವರು ಬ್ರಿಟಿಷರ ವಿರುದ್ಧ ಹೋರಾಡಿದ್ದರಲ್ಲಿ ಪ್ರಧಾನವಾಗಿ ಇದ್ದದ್ದು ತಮ್ಮ ರಾಜಸತ್ತೆಯನ್ನು ಉಳಿಸಿಕೊಳ್ಳುವ ಉದ್ದೇಶವೇ. ಹೀಗಾಗಿ ಅವರ ದೇಶಪ್ರೇಮ ಪರೋಕ್ಷವಾದದ್ದು. 1857ಕ್ಕೆ ಮುಂಚೆ ಹೋರಾಟದ ಕಣದಲ್ಲಿದ್ದ ಕಿತ್ತೂರು ಚೆನ್ನಮ್ಮ, ಲಕ್ಷ್ಮಿಬಾಯಿಯಂಥ ಹಲವರು ರಾಜಮನೆತನದಿಂದ ಬಂದರೂ ಬ್ರಿಟಿಷರು ಮುಂದಿಟ್ಟ ಅವಮಾನಕಾರಿ ರಾಜಿ ಒಪ್ಪಂದಗಳಿಗೆ ಬಲಿಯಾಗದೆ ವೀರೋಚಿತವಾಗಿ ಹೋರಾಡಿ ಪ್ರಾಣಬಿಟ್ಟರು. ಆದರೆ 1857ರ ಸ್ವಾತಂತ್ರ್ಯ ಸಂಗ್ರಾಮದಿಂದ ಪಾಠ ಕಲಿತ ಬ್ರಿಟಿಷರು ತಂದ ಮಾರ್ಪಾಡುಗಳಿಂದ ರಾಜರುಗಳ ಸುಖ ಸೌಕರ್ಯಗಳನ್ನು ಖಾತರಿಗೊಳಿಸಲಾಯಿತು. ಇದರ ನಂತರ ಬಹುಪಾಲು ರಾಜರುಗಳು ಹೋರಾಟದ ಕಣಕ್ಕೆ ಬರಲಿಲ್ಲ, ಮಾತ್ರವಲ್ಲ, ಈ ಸೌಕರ್ಯಗಳನ್ನು ಕಾಪಾಡಿಕೊಳ್ಳಲು ಬಹುಪಾಲು ರಾಜರು ತಮ್ಮ ಜನಕ್ಕೆ ದ್ರೋಹ ಬಗೆದು ಬ್ರಿಟಿಷ್ ಸಾರೋಟಿನ ಕುದುರೆಗಳಾಗಿ ಬಿಟ್ಟರು. ಅವರ ಜೊತೆಗೆ ಬ್ರಿಟಿಷ್ ಸಂಸ್ಥಾನ ಇಲ್ಲಿ ನೆಲೆ ನಿಂತುಕೊಳ್ಳಲು ನೆಲೆ ಮತ್ತು ನೆರವು ಕೊಟ್ಟದ್ದು ಗ್ರಾಮ ಮಟ್ಟದಲ್ಲಿದ್ದ ಭೂಮಾಲೀಕ, ಬಡ್ಡಿ ವ್ಯಾಪಾರಿ ದೊರೆಗಳು.

ಸಂಗೊಳ್ಳಿ ರಾಯಣ್ಣ ಕಿತ್ತೂರು ಸಂಸ್ಥಾನದಲ್ಲಿ ಸೇನಾನಾಯಕನಾಗಿದ್ದರೂ ಆತ ಚೆನ್ನಮ್ಮಳ ಬಂಧನದ ನಂತರವೂ ಹೋರಾಟವನ್ನು ಮುಂದುವರೆಸಿದ್ದು ಕೇವಲ ಅರಸೊತ್ತಿಗೆಯ ಪುನರ್ ಸ್ಥಾಪನೆಗೆ ಮಾತ್ರವಲ್ಲ, ಬದಲಿಗೆ ಜನರನ್ನು ಲೂಟಿ ಮಾಡುತ್ತಿದ್ದ ಸಾಹುಕಾರಶಾಹಿ ಮತ್ತು ಭೂಮಾಲೀಕ ವ್ಯವಸ್ಥೆ ಎರಡರ ವಿರುದ್ಧವೂ ಆತನ ಹೋರಾಟ ಮುಂದುವರೆಯಿತು. ಇದಕ್ಕಾಗಿ ಆತ ಆಯ್ದುಕೊಂಡಿದ್ದು ಗೆರಿಲ್ಲಾ ಮಾದರಿ ಹೋರಾಟ. 1830ರ ಪ್ರಾರಂಭದಲ್ಲಿ ಕೇವಲ ನೂರು ಜನರಿದ್ದ ಆತನ ಸೈನ್ಯ ಕೆಲವೇ ತಿಂಗಳಲ್ಲಿ 5 ಸಾವಿರಕ್ಕೆ ಮುಟ್ಟಿತು. ಆತನ ಸೈನ್ಯ ನಿತ್ಯ ಶೋಷಕರನ್ನು ದಂಡಿಸುತ್ತಿದ್ದರಿಂದ ಅದು ಬಹಳ ಬೇಗನೇ ಜನಸೈನ್ಯದ ಸ್ವರೂಪವನ್ನು ಮತ್ತು ಜನಸಂಗ್ರಾಮದ ಚಹರೆಯನ್ನು ಪಡೆದುಕೊಂಡಿತು.

ಹೀಗೆ ಸಂಗೊಳ್ಳಿ ರಾಯಣ್ಣ ನಿಜಕ್ಕೂ ತುಳಿತಕ್ಕೊಳಗಾದ ಜನರ ನಾಯಕ. ಜನಸೈನ್ಯದ ಮಹಾನ್ ದಂಡನಾಯಕ. ಆತನಲ್ಲಿ ಇದ್ದದ್ದು ರಾಜನಿಷ್ಠೆಯಲ್ಲ, ಜನನಿಷ್ಠೆ. ಆತ ಹೋರಾಟದಲ್ಲಿ ತ್ಯಾಗ-ಬಲಿದಾನ ಮಾಡಿದ್ದು ನಿಜ. ಅದು ಯಾವುದೋ ರಾಜನ ಸೇನೆಯ ಸೈನಿಕನಾಗಿಯೋ, ದಂಡನಾಯಕನಾಗಿಯೋ ಅಲ್ಲ. ಆ ಬಲಿದಾನದ ಹಿಂದೆ ಇದ್ದದ್ದು ರಾಜನಿಷ್ಠೆಯಲ್ಲ.

ರಾಯಣ್ಣನದ್ದು ಜನಸೈನ್ಯವನ್ನು ಕಟ್ಟಲು ಜನರಿಗಾಗಿ ಮಾಡಿದ ಪ್ರಜ್ಞಾಪೂರ್ವಕವಾದ ತ್ಯಾಗ ಬಲಿದಾನ. ಆದ್ದರಿಂದಲೇ ನೇರ ಯುದ್ಧದಿಂದ ಸಂಗೊಳ್ಳಿ ರಾಯಣ್ಣನನ್ನು ಹಿಡಿಯಲು ಸಾಧ್ಯವೇ ಇಲ್ಲ ಎಂದು ಅರ್ಥಮಾಡಿಕೊಂಡ ಬ್ರಿಟಿಷರು ತಮ್ಮ ಫಲಾನುಭವಿಗಳಾದ ಭೂಮಾಲಿಕ ವರ್ಗದೊಂದಿಗೆ ಕುತಂತ್ರ ನಡೆಸಿದರು. ಕೃಷ್ಣರಾವ್ ಎಂಬ ಒಬ್ಬ ಭೂಮಾಲೀಕನನ್ನು ಆತನ ಸೇನೆಗೆ ಸೇರಿಸಿದರು. ಪರಿಣಾಮ ದ್ರೋಹ. ರಾಯಣ್ಣನ ಬಂಧನ. ಮರಣದಂಡನೆ. ರಾಯಣ್ಣನನ್ನು ಬಂಧಿಸಲು ಸಹಾಯ ಮಾಡಿದ್ದಕ್ಕೆ ಕೃಷ್ಣ ರಾವ್‌ಗೆ ನಗದು ಬಹುಮಾನ ನೀಡಲಾಯಿತು. ರೈತರ ಸಂಗ್ರಾಮಕ್ಕೆ ದ್ರೋಹ ಬಗೆದ ಭೂಮಾಲಿಕರಿಗೂ ಪ್ರಶಸ್ತಿಗಳನ್ನು ನೀಡಲಾಯಿತು. ಅವರೆಲ್ಲರಿಗೆ ಮುನ್ನೂರು ರೂಪಾಯಿಗಳ ನಗದು ಸೇರಿದಂತೆ ಇಡೀ ಹಳ್ಳಿಗಳನ್ನೇ ಇನಾಮಾಗಿ ನೀಡಿತು ಬ್ರಿಟಿಷ್ ಸರ್ಕಾರ. ಲಿಂಗಣ್ಣ ಗೌಡನಿಗೆ ಕಿತ್ತೂರು ಸಮೀಪದ ಕಲೊಲಿ ಗ್ರಾಮ ಸಿಕ್ಕಿದರೆ, ಯೆಂಕನ ಗೌಡನಿಗೆ ಧಾರವಾಡದ ಹತ್ತಿರದ ಧೋಂ ಗ್ರಾಮ ದಕ್ಕಿತು. ಆದರೆ ಕುರುಬ, ಬೇಡ, ಜೈನ, ಲಿಂಗಾಯತ, ಸಿದ್ಧಿ, ಮುಸ್ಲಿಂ, ಪಂಚಮಸಾಲಿ ಸೇರಿದಂತೆ ವಿವಿಧ ಜಾತಿಗಳಿಂದ ಬಂದಿದ್ದ ರಾಯಣ್ಣ ಮತ್ತು ಸಂಗಡಿಗರಿಗೆ ಸಿಕ್ಕಿದ್ದು ಮರಣದಂಡನೆ!

ಇಂಥಾ ದ್ರೋಹದ ಪ್ರತಿನಿಧಿಯಂತಿರುವ ಯಡಿಯೂರಪ್ಪನವರು ಸಂಗೊಳ್ಳಿ ರಾಯಣ್ಣನಲ್ಲಿ ಕಾಣುತ್ತಿರುವುದು ಕೇವಲ ರಾಜಾದೇಶವನ್ನು ಪಾಲಿಸುವ ನಿಷ್ಠ ಭಂಟ ಸೈನಿಕನನ್ನು. ಹೀಗಾಗಿಯೇ ತಮ್ಮ ಅತ್ಯಂತ ಜನವಿರೋಧಿ ಆಡಳಿತದಲ್ಲಿ ಜನರನ್ನು ಹತ್ತಿಕ್ಕುವಲ್ಲಿ ಅತಿಕ್ರೂರ ಪಾತ್ರ ವಹಿಸುತ್ತಿರುವ ರಾಜನಿಷ್ಠ ರಾಜಭಂಟ ಪೊಲೀಸ್ ಅಧಿಕಾರಿಗಳಿಗೆ ಜನನಿಷ್ಠ ಜನನಾಯಕ ಸಂಗೊಳ್ಳಿ ರಾಯಣ್ಣನ ಹೆಸರಲ್ಲಿ ಪ್ರಶಸ್ತಿ ನೀಡುವ ಮೂಲಕ ರಾಯಣ್ಣನ ಪರಂಪರೆಗೇ ಅತ್ಯಂತ ಅವಮಾನ ಮಾಡುತ್ತಿದ್ದಾರೆ. ಸಂಗೊಳ್ಳಿ ರಾಯಣ್ಣನನ್ನು, ಆತನ ನೆನಪನ್ನು ಮತ್ತೊಮ್ಮೆ ಗಲ್ಲಿಗೆ ಏರಿಸುತ್ತಿದ್ದಾರೆ.

ಧೋಂಗಿ ದೈವಭಕ್ತರಿಂದ ಉಳಿಗಾಲಿಲ್ಲ ದ್ವಡಪ್ಪ!

ಬಾಬರಿ ಮಸೀದಿ ತೀರ್ಪಿನ ವಿಷಯದಲ್ಲಿ ಟಿವಿಗಳು ...ಟ್ಟು ಹಾಕಿದ್ದ ಬೆದರಿಕೆಯನ್ನು ಗಮನಿಸಿದ್ದ ಜುಮ್ಮಿ, "ಲೇ ಉಗ್ರಿ, ಅವುಳ್ಯಾವಳೊ ಟಿವಿಲಿ ಕಾಣಿಸಿಗಂಡು, ...ಕ್ಕೆ ಏನಾಯ್ತದೊ ಏನೊ ಅಂತ ಹೇಳಿತಿದ್ಲಲ್ಲ ...ನ್ಯಾಕಂಗದ್ಲು."

"ಅವುಳು ಸುದ್ದಿ ಓದೋಳು ಕಣೇ, ಯಾವೊ ...ನ್ನಾಡಿಗಳು ಬರಕೊಟ್ಟಿರತವೆ, ಅದ ಅವುಳು ಓತ್ತಳೆ ...ದ ಅವುಳದೇನು ತೆಪ್ಪು."

"ಓಹೊಹೊ ಏನೋ ಪ್ರಳಯಾಯ್ತದೆ ...ಂಗಾಡಿದ್ರಪ್ಪ" ಎಂದ ಸೀರ.

...ಯ ಉ ಸೀ ಮೆ

ಕಪ್ಪೆಪುರಾಣ

▶ ಬಿ. ಚಂದ್ರೇಗೌಡ

"ಯಾವುದ್ನೆ ಆಗ್ಲಿ ಸುದ್ದಿ ಮಾಡದೇ ಬಜೆಪಿಗಳ ...ಟ್ಟುಗುಣ ಕಣೊ."

"ಏನೆ ಆಗ್ಲಿ, ಹಿಂಗ್ಯಲ್ಲ ಜನನ ಹೆದರಸಬಾರ್ದು ...ತ್ರ" ಎಂದ ಕಾಳಮಾವ.

"ಹೆದರಸಬಾರ್ದು ಅಂತ ನೀನಂತಿ, ಹೆದರಿಸಿಗಂಡೇ ...ಹಾಕಕ್ಕೆ ತೀರ್ಮಾನ ಮಾಡಿರೋರು ಸುಮ್ಮನಿದ್ದರೆ ...ವ."

"ಮಸೀದಿ ಇದ್ದ ಜಾಗದಲ್ಲಿ ರಾಂ ಮಂದ್ರ ಕಟ್ಟತರೇನ್ಲ"

"ಕಟ್ಟಕ್ಕೆ ಬರದಿಲ್ಲ."

"ಅದು ರಾಮ ಹುಟ್ಟಿರೊ ಜಾಗವಂತಲ್ಲಾ" ಎಂದ ...

"ರಾಮ ಹುಟ್ಟಿರದು ದಸರಥನ ಅರಮನೇಲಿ ಕಣೊ, ...ದ ಮ್ಯಾಲೆ ಅದೂ ಊರುಮುಂದೆ ಹುಟ್ಟಕ್ಯೋದನೆ."

"ಮತ್ತೆ ಬಜೆಪಿಗಳು ಅದು ರಾಮುಟ್ಟಿದ ಜಾಗ ...ಕರಲ್ಲಾ."

"ಅವುರಂತರೆ ಅಂತ ಕೇಳ್ತಿಯಾ, ಅವುನೆಸರಿಂದ್ಲೆ ...ಕಾರಣ ಮಾಡಬೇಕು ಅಂತ ತೀರ್ಮಾನ ಮಾಡಿದ್ರಲ್ಲ ಅಂಗಂತರೆ."

"ಅಂಗರೆ ರಾಮ ಹುಟ್ಟಿದ ಜಾಗಲ್ಲ ಅದು."

"ಹುಟ್ಟಿದ ಜಾಗಲ್ಲ, ಅವುನು ಹುಟ್ಟಿರೊ ಊರು ...ತರೆ, ಆ ಜಾಗವ ಯಾವನೊ ಸಾಬ ಆಳತಾಯಿದ್ದಾಗ ...ನಗುಡಿ ಕೆಡವಿ ಅದೇ ಕಂಬದ ಮ್ಯಾಲೆ ಮಸೀದಿ ...ಸಿ ಬಾಬರಿ ಮಸೀದಿ ಅಂತ ಹೆಸುರು ಮಡಗಿದನಂತೆ. ...ತ್ತಿಂದ ಮಸೀದಿ ಮಗ್ಲಲ್ಲಿ ಹಿಂದೂ ಜನ ಪೂಜೆ ...ಡಿದ್ರೆ ಸಾಬರು ಮಸೀದಿ ವಳಗೆ ನಮಾಜ್ ...ಡತಿದ್ರುಂತೆ. ಕ್ರಮೇಣ ಹೊಂದಿಕಂಡು ಜ್ವತೆಲಿ ...ಗಿದರಂತೆ. ಅವತ್ತು ಹತ್ತಿಗಂಡ ಜಗಳ ಇನ್ನು ನಿಂತಿಲ್ಲ ...ಡು."

"ಇಂಗ್ಲಿಸ್‌ನೋರು ಮಾಡಿರೊ ಕ್ಯಲಸ ನೋಡು. ಆ ...ಮಕ್ಕಳು ದೇಸಬುಟ್ಟೋದ್ರು ಮಾಡಿರೊ ಅನಾಹುತ ...ಭವುಸಂಗಾಗ್ಯದೆ ನೋಡು."

ಕನ್ನಂಬಾಡಿ ನೀರಂಚಿದೋರು ಅವುರೆಯಂತಲ್ಲಾ" ಎಂದ ಸೀರ.

"ಊ ಕಣೊ, ಆಗ ತಮುಳನಾಡಿಂದ ಬತ್ತುವ ಹಡಗಿನಲ್ಲಿ ತುಂಬಿಕಂಡೋಗನ ಅಂತ ಜಾಸ್ತಿ ನೀರುಬುಟ್ರಂತೆ, ಅವುರು ಅಚ್ಚುಕಟ್ಟು ಜಾಗವ ಜಾಸ್ತಿ ಮಾಡಿಕಂಡ್ರು. ಆಗ ಸುಮ್ಮನಿದ್ದ ನಾವು ಈಗ ಕೂಗ್ಯಾಡಿದ್ರೆ ಏನು ಬಂದಂಗಾಯ್ತು. ಅಂಗೆ ಆ ಬ್ಯಳ್ಳೆಕಾರ ನನ್ನ ಮಕ್ಕಳು ಮಾಡಿರೊ ಕ್ಯಲಸ್ಯಲ್ಲ ಅವುರಿಗೆ ಅನುಕೂಲವಾಗೊ ಅಂತವೆಯ, ಅವೇ ಈಗ ನಮಿಗೆ ಹಕನಾಯಿಸಿಗಂಡವೆ."

"ಅಂಗರೀಗ ಮಸೀದಿ ಜಾಗದಲ್ಲಿ ರಾಮನಗುಡಿ ಕಟ್ಟಿಕ್ಯಾಗದಿಲ್ಲ ಅನ್ನು."

"ಅದ್ಯಂಗಾದತು ಮಾವ, ಈಗ ನೀನು ಯಾವನ್ದೊ ಜಮೀನ ಉಳುಮೆ ಮಾಡತಾಯಿದ್ದಿ, ನಿನ್ನ ಅನುಭೋಗದ ಕಾಲ ನೋಡಿದ್ರೆ, ಯಾವ ವಾರಸುದಾರನಿಗೂ ಬಿಟ್ಟುಕೊಡಂಗಿಲ್ಲ, ಅಂಗಾಗ್ಯದೀಗ."

"ಅಂಗರೆ ಮಸೀದಿಯ ಯಾವಾಗ ಕಟ್ಟಿದ್ರೂ."

"ಆಗ್ಲೆ ಹೆಚ್ಚು ಕಮ್ಮಿ ಐನೂರು ವರ್ಸಾಯ್ತಂತೆ."

"ಅಯ್ಯೋ ಅಯ್ಯೋ ವಸೀ ವರುಸವೆ ಆಗ್ಯದೆ ಬುಡು."

"ಅದ್ಕೆ ಅದರ ಮ್ಯಾಲೆ ಸಾಬರಿಗಿರೊವಷ್ಟು ಹಕ್ಕು ಬಜೆಪಿಗಿಲವಂತೆ."

"ಅಂದರೆ ಇಟಗೆ ಕತಿಯೇನಪ್ಪ."

"ಇಟಗೆದೇನುಯಿಲ್ಲ, ಅದರ ನ್ಯವುದಲ್ಲಿ ಕಾಸು ಕಲೆಕ್ಟ್ ಮಾಡಿ ಖರ್ಚು ಮಾಡಿದ್ದೇ ಬತ್ತು."

"ಅಂಗರೆ ರಾಮನೆಸರಲ್ಲಿ ಭಾಳ ಜನ ಬದುಕಿಬುಟ್ರು ಅನ್ನು."

"ಊ ಕಣಮಾವ ವಟ್ಟಿಗೆ ಇಟ್ಟಿಲ್ದೆಯಿದ್ದವ್ಯಲ್ಲ ಇಟಗೆ ದುಡ್ಡಲ್ಲೇ ಬದಿಕ್ಕಂಡವಂತೆ. ಇನ್ನು ರಾಂಮಂದ್ರ ಕಟ್ಟದ್ರಿಂದ ಸುಮಾರು ಜನಕೆ ಕ್ಯಲಸ ಸಿಗತದೆ, ಅಂಗಾಗಿ ಇವುರೇನು ಸದ್ದಿಕೆ ಸುಮ್ಮನಿರದಿಲ್ಲ."

"ಇನ್ನ ಜನ ನಂಬದಿಲ್ಲ ಇವುರ್ನ" ಎಂದ ಸೀರ.

"ಅದೇನವುರು ತಲೆ ಕೆಡಿಸಿಗಂಡಿಲ್ಲ ಕಣಮಾವ, ನೋಡು ಎಡೂರಪ್ಪ ಬೆಂಗಳೂರಲ್ಲಿ ಜಮೀನ ತಗಂಡು ಮಕ್ಕಳೆಸರಿಗೆ ಬರದವ್ರುನಂತೆ. ಇಂತ ಬಂಡಗೆಟ್ಟೋರು ಯಾತಕ್ಕೆ ತಾನೆ ಹೆದರ್ಯರೂ."

"ಅವುನಿಗೇನು ಕಡಿಮ್ಯಾಗಿತ್ತೂ, ಅದ್ಯಾಕಂಗೆ ಮಾಡಿದಾ."

"ಇಲ್ಲಿ ಕಡಮೆ ಜಾಸ್ತಿ ಅನ್ನೊ ಮಾತು ಬರದಿಲ್ಲ ಕಣಮಾವ, ಕಲ್ರು ಗಾತುಕುರು ಏನು ಸಿಕ್ಕಿದ್ರೂ ತಿಂತರಲ್ಲಾ ಅಂಗೆ, ಈ ಎಡೂರಪ್ಪ. ಶಿಕಾರಿಪುರದ ಸುತ್ತ ಕೊಳತಾಯಿದ್ದನಂತೆ. ಶಿವಮೊಗ್ಗದ ಸುತ್ತನೂ ಕೊಳ್ಳತಯಿದ್ದನಂತೆ. ಈಗ ಬೆಂಗಳೂರಿಗೂ ಕೈಹಾಕ್ಯವುನೆ

ಮನುಸ ಕೆಡತಿನಿ ಅಂತ ಇಷ್ಟೂ ಕೆಟ್ಟಿರೆ ಅಂತ" ಎಂದ ಉಗ್ರಿ ಆಗ ಪ್ರತ್ಯಕ್ಷನಾದ ವಾಟಿಸ್ನೆ.

"ಯಾರೊ ಉಗ್ರಿ ಕೆಟ್ಟು ಕ್ಯರ ಹಿಡದೋರು" ಎಂದ.

"ಅವುನು ಹುಟ್ಟತನೆ ಕೆಟ್ಟಿರೋನು ಕಣೊ, ಇವತ್ತೇನು ವಸದಾಗಿ ಕೆಡಬೇಕೆ, ಮಗಾ ಸಾಬಸ್ತನಂಗೆ ಗುಂಡೂರಾಯನ ಮಗನ ಮ್ಯಾಲೆ ಜಗಳಕೋಯಿತ್ತಿದ್ದ ಬ್ಯಾಂಡಿಕೂಟ್ ಫೆಲೊ.

"ಕಟ್ಟಾ ಎಡೂರಪ್ಪ ಇಬ್ರೂ ಸೇರಿ ಬೆಂಗಳೂರಲ್ಲಿ ಸೈಟು ತಗಂಡು ಮಕ್ಕಳಿಗಂಚಿದ್ದರಂತೆ ಗೊತ್ತೇನೊ."

"ಅದು ಹಳೆ ವ್ಯಾಟ್ರು ಕಣೊ. ಎಡೂರಪ್ಪ ಉಪಮುಖ್ಯಮಂತ್ರಿಯಾಗಿದ್ದಾಗ್ಲೆ ಮಾಡಿರೊ ಕ್ಯಲಸ ಅದು, ಈಗ ಈಚೆಗೆ ಬತ್ತು ಅಷ್ಟೆ."

"ಅಂಗರೆ ಈ ಸರಕಾರದಲ್ಲಿ ಯಾರೂ ವಳ್ಳೆ ಕ್ಯಲಸ ಮಾಡ್ತಯಿಲವೇನ್ಲ."

"ಇಲ್ಲ ದ್ವಡಪ್ಪ, ಶೋಬ ಕರಂದ್ಲಾಜೆ ಇನ್ನು ಶುರು ಮಾಡಿಲ್ಲ ಮಾಡಿದ್ರೆ ಅವುಳೊಬ್ಬಳೆ ಮಾಡಬೇಕು ಇನ್ನಾಲ್ರು ಹುಟ್ಟು ಕಳ್ರು."

"ಥೂ ಥೂ ಇದ್ಯಾವ ಸೀಮೆ ಸರಕಾರನ್ಲ."

"ಇಡೀ ದೇಸದಲ್ಲೇ ಇಲ್ಲ ದ್ವಡಪ್ಪ ಅಂತ ಸರಕಾರ ಇದು. ಆಡಳತ ಮಾಡಕ್ಕೆ ಬರದಿಲ್ಲ, ಸರಕಾರ ನ್ಯಡಸಕ್ಕೂ ಬರದಿಲ್ಲ, ದುಡ್ಡು ಹ್ವಡಿಯದ್ರಲ್ಲಿ ಮಾತ್ರ ನಿಸ್ಸೀಮರು."

"ಯಾಕೆ ನಿಸೀಮರು ಗೊತೇನೊ. ಬಜೆಪಿ ಸರ್ಕಾರದಲಿ



ಇರೋರ್ಯಲ್ಲ ವ್ಯಾಪಾರಸ್ತರು. ವ್ಯಾಪಾರಸ್ತ ಯಾವಾಗ್ಲು ಲಾಭ ನಷ್ಟನೆ ಲ್ಯಕ್ಕ ಹಾಕದು. ಅದ್ಕೆ ಅಲವೆ ಅವುರು ಮಂತ್ರಿಗಳಾಗಕ್ಕೆ ಮಾಡಬಾರದ್ನೆ ಮಾಡ್ತರೆ, ಮಂತ್ರಿಗಿರಿಯಿಂದ ತಗದ್ರೆ ಅಳತರೆ, ರಾಜೀನಾಮೆ ಕೊಡ್ತರೆ, ಗೆದ್ದಿರದೇ ಗುಂಜಕ್ಕೆ ಅಂತ ತಿಳಕಳದಾದ್ರೆ ಅದೇನು ಜನಸೇವೆ ಮಾಡ್ಯರೂ."

"ಜನಗಳ ಸೇವೆ ಮಾಡಬೇಕು ಅನ್ನದವುರಿಗೇನು ಗೊತ್ತೊ, ಗೊತ್ತಿದ್ರೆ ಈಟೊತ್ತಿಗೆ ನೆರೆ ಹಾವುಳಿಯಿಂದ ಬೀದಿಲಿ ಬಿದ್ದೋರಿಗೆ ಮನೆ ಕಟ್ಟಿಸಿ ಕೊಡ್ತಿದ್ರು."

"ಇನ್ನು ಕಟ್ಟಿಸಿಕೊಟ್ಟಿಲ್ಲವೇನ್ಲ."

"ಇಲ್ಲ ದ್ವಡಪ್ಪ ಇವತ್ತಿನವರಿಗೂ ಬರೀ ಜಂಕ್‌ಶೀಟ್ ಶೆಡ್ಡಲ್ಲೇ ಅವುರೆ. ಪಾಪ ಅವುರ ಕೇಳೋರೇ ಇಲವಂತೆ."

"ಆ ಬಡವರಗೋಳು ಈ ಸೂಳೆ ಮಕ್ಕಳಿಗೆ ತಟ್ಟದೇಯಿದ್ದತೆ."

"ಅದು ನಿನ್ನ ಕಾಲದ ಲ್ಯಕ್ಕಾಚಾರ ಈಗ ಗೋಳು ಕರ್ಮ ಪಾಪಪುಣ್ಯ ಯಾವುದೂ ಇಲ್ಲ ದ್ವಡಪ್ಪ" ಎಂದು ವಾಟಿಸ್ನೆ ಹೇಳುವಾಗ ಚೆಡ್ಡಿ ಮಂಜ ಕಾಣಿಸಿಕೊಂಡ ಕೂಡಲೇ

"ಲೇ ಚಡ್ಡಿಮಂಜ ಬಾರ್ಲ ಇಲ್ಲಿ" ಎಂದ, ಅವನು ಬಂದಾಗ.

"ನೀನು ಆರೆಸೆಸ್ ಅಲ್ಲ ಆದ್ರು ಯಾಕ್ಲ ಚೆಡ್ಡಿ ಮಂಜ ಅಂತರೆ."

"ಅದ ನಾನೇಳ್ತಿನಿ ಕಣೊ ವಾಟಿಸ್ನೆ, ಈ ಚೆಡ್ಡಿ ಮಂಜ ಯಾವೂರಿಗೇ ಹೋಗ್ಲಿ ಚೆಡ್ಡಿಲೆ ಹೋಯ್ತನೆ, ಬೆಂಗಳೂರಿಗೆ ಹೋದ್ರು ಚೆಡ್ಡಿಲೆ ಇರತನೆ, ಅದ್ಕೆ ಆ ಹೆಸುರು ಬಂದದೆ" ಎಂದ ಉಗ್ರಿ.

"ಓಹೋ ಹಾಕೊ ವೇಶದಿಂದ ಸಂಪಾದನೆ ಮಾಡಿರೊ ಹೆಸರದು. ಇರ್ಲಿ, ಅಲ್ಲಾ ಕಂಡ್ಯ, ಚೆಡ್ಡಿ ಮಂಜ ಗಣಪತಿ ತಂದು ಕೂರಿಸಿ ಆ ಕ್ಯಟ್ಟ ಕ್ಯಟ್ಟ ಸಿನುಮಾ ಹಾಡನ್ಯಲ್ಲ ಹಾಕ್ತರಲ್ಲಾ, ನಮ್ಮಂತವುರ ಕತೆ ಏನಾಗಬೇಕು. ಗಣಪತಿ ದಯದಿಂದ ಸದ್ಯ ದಿನಕೆ ಯರಡುಗಂಟೆ ಕರಂಟು ಬರೋವತ್ತಿಗೆ ಸರಿ.. ಇಲ್ಲ ಅಂದಿದ್ರೆ ನಮ್ಮ ಕತಿಯೇನೊ ಮಂಜ" ಎಂದ ವಾಟಿಸ್ನೆ.

"ವಳ್ಳೆ ಕ್ಯಾಸೆಟ್ಟಿಲವಲ್ಲ ಏಮಾಡ್ಲಿ" ಎಂದ ಚೆಡ್ಡಿ ಮಂಜ.

"ಏ ಪೂಲಿಷ್ ಫೆಲೋ ಯ್ಯಂತ್ಯಂತ ಕ್ಯಾಸೆಟ್ ಬಂದವೆ ಗೊತ್ತೆನೊ ಪಿ.ಬಿ. ಶ್ರೀನಿವಾಸ್, ಎಸ್. ಜಾನಕಿ, ಪಿ. ಸುಶೀಲ, ಜೇಸುದಾಸ್ ನಮ್ಮ ಅಣ್ಣಾವ್ರು, ಹಾಡಿರೊ ಹಾಡ್ಯಲ್ಲ ಬಂದವೆ. ಅವು ಬ್ಯಾಡ ಅಂದ್ರೆ ಗುರುರಾಜಲು ನಾಯ್ಡು ಹರಿಕಥೆ ಹಾಕು, ನಮ್ಮ ದ್ವಡಪ್ಪ ಇಲ್ಲೇ ಕುಂತಗಂಡು ಕೇಳ್ತನೆ."

"ನೀನೇ ತಂದುಕೊಡು ಹಾಕ್ತಿನಿ."

"ಪರವಾಗಿಲ್ಲ ಕಂಡ್ಯ ನೀನುವೆ, ನಿಮಗೆ ಒಳ್ಳೆ ಅಭಿರುಚಿ ಕಲುಸಬೇಕಾದ್ರೆ ನಾವೇ ಖರ್ಚು ಮಾಡಬೇಕು. ಹೋಗ್ಲಿ ಗಣಪತಿ ಯಾವಾಗ ಬುಡ್ತಿರ್ಲ."

"ಐದನೇ ತಾರೀಕು ಬುಡ್ತಿವಿ. ತುಮಕೂರಿಂದ ಆರುಕೆಸ್ಟ್ರ ಬತ್ತದೆ."

"ಆರುಕೆಸ್ಟ್ರಕ್ಕೆ ಹಣ ಕೊಟ್ಟೊರ್ಯಾರು."

"ಅವುನ್ಯಾರೊ ಬೆಂಗಳೂರಿಂದ ಬಂದವುನೆ. ಮುಂದೆ ಜಿಲ್ಲಾ ಪಂಚಾತಿ ಯಲಕ್ಷನ್ನಿಗೆ ಈಗಿನಿಂದ್ಲೆ ದುಡ್ಡು ಖರ್ಚು ಮಾಡ್ತ ಅವುನೆ, ಅವುನು ಕೊಟ್ಟ."

"ಅಂಗಾದ್ರೆ ಐದನೇ ತಾರೀಕಿನವರಿಗೂ ನಮಿಗೆ ಹೊಸ ಸಿನಿಮಾ ಹಾಡಿನ ಶಿಕ್ಷೆ. ಅವುತ್ತು ಆರಕೆಸ್ಟ್ರಾದೊರ ಗದ್ಲ, ದ್ವಡಪ್ಪ ಈ ದೇಸದಲ್ಲಿ ಧೋಂಗಿ ದೈವಭಕ್ತರಿಂದ ನಮಗೆ ಉಳಿಗಾಲವಿಲ್ಲ ದ್ವಡಪ್ಪ, ನಾನು ಯಾವ ದೇಸಕಾರ ಹೋಯ್ತಿನಿ."

ಯಾಂಕೀ ಕೈಯಲ್ಲಿ ಸಿಕ್ಕರೆ....


ಏನು ಮಾಡಿದರೂ 'ಅದರಲ್ಲಿ ನಂಗೇನು ಉಂಟು?' ಎಂದು ಲಾಭಕ್ಕಾಗಿ ನಾಲಗೆ ಚಾಚುವ ...ಮೆರಿಕನ್; ಯಾವ ದೇಶಕ್ಕೆ ಹೋದರೂ ಅಲ್ಲಿ 'ಛೀ, ಇಲ್ಲಿ ಕ್ರಾಂತಿ? ನಾವು ಇಲ್ಲಿ ...ಹೂಡಿರುವ ಹಣಕ್ಕೆ ಏನಾಗಬೇಕು?' ಎಂದು ಕೇಳುವ ಅಂಕಲ್ ಸ್ಯಾಮ್; 'ಮಾಡೋದು ...ರಿ, ನೋಡೋಕೆ ಆದರ್ಶಮಯವಾಗಿರಲಿ' ಎಂದು ಕೊಂಕುನಗೆ ಬೀರುವ ಯಾಂಕೀ: ...ಂಥ ಕೋಮಲ ಕಾವ್ಯ ಕೊಟ್ಟರೂ ಅದನ್ನು ಕತ್ತರಿಸಿ, ಕೊಂಡಾಡಿ, ಡಾಕ್ಟರೇಟ್ ...ಡೆದು, ಕಾವ್ಯ ಇಲ್ಲದಂತೆ ಮಾಡುವ ಅಮೆರಿಕನ್. ಇದು ಎಲ್ಲರ ದೇಶದಂತೆ ...ಗಲು ಸಾಧ್ಯವೇ? ಅಂದರೆ, ಎಲ್ಲರ ದೇಶದಲ್ಲಿ ಪರಂಪರೆಯಿಂದ ಬಂದ ವಿಗ್ರಹ, ...ಲಕ್ಕೆ ಸಂಕೇತವಾದ ನದಿ, ಯಾವ ಲಾಭವನ್ನೂ ನೀಡದ ಕಲೆ ಇರಲು ಸಾಧ್ಯವಿದೆ. ...ಟಕ್ಕಾಗಿ ಆಟವಿರಲು ಸಾಧ್ಯವಿದೆ. ಅಮೆರಿಕದಲ್ಲಿ ಅದು ಕಷ್ಟ.

ನೀವು ಯೋಚಿಸಿದ್ದೀರಾ? ಫ್ರೆಂಚ್ ಓಪನ್, ಅಮೆರಿಕನ್ ಓಪನ್ ಇತ್ಯಾದಿಗಳಲ್ಲಿರುವ ...ಓಪನ್' ಯಾಕೆ? ಯಾಕೆಂದರೆ, ಒಮ್ಮೆ ವಿಲಾಸಿಗಳಿಗಾಗಿ ಇದ್ದ ಟೆನ್ನಿಸ್, ಖುಷಿಗಾಗಿ ...ದ್ದ ಟೆನ್ನಿಸ್ ವೃತ್ತಿವಂತರಿಗಾಗಿ ತೆರೆಯಲ್ಪಟ್ಟಿತು; ಇಷ್ಟು ಹಣ ಕೊಡುತ್ತೇವೆ, ಯಾರಾದರೂ ...ಡಬಹುದು. ಇಷ್ಟು ಜಾಹೀರಾತು, ಪ್ರಾಯೋಜಕರಿಗೆ ಇಷ್ಟು, ಟಿವಿಯಿಂದ ಇಂತಿಷ್ಟು ...ಲ್ಲಿ ಸೇರಿ ವ್ಯವಸ್ಥಾಪಕರಿಗೆ ಹಲವು ಕೋಟಿ, ಜಾಹೀರಾತು ನೀಡಿದ ನೈಕಿ ...ಡಾವಸ್ತುಗಳ ತಯಾರಕರಿಗೆ ಹಲವು ಕೋಟಿ, ಆಟಗಾರರಿಗೆ ಹಲವು ಲಕ್ಷ.... ಇಲ್ಲಿ ...ಟಗಾರ ಮದ್ದು ತಿಂದ, ಅಲ್ಲಿ ಆಟಗಾರ್ತಿ ಔಷಧಿ ಸೇವಿಸಿ ಆಡಿದಳು, ಇನ್ನೊಂದು ...ಡೆ ಕ್ರೀಡಾಪಟುವಿಗೆ ಇರಿಯಲಾಯಿತು, ಮತ್ತೊಂದು ಕಡೆ ವಿಷ ಹಾಕಿ ಸಾಯಿಸುವ ಪ್ರಯತ್ನ ...ಡೆಯಿತು. ಇದು ಹಣದ ಹಿಂದಿನ ವಿವಿಧ ಅಭಿವ್ಯಕ್ತಿಗಳು.



'ನೀವು ಅಣುಬಾಂಬ್ ಮಾಡಕೂಡದು'. 'ಯಾಕೆ? ನೀವು ಮಾಡ್ತಿದ್ದೀರಲ್ಲ?' 'ನಾವು ಮಾಡಬಹುದು. ನೀನು ಮಾಡಕೂಡದು.' 'ಯಾಕೆ ಹೇಳಿ ಅಂಕಲ್?' 'ನಾವು ಶ್ರೀಮಂತರು, ಏನಾದ್ರೂ ಮಾಡ್ತೀವಿ. ನಾವು ಸೂಪರ್ ಪವರ್. ಹೇಗಾದ್ರೂ ಇರ್ತೀವಿ, ನೀನು ಬಾಂಬ್ ಮಾಡಕೂಡದು. ಮರ ಕಡೀಕೂಡದು. ಹುಲಿ ಕೊಲ್ಲಕೂಡದು... ತಿಳೀತೆ? ಅರ್ಥವಾಯಿತೆ?' 'ಅರ್ಥವಾಯಿತು, ದಾರಿ ಹಿಡಿದುಕೊಂಡ್, ಮುಕಳಿ ಮುಚ್ಕಂಡು ಹೋಗ್ತೀರಾ?' 'ನಿನ್ನ ಕೊಬ್ಬು ಇಳಿಸ್ತೀನಿ' 'ನಾವೂ ಅಷ್ಟೆ' 'ದೊಡ್ಡ ವಿಷಮ ಪರಿಸ್ಥಿತಿ' 'ಹೌದು ಸಾರ್.'

ಹೀಗಿದೆ ಅಮೆರಿಕಾ ಆಟ. ಅದೇ ತರಹ ಎಲ್ಲ ಶ್ರೀಮಂತರ ಆಟ. ಈಗ ಫುಟ್‌ಬಾಲ್ ವಿಶ್ವಕಪ್ ಸಡಗರ. ಎಲ್ಲ ಕಡೆ ಅದನ್ನು ಫುಟ್‌ಬಾಲ್ ಅಂದರೆ, ಅಮೆರಿಕಾದಲ್ಲಿ ಅದು ಸಾಕರ್. 'ಅಂಕಲ್ ಸ್ಯಾಮ್, ನೀನೇಕೆ ಫುಟ್‌ಬಾಲ್‌ನಲ್ಲಿ ಭಾಗವಹಿಸೋಲ್ಲ?' 'ಸಾಕರ್ ಮಹಾ ಬೋರಿಂಗ್. ಅದರ ನಿಯಮ ಬದಲಿಸಿದ್ರೆ ಮಾತ್ರ ನಾನು ಭಾಗವಹಿಸೋದು.' 'ಫುಟ್‌ಬಾಲ್ ಆಟದ ನಿಯಮದಲ್ಲಿ ಏನೇನು ಬದಲಿಸಬೇಕು?' 'ಮೊದಲನೆಯದಾಗಿ ಗೋಲ್ ಈಗಿನಂತೆ ಚಿಕ್ಕದಾಗಿರಬಾರದು. ನೂರಡಿ ಅಗಲ, ನೂರಡಿ ಎತ್ತರವಿದ್ದು ಹತ್ತಾರು ಗೋಲ್ ಹೊಡೆದು ಜಯಭೇರಿ ಹೊಡೆಯಲು ಅನುಕೂಲವಿರಬೇಕು...'




ಮೇಲೆ ಹೇಳಿದ್ದು ನಿಜ; ಅಮೆರಿಕಾ ಫುಟ್‌ಬಾಲ್ ನಿಯಮ ಬದಲಿಸಿ ಭಾಗವಹಿಸುವ ಅಪಾಯವಿದೆ... ಈ ಅಮೆರಿಕಾದ ಎದುರು ಯಾವನೇ ಒಬ್ಬ ಸೂಕ್ಷ್ಮ ಮನುಷ್ಯನ ಜೀವಿ, ಯಾವುದೇ ಲಾಭನಷ್ಟ ಮೀರಿದ ಮೌಲ್ಯ ಇರಲು ಸಾಧ್ಯವೆ? ಇಡೀ ಜಗತ್ತಿನ ಏಕಮಾತ್ರ ಖಳ ಬೇರೆಲ್ಲರನ್ನೂ ಖಳರೆಂದು ಪರಿಗಣಿಸುತ್ತಿರುವಾಗ... ಏನು ಮಾಡುವುದು?

ಜೂನ್ 29, 1994

'ಭಾರತೀಯ ಸಂಸ್ಕೃತಿ' ಎಂಬ ದಿವ್ಯ ಮಂತ್ರವ

ಮಣಿಶಂಕರ ಐಯ್ಯರು ಅನಿಷ್ಟಬಾಯಿ. ಅವನ ನಾಲಿಗೆ ಮೇಲೆ ಮಚ್ಚೆ ಇರಬೇಕು. ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಅದ್ದೂರಿ ತಯಾರಿ ನಡೆಯುತ್ತಿತ್ತಲ್ಲಾ ಯೋಜನೆ ಅಂದರೇ ಭ್ರಷ್ಟಾಚಾರ. ಅದ್ದೂರಿ ಯೋಜನೆ ಅಂದರೆ ಭ್ರಷ್ಟಾಚಾರಾನೂ ಅದ್ದೂರಿಯಾಗೇ ಇರುತ್ತೆ ಅನ್ನುವುದು ಸರ್ವವಿದಿತ ಅಲ್ವಾ.... ಇಲ್ಲೂ ಅದೇ ಆಗಿತ್ತು. ಇವನಿಗೆಲ್ಲೋ ನೆಕ್ಕಕ್ಕೆ ಅವಕಾಶ ಸಿಗಲಿಲ್ಲ ಎಂದು ಕಾಣಿಸುತ್ತೆ. ಭಾರತದಂತಹ ಬಡದೇಶಕ್ಕೆ ಐವತ್ತು ಸಾವಿರ ಕೋಟಿ ರೂಪಾಯಿ ವೆಚ್ಚದ ಈ ಕ್ರೀಡಾಕೂಟ ಬೇಕಿತ್ತಾ

ಅಣಕ



▸▸ ಎಚ್.ಎಲ್. ಕೇಶವಮೂರ್ತಿ

ಎಂದು ಕೇಳಿದ್ದ. ಇಷ್ಟೇ ಆಗಿದ್ದರೆ ಪರವಾಗಿರಲಿಲ್ಲ. 'ಅದು ಅದ್ವಾನ ಆದ್ರೆ ನನಗೆ ಆನಂದ' ಅಂತಾನೂ ಅಂದಿದ್ದ! ಈ ನಾಶಬಾಯಿ ಹೇಳಿದಂಗೇ ನಡೀತದೆ ಅನ್ನೋ ಭ್ರಮೇನ ಪತ್ರಿಕೆಗಳು ರೀಮುಗಟ್ಟಲೆ ರೀಲು ಬಿಡುತ್ತಾ ಕುಳಿತವೆ. ಭ್ರಷ್ಟಾಚಾರ ಕುರಿತು ಲೇಖನಗಳ ಸರಮಾಲೇನೆ ಪ್ರಕಟಿಸುತ್ತಿವೆ. ಅಲ್ಲ ಬರೆಸಲಿ. ಆದಕ್ಕೆ ವಿಷಯ ಅರ್ಥ ಮಾಡಿಕೊಂಡು ಬರೆಯಬೇಕೆಂಬುದು ನಮ್ಮ ಆಶಯ ಅಷ್ಟೆ.

ಒಂದು ಪತ್ರಿಕೆ ಬರೆಯುತ್ತೆ, ಈಗ 'ಬ್ರೀಫ್‌ಕೇಸ್ ಕಲ್ಚರ್' ಇಲ್ಲವಂತೆ. ಏನಿದ್ದರೂ 'ಸೂಟ್‌ಕೇಸ್ ಕಲ್ಚರ್', 'ಗೋಣಿ ಕಲ್ಚರ್' ಇದೆಯಂತೆ. ಇದೇನು ಇದು ಯಾವ ಕಲ್ಚರು ಅಂದರೆ.. ಹಿಂದೆಲ್ಲ ಬ್ರೀಫ್‌ಕೇಸಿನಲ್ಲಿ ಹಣ ತಗೊಂಡೋಗಿ ಸಂಬಂಧಿಸಿದವರಿಗೆ ಅರ್ಪಿಸಿದರೆ ಕಾರ್ಯ ಸಿದ್ಧಿಯಾಗುತ್ತಿತ್ತಂತೆ. ಈಗ ಅಂತಹದ್ದೇ ಕೆಲಸಗಳಿಗೆ ಸೂಟ್ ಕೇಸು, ಗೋಣಿಚೀಲಗಳಲ್ಲಿ ಹಣ ತುಂಬಿಕೊಂಡು ಹೋಗಿ ಅರ್ಪಿಸಬೇಕಂತೆ. ಇದರಲ್ಲಿ ಅನ್ಯಾಯ ಎಲ್ಲಿ ಬಂತು ಎಂಬುದು ಅರ್ಥವಾಗುತ್ತಿಲ್ಲ. ಹಿಂದಿನ ಕಾಲಕ್ಕೂ ಈಗಿನ ಕಾಲಕ್ಕೂ ಹೋಲಿಸಲು ಆಗುತ್ತಾ? ಹಾದೀಲಿ ಹೋಗುವವರನ್ನ ಬೇಕಾದರೆ ವಿಚಾರಿಸಿ. ಹಿಂದೆಲ್ಲ ದುಡ್ಡು ಇಟ್ಟುಕೊಂಡು ಹೋಗಿ ಚೀಲದಲ್ಲಿ ತರಕಾರಿ ತರುತ್ತಿದ್ವೋ; ಈಗ ಚೀಲದಲ್ಲಿ ದುಡ್ಡು ಇಟ್ಟುಕೊಂಡು ಹೋಗಿ ಜೇಬಿನಲ್ಲಿ ತರಕಾರಿ ತರಬೇಕಾಗುತ್ತೆ ಎಂದೇ ಹೇಳುತ್ತಾರೆ. ವಿಷಯ ಹೀಗಿರುವಾಗ ಲಂಚದ ಹಣದಲ್ಲಿ ಮಾತ್ರ ಬದಲಾವಣೆ ಆಗಬಾರದು ಅಂದರೆ ಹೇಗೆ? ಹಣದುಬ್ಬರ ಯದ್ವಾತದ್ವಾ ಏರಿರುವ ಈ ದಿನಗಳಲ್ಲೂ 'ಬ್ರೀಫ್‌ಕೇಸ್ ಕಲ್ಚರ್' ಇರಬೇಕು ಎಂದು ಬಯಸುವುದು ಅಪರಾಧ ಎಂದೇ ಪರಿಗಣಿಸಬೇಕಾಗುತ್ತದೆ. ಇದನ್ನು ಅರ್ಥ ಮಾಡಿಕೊಂಡು ಲೇಖನಗಳನ್ನು ಪ್ರಕಟಿಸಬೇಕೆಂದು ಸಂಪಾದಕರಲ್ಲಿ ಸವಿನಯ ವಿನಂತಿ.

ಲೇಖನಗಳ ಜೊತೆಗೆ ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಿ, 'ವಸುದೈವ ಕುಟುಂಬಂ' ಎಂಬ ಭಾರತೀಯ ಉದಾತ್ತ ಭಾವನೆಗೆ ವಿರುದ್ಧವಾಗಿ, ಸಂಬಂಧಿಸಿದವರ ಮನ ನೋಯುವಂತೆ ಮಾಡಲಾಗುತ್ತಿದೆ. ಹೀಯಾಳಿಸಿಕೊಂಡವರು ಕ್ರೀಡಾಮನೋಭಾವ ಹೊಂದಿದ್ದು ಇಂತಹವುಗಳನ್ನು ಕುರಿತು ಚಿಂತೆಗೆ ಒಳಗಾಗದಿರುವುದು ಸಮಾಧಾನದ ಸಂಗತಿ. ಒಂದು ವ್ಯಂಗ್ಯ ಚಿತ್ರವನ್ನು ಮಾತ್ರ ಇಲ್ಲಿ ನಿರೂಪಿಸಲು ಇಚ್ಛಿಸುತ್ತೇನೆ.

ಒಂದು ಸೀಮೆ ಹಸು. ಅದು ಹಾಲು ಕರೆಯುವ ಹಸು. ಅದಕ್ಕೆ CWG ಎಂದು ಹೆಸರಿಸಲಾಗಿದೆ. ಒಂದು ದಢೂತಿ ಆಸಾಮಿ. ತಿಂದುತಿಂದು ಕೊಬ್ಬಿರುವಂತಿದೆ. ಅದು ಹಾಲು ಕರೆಯುತ್ತಿದೆ. ಅದರ ಬೆನ್ನ ಮೇಲೆ CORRUPTION ಎಂದು ಬರೆಯಲಾಗಿದೆ. ಪಕ್ಕದಲ್ಲೇ ಒಂದು ಎಳೆಕರು ಹಸಿದಿದೆ. ತಾಯಿಯ ಮೊಲೆಗಾಗಿ ಹಾತೊರೆಯುತ್ತಿದೆ. ಆದರೆ ಬಾಯಿ ಹಚ್ಚಲು ಅವಕಾಶ ಇಲ್ಲ. ಅದರ ಹೆಸರು. SPORTS ಎಂದು ತಿಳಿಸಲಾಗಿದೆ. ದಯ ಮಾಡಿ ವಿಷಯ ಅರ್ಥ ಮಾಡಿಕೊಳ್ಳಿ ಸಂಪಾದಕರೆ. ಇದು ನ್ಯಾಯವಾ? ಹಸುವಿನ ಮೊಲೆಗೆ ಕರುವನ್ನೂ ಕೂಡದಂತಹ ಕಠಿಣಾತ್ಮರಲ್ಲ ಭಾರತೀಯರು. ಅಷ್ಟೋ ಇಷ್ಟೋ ಅವಕಾಶ ನೀಡಿ ಅದು ಸಾಯದಂತೆ ನೋಡಿಕೊಳ್ಳುವ ಕರುಣಹೃದಯಿಗಳು. ದೆಹಲಿಗೆ ಹೋಗಿ ನೋಡಿ. ಎಷ್ಟೊಂದು ಕಟ್ಟಡಗಳು ಕ್ರೀಡಾಕೂಟದ ಹೆಸರಿನಲ್ಲಿ ಮೇಲೆ ಬರುತ್ತವೆ. ಎಲ್ಲ ಹಣವನ್ನೂ ನುಂಗಿ ಹಾಕಿದ್ದರೆ ಅಷ್ಟೊಂದು ಕಟ್ಟಡಗಳು ಹೇಗೆ ನಿರ್ಮಾಣ ಹಂತದಲ್ಲಿರುತ್ತಿದ್ದವು? ಭಾರತೀಯ ಸಂಪ್ರದಾಯವೇ ಹಾಗಿದೆ. ಸೊರಬಿಡುವ ಹಾಲನ್ನೆಲ್ಲ ಕರುವಿಗೇ ಬಿಡುವುದು ಸಾಧ್ಯವಾ? ಹಾಗೆ ಒಂದು ವೇಳೆ ಬಿಟ್ಟರೂ ಕರುವಿಗೆ ಹಿಂದೆಮುಂದೆ ಶುರುವಾಗುತ್ತದೆ. ಕರು ಇರಬೇಕು ನಿಜ. ಇಲ್ಲದಿದ್ದರೆ ಹಸು ಸೊರಬಿಡುವುದಿಲ್ಲ. ಅದರ ಆರೋಗ್ಯದ ದೃಷ್ಟಿಯಿಂದ ಎಲ್ಲ ಹಾಲನ್ನೂ ಬಿಡುವುದು ಸಮಂಜಸ ಅಲ್ಲ. ಒಂದು ಚೂರು ಬಿಟ್ಟು ಬಹುಪಾಲು ಹಾಲನ್ನು ಕರೆದುಕೊಳ್ಳುವಂತೆಯೇ CWG ವ್ಯವಹಾರವ್ನೂ ಎಂಬುದನ್ನು ಅರ್ಥಮಾಡಿಕೊಂಡರೆ ಲೇಸು.

ಮೇಲ್ಸಾವಣಿ ಕಳಚಿಬಿತ್ತು; ಸೋರುತಿಹುದು ಕ್ರೀಡಾ ಸಮುಚ್ಚಯ ಮಾಳಿಗೆ; ಮೇಲುಸೇತುವೆ ಕುಸಿದು ಬಿತ್ತು ಎಂದೆಲ್ಲ ಚಿತ್ರ ಸಹಿತ ವರದಿ ಮಾಡಲಾಗುತ್ತದೆ. ಕೋಟ್ಯಂತರ ರೂಪಾಯಿ ಕಾಮಗಾರಿ ನಡೆಯುವಾಗ ಇಂತಹವುಗಳೆಲ್ಲ ಸರ್ವೇಸಾಮಾನ್ಯ ಎಂದು ಶೀಲಾ ದೀಕ್ಷಿತರೇ ಹೇಳಿದ್ದಾರೆ. ಕುಸಿದು ಬಿದ್ದೋಯ್ತು ಎಂದು ಹಾಗೇ ಅದನ್ನೇನು ಬಿಟ್ಟುಬಿಡಲಾಗುವುದಿಲ್ಲವಲ್ಲ, ರಿಪೇರಿ ಮಾಡಿಸುತ್ತಾರೆ. ಆಯಿತಲ್ಲಾ ಇನ್ನೇನು ಬೇಕು, ವಸತಿ ಸಮುಚ್ಚಯ ಕುರಿತೂ ಆರೋಪ ಮಾಡುತ್ತಾ ಇದ್ದಾರೆ. ಅದು ಗಲೀಜು ಅಂತ ಯಾವುದೋ ಕೆಂಪು ಕೋತಿ ಹೇಳಿದ್ದಕ್ಕೇ ಪ್ರಚಾರ ಮಾಡ್ತಾರೆ. ಕೊಟ್ಟರೇನು ಅಂತಹ ಮಾತುಗಳಿಗೆಲ್ಲ ಎದೆಗುಂದುವ ಜನ ಅಲ್ಲ ನಾವು. ಗಲೀಜು ಆಗಿದ್ದರೆ ಏನಂತೆ, ಇದು ನಮ್ಮ 'ಭಾರತೀಯ ಸಂಸ್ಕೃತಿ' ಎಂದು ತಿರುಗೇಟು ನೀಡಿದ್ದಾರೆ! ಇವರು ಯಾಕೆ ಹೀಗೆ ಹೇಳಿದರು ಎಂದರೆ ಅವರ ಸ್ವಚ್ಛತೆಯ ಕಲ್ಪನೆಯೇ ಬೇರೆ ನಮ್ಮದೇ ಬೇರೆ ಎಂದು ತಿಳಿದು ಹಾಗೆ ಹೇಳಿದ್ದಾರೆ. ಅವರ ದೇಶದ ಸ್ಟ್ಯಾಂಡರ್ಡನ್ನೇ ಇಲ್ಲೂ ಬಯಸುವುದು ಸಲ್ಲದು. ಅಲ್ಲೀದು ಅಲ್ಲಿಗೆ ಇಲ್ಲೀದು ಇಲ್ಲಿಗೆ!

ಗಲೀಜೋ ಗಲೀಜು ಅಂತ ಬಾಯಿ ಬಡಿದುಕೊಳ್ಳುತ್ತಿದ್ದರಾ ಅದು ಮುಗೀತಿದ್ದಂತೆ. ಇನ್ನೊಂದು ಹಿಡ್ಕೊಂಡಿದಾರೆ. ದಕ್ಷಿಣ ಆಫ್ರಿಕಾ ದೇಶದವರಿಗೆ ಕೊಟ್ಟರೋ ಕೊಠಡಿಯಲ್ಲಿ ಹಾವು ಇತ್ತಂತೆ! ಇಂತಹ ದೂರು ಕೇಳಿದಾಗ ನಗೆ ಬರುತ್ತದೆ. ಅಲ್ಲ ಬಡವರನ್ನೆಲ್ಲ ಊರುಬಿಟ್ಟು ಹೊರಗೆ ಓಡಿಸುತ್ತಾ ಇದಾರಂತೆ, ವಿದೇಶಿ ಜನರಿಗೆ ಇಂತಹ ಹಾಳು ಮುಖದವರ ದರ್ಶನ ಆಗಬಾರದು ಎಂದು. ಕ್ರೀಡಾಕೂಟ ಮುಗಿಯುವವರೆವಿಗೂ ಅವರು ಆ ಕಡೆ ತಲೆ ಹಾಕೂ ಮಲಗೋ ಹಾಗೂ ಇಲ್ಲವಂತೆ. ಹಾಗಂತ ಆರ್ಡರ್ ಮಾಡಿರುವರಂತೆ. ಹಾಗೇ ಹಾವುಗಳಿಗೂ ಮಾಡುವುದಕ್ಕಾಗುತ್ತಾ... 'ಬಿಲ್‌ಕುಲ್ ನೀವು ಬರಾಕಾಗ್ದು' ಅಂತ



ಆರ್ಡರು ಮಾಡೋಕೆ ಸಾಧ್ಯಾನಾ... 'ಇಲ್ಲಿ ಹಾವುಗಳಿಗೆ ಪ್ರವೇಶವಿಲ್ಲ' ಎಂದು ಬೋರ್ಡು ಬರೆಸಿ ಹಾಕಲಾದೀತಾ... ಮೊದಲೇ ನಮ್ಮ ದೇಶ ಹಾವುಗಳಿಗೆ ಪ್ರಸಿದ್ಧಿ. ಅವೇ ಬರಬಾರದು ಅಂದರೆ ಹೇಗೆ? ಬಂದಿರುತ್ತವೆ. ಇನ್ನೊಂದು ವಿಷಯ ಅಂದರೆ... ಅಲ್ಲಿ ಹಾವು ಇತ್ತು ಎಂಬುದು ನಿಜವಂತೆ. ಆದರೆ ಅದು ಭಾರತೀಯ ಹಾವೆ ಎಂದು ಖಚಿತವಾಗಿಲ್ಲವಂತೆ! ಅದು ಭಾರತೀಯ ಹಾವು ಇರಲಾರದೆಂಬುದೇ ಅಚಲ ನಂಬಿಕೆ. ಯಾಕೆಂದರೆ ಅವಕ್ಕೇನು ರಾಷ್ಟ್ರದ ಗೌರವದ ಪ್ರಶ್ನೆ ಕಾಡಿಲ್ಲವೆ? ಅವು ವಿದೇಶಿ ಹಾವುಗಳೇ ಇರಬೇಕು. ಅದರಲ್ಲೂ ಪಾಕಿಸ್ತಾನದ ಹಾವೇ ಇರಬೇಕು!

ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಬರುವುದಿಲ್ಲ ಎಂದು ಕೆಲವು ದೇಶದ ಕ್ರೀಡಾಪಟುಗಳು ಬೆದರಿಕೆ ಒಡ್ಡುತ್ತಿದ್ದಾರಂತೆ. ಅದು ಯಾವ್ದೋಳೊ ಮುದುಕಿ ನನ್ನ ಹುಂಜ ಕೂಗದಿದ್ದರೆ ಬೆಳಕೇ ಹರಿಯುವುದಿಲ್ಲ ಅಂತ ಹೇಳುತ್ತಿದ್ದಳಂತಲ್ಲ ಹಾಗೆ ಆಯಿತು. ಬರದಿದ್ದರೆ ಬೇಡ. ಕ್ರೀಡಾಕೂಟವೇನೂ ನಿಲ್ಲುವುದಿಲ್ಲ, ನಡೆದೇ ನಡೆಯುತ್ತೆ, ವಿದೇಶೀಯ ಕ್ರೀಡಾಪಟುಗಳು ಯಾರೂ ಭಾಗವಹಿಸಲಿಲ್ಲ ಅನ್ನಿ, ಎಲ್ಲ ಪದಕಗಳೂ ಪ್ರಶಸ್ತಿಗಳೂ ಭಾರತೀಯರಿಗೇ ದೊರೆಯಲಿವೆ! ಈ ಅಂಶವನ್ನು ಸಂಪಾದಕರು ಗಮನಿಸಿದರೆ ಒಳಿತು ಅನಿಸುತ್ತದೆ.

ಹೀಗೆ ಹೇಳಿದ ನಂತರ ಒಂದು ವಿಷಯವನ್ನು ಸ್ಪಷ್ಟಪಡಿಸಲು ಬಯಸುತ್ತೇನೆ. ತಮ್ಮ ಶ್ರಮ ವ್ಯರ್ಥವಾಯಿತು ಎಂದು ಯಾವ ಸಂಪಾದಕರೂ ನೊಂದು ಕೊಳ್ಳಬೇಕಿಲ್ಲ, ಪ್ರಜಾಪ್ರಭುತ್ವದ ನಾಲ್ಕನೆ ಅಂಗದ ಬಗ್ಗೆ ಸರ್ಕಾರಕ್ಕೆ ಅಪಾರ ಗೌರವ ಇದೆ. ಏಕೆಂದರೆ ಪ್ರಧಾನಿ ಆದಿಯಾಗಿ ಎಲ್ಲರೂ 'ಭ್ರಷ್ಟಾಚಾರ ಎಸಗಿದವರಿಗೆ ಶಿಕ್ಷೆ ಖಾತರಿ' ಎಂದು ಗುಟುರು ಹಾಕಿದ್ದಾರೆ. ಮೂರು ತಿಂಗಳಿಗೇ ಜನಿಸಿದವರಂತೆ ಆತುರಪಡಿಸುವವರೂ ಇರಬಹುದು. ಸಾವಧಾನವಾಗಿರಿ. ಕ್ರಮ ಜರುಗಿಸುತ್ತಾರೆ. ಕ್ರೀಡಾಕೂಟ ಯಶಸ್ವಿಯಾಗಿ ಮುಗಿದ ನಂತರ ಕ್ರಮ ಜರುಗಿಸಿಯೇ ಜರುಗಿಸುತ್ತಾರೆ!

ಅಲ್ಲಿ ಯಶಸ್ಸಿನ ಅಲೆಯ ಮುಂದೆ ರಾಷ್ಟ್ರದ ಪ್ರತಿಷ್ಠೆ ಗೌರವದ ಮುಂದೆ ಭ್ರಷ್ಟಾಚಾರ... ಇವೆಲ್ಲ ಕ್ಷುಲ್ಲಕ ಅಲ್ಲವಾ....

ಇದು ಭಾರತೀಯ ಸಂಸ್ಕೃತಿ!

ಛಾವಣಿ ಕುಸಿದು ಬಿತ್ತು!

ಮೊಬೈಲ್‌ಗಳಲ್ಲಿ ಹರಿದಾಡಿರುವ ಜೋಕು ಇದು.

ಸುರೇಶ್ ಕಲ್ಮಾಡಿ ಗೊತ್ತಲ್ಲ?

ಕನ್ನಡ ಕುವರ. ಕಾಮನ್‌ವೆಲ್ತ್ ಕ್ರೀಡಾಕೂಟದ ಸಂಘಟನಾ ಸಮಿತಿಯ ಅಧ್ಯಕ್ಷ.

ಪುಂಖಾನುಪುಂಖವಾಗಿ ಕೇಳಿ ಬರುತ್ತಿರುವ ಆರೋಪಗಳಿಂದ ನೊಂದು ಬೆಂದರು. ಕಲ್ಮಾಡಿ ಸಾಹೇಬರು ಬೇಸತ್ತರು. ತಾವೇ ಉಸ್ತುವಾರಿ ವಹಿಸಿ ಕಟ್ಟಿಸಿದ್ದ ವಸತಿ ಸಮುಚ್ಚಯಕ್ಕೆ ಹೋದರು. ಅಲ್ಲಿದ್ದ ಸೀಲಿಂಗ್ ಫ್ಯಾನ್‌ಗೆ ನೇಣು ಹಾಕಿಕೊಂಡರು!

ಸತ್ತರೆ ಕಲ್ಮಾಡಿ?


ಸಾಯಬೇಕಿತ್ತು... ಆದರೆ ಛಾವಣಿಯೇ ಕುಸಿದುಬಿತ್ತು!

ಚಾನೆಲ್‌ಗಳು ಇನ್ನಾದರೂ ಪಾಠ ಕಲಿಯಲಿ

ಪ್ರೀತಿಯ ಗೌರಿ ಲಂಕೇಶ್‌ರವರಿಗೆ,

ಈ ಬಾರಿಯ ನಿಮ್ಮ ಲಂಕೇಶ್‌ನ ಸಂಚಿಕೆಯನ್ನು ನೋಡಿ ತುಂಬಾ ಖುಷಿಯಾಯಿತು.

ಕನ್ನಡದ ಚಾನೆಲ್‌ಗಳಲ್ಲಿ ಬರುತ್ತಿರುವ ರಿಯಾಲಿಟಿ ಶೋಗಳ ವಾಸ್ತವ ನೈಜ ಚಿತ್ರಣವನ್ನು ಬಯಲಿಗೆಳೆದಿರುವುದಕ್ಕೆ, ನಿಮಗೆ ದೊಡ್ಡ ಅಭಿನಂದನೆಗಳು.



ನಾವು ಬಹಳ ದಿನಗಳಿಂದಲೂ ಹಳ್ಳಿ ಹೈದ ಪ್ಯಾಟೆಗ್ ಬಂದ ಕಾರ್ಯಕ್ರಮವನ್ನು ನೋಡ್ತಾ ಇದ್ದೆವು, ಆದರೆ ಎಲ್ಲೋ ಒಂದು ಕಡೆ ಈ ಹಳ್ಳಿ ಹೈದರನ್ನು ತಮ್ಮ ಕಮರ್ಷಿಯಲ್ ಲಾಭಗೋಸ್ಕರ ಶೋಷಣೆ ಮಾಡುತ್ತಿರುವುದು ನಮ್ಮ ಮನಸ್ಸಿಗೆ ಬಹಳ ಖೇದವಾಗುತ್ತಿತ್ತು, ಚಾನೆಲ್ ಮಾಡುತ್ತಿರುವ ಈ ಶೋಷಣೆಯ ಬಗ್ಗೆ ಬಹಳಷ್ಟು ಬಾರಿ ನಾನು ಮತ್ತು ನಮ್ಮ ಯಜಮಾನ್ರು ಚರ್ಚೆ ಮಾಡುತ್ತಿದ್ದೆವು. ನಮ್ಮ ಈ ಚರ್ಚೆಗೆ ಅನುಗುಣವಾಗುವಂತೆ ನಿಮ್ಮ ಪತ್ರಿಕೆಯಲ್ಲಿ ವಾಹಿನಿಯ ಈ ಕಾರ್ಯಕ್ರಮದ ವಿರುದ್ಧ ಲೇಖನ ಬಂದಿರುವುದು ನಮ್ಮಂಥವರಿಗೆ ಒಂದು ನೈತಿಕ ಬೆಂಬಲ ದೊರಕಿದಂತಾಯಿತು. ಕೇವಲ ವಾಣಿಜ್ಯಕ ದೃಷ್ಟಿಯಲ್ಲಿ ಸಾಗುತ್ತಿರುವ ವಾಹಿನಿಗಳ ಈ ಧೋರಣೆಗಳನ್ನು ನಾವೆಲ್ಲ ಖಂಡಿಸಬೇಕು. ಈ ಕೂಡಲೇ ಆ ಕಾರ್ಯಕ್ರಮವನ್ನು ನಿಲ್ಲಿಸುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕೆಂಬುದು ನಮ್ಮೆಲ್ಲರ ಆಶಯ. ಮುಂದಿನ ದಿನಗಳಲ್ಲಿ ವಾಹಿನಿಗಳು ಇಂತಹ ಕಾರ್ಯಕ್ರಮಗಳನ್ನು ಮಾಡುವ ಮುಂಚೆ ನಿಮ್ಮಂತಹ ಪತ್ರಿಕೆಗಳು ಅವರಿಗೆ ಎಚ್ಚರದ ಪಾಠವಾಗಬೇಕು.

ಶ್ರೀಮತಿ ಸೌಮ್ಯರಾವ್
ಕೋದಂಡರಾಮಪುರ, ಬೆಂಗಳೂರು

ನೀವು ಸ್ವಯಂವರ ಎಂಬ ನಕಲಿ ಕಾರ್ಯಕ್ರಮದ ಕುರಿತಾಗಿ ಬರೆದಿದ್ದ ಲೇಖನವನ್ನು ನಾನು ಓದಿದ್ದೆ, ಈ ಸಲ ಹಳ್ಳಿಹೈದ ಕಾರ್ಯಕ್ರಮದ ಕುರಿತಾಗಿ ಬರೆದಿರುವ ಸತ್ಯನಿಷ್ಠ ಲೇಖನವನ್ನು ಓದಿದೆ, ಈ ಕಾರ್ಯಕ್ರಮದಲ್ಲಿ ಹಳ್ಳಿಯ ಹುಡುಗರನ್ನು ಕೀಳುದರ್ಜೆಗೆ ಇಳಿಸಿ ಇವರು ನಾಗರಿಕರೇ ಅಲ್ಲ ಎನ್ನುವ ಹಾಗೆ ಬಿಂಬಿಸುತ್ತಿದ್ದಾರೆ. ಅದನ್ನು ಹಾಗೆಯೇ ಮುಚ್ಚುಮರೆಯಿಲ್ಲದೆ ಬರೆದು ಚಾನೆಲ್‌ನವರಿಗೆ ಬಿಸಿ ಮುಟ್ಟಿಸಿದ ನಿಮಗೂ ಹಾಗೂ ಲಂಕೇಶ್ ತಂಡಕ್ಕೂ ನನ್ನ ಅಭಿನಂದನೆಗಳು.

ವಂದನೆಗಳೊಂದಿಗೆ

ಸಂದೀಪ್ ಕಾಮತ್



ಮಾನ್ಯರೆ,

ಪತ್ರಿಕೆಯಲ್ಲಿ ಪ್ರಕಟವಾದ ಅದ್ವಿತೀಯ ಕಲಾವಿದ, ಅಮೋಘವಾದ ಕಂಠಸಿರಿಯನ್ನು ಹೊಂದಿದ್ದ ಕಾಳಿಂಗರಾಯರ ಬಗ್ಗೆ ಅರುಣ್‌ರವರು ಬರೆದ ಲೇಖನ ಓದಿದೆ. ಆ ಕುಟುಂಬದ ದುಃಸ್ಥಿತಿ ಕಂಡು ಮನ ಮರುಗಿತು. ಕರ್ನಾಟಕದಲ್ಲಿ ಅನೇಕ ಸಂಘ ಸಂಸ್ಥೆಗಳು ಅವರ ಕ್ಯಾಸೆಟ್ಟನ್ನು ಉಪಯೋಗಿಸುವುದು ಮನೆಮಾತು. ಶ್ರೀ ಕಾಳಿಂಗರಾಯರ ಒಡನಾಡಿಯಾಗಿದ್ದ ಮತ್ತು ಈಗ ಬದುಕಿರುವ ಕಲಾವಿದೆ ಸೋಹನ್ ಕುಮಾರಿ ಅವರಿಗೆ ಕರ್ನಾಟಕ ಸರ್ಕಾರ ಅಥವಾ ಅನೇಕ ಕನ್ನಡ ಚಳವಳಿ ಸಂಸ್ಥೆಗಳು ಸಹಾಯ ಮಾಡಬಲ್ಲುದೆ?

ಜಾನ್ ಎಸ್.ಎ.
ಬಿಲೇಕಹಳ್ಳಿ

...ಮೂಡಲಮನೆ ...ಡತಿಯ ...ರ್ಗಮನ



ವೈಶಾಲಿ ನೆನಪು

...ಕಾಸರವಳ್ಳಿಯವರ ...ಕ ನಿಧನ ರಂಗಭೂಮಿ, ... ಮತ್ತು ಟಿವಿ ಕ್ಷೇತ್ರಗಳಿಗೆ ...ಲಾರದ ನಷ್ಟ ಎಂದರೆ ...ತವಾಗಿಯೂ ...ಯೋಕ್ತಿಯ ಮಾತಾಗಲಾರದು. ...ದ ಟಿವಿ ಮತ್ತು ಸಿನಿಮಾ ...ಲ್ಲಿ ಇನ್ನಷ್ಟು ದೊಡ್ಡ ದೊಡ್ಡ ...ಗಳನ್ನು ಕಲಾಭಿಮಾನಿಗಳು ...ಸುತ್ತಿರುವಾಗಲೇ ವೈಶಾಲಿ ...ತೊರೆದಿರುವುದು ನಿಜಕ್ಕೂ ...ನೋವಿನ ವಿಷಯ.

...ಲಿ ಕಾಸರವಳ್ಳಿಯವರ ನಿಧನದ ಹಿಂದಿನ ಘೋರ ...ಕಥೆ ಬಹುಶಃ ಹೆಚ್ಚಿನವರಿಗೆ ತಿಳಿದಿರಲಾರದು. ...ಎಂದರೆ ಐದು ವರ್ಷಗಳ ಹಿಂದೆ ವೈಶಾಲಿ ... ನಿರ್ದೇಶಿಸುತ್ತಿದ್ದ ಮೂಡಲಮನೆ ಮೆಗಾ ...ಾಗಿ ತನ್ನನ್ನು ತಾನು ಸಂಪೂರ್ಣವಾಗಿ ಅರ್ಪಿಸಿ ... ಈ ಧಾರಾವಾಹಿ ವೈಶಾಲಿ ಕಾಸರವಳ್ಳಿ ...ಂದು ರೀತಿಯ ಸ್ಟಾರ್ ಇಮೇಜನ್ನೇ ತಂದು ...ಯೂ ತಪ್ಪಾಗಲಾರದು. ಈ ಮೆಗಾ ಧಾರಾವಾಹಿ ...ಲಿರುಳೆಂಬಂತೆ ವೈಶಾಲಿ ದುಡಿಯುತ್ತಾ ತನ್ನ ...ನೇ ಮುನ್ನುಡಿ ಬರೆದಿದ್ದರು!

... ಮಧುಮೇಹದಿಂದ ಬಳಲುತ್ತಿದ್ದ ವೈಶಾಲಿ ...ರ್ಷದಲ್ಲಿ ಅದನ್ನು ನಿರ್ಲಕ್ಷಿಸಿ ಮೂಡಲಮನೆ



...ಶ್, ಮಗ ಅಪೂರ್ವ, ಮಗಳು ಅನನ್ಯ ಜೊತೆ ವೈಶಾಲಿ...

...ರತರಾಗಿದ್ದರು. ಇದರ ಪರಿಣಾಮ ಮಧುಮೇಹ ...ಜಾಸ್ತಿಯಾಗಿ ಆಕೆಯ ಆರೋಗ್ಯದಲ್ಲಿ ಏರು ...ಯಿತು. ಶಿಸ್ತಿನ ಜೀವನ ನಡೆಸುತ್ತಿದ್ದ ವೈಶಾಲಿ ...ರಾವಾಹಿಯ ಒತ್ತಡಕ್ಕೆ ಸಿಲುಕಿ ದೇಹದಂಡನೆ ...ದ್ದರು. ಕೊನೆಗೆ ಆಸ್ಪತ್ರೆ ಸೇರಿದರು. ಆ ಸಂದರ್ಭ ...ಯ ಆರೈಕೆ ಮಾಡುತ್ತಿದ್ದಾಗ ಒಂದು ಪ್ರಮಾದ ...ಯಿತು. ವೈಶಾಲಿಗೆ ರಕ್ತ ನೀಡಬೇಕಾಗಿ ಬಂದಾಗ ... ಇನ್ನೇನೋ ಸಮಸ್ಯೆ ಉಂಟಾಯಿತು. ಕೊನೆಗೆ ...ದ ವಿಷಯ ಬದಿಗಿಟ್ಟು ಈ ಕಲುಷಿತ ರಕ್ತದಿಂದ ...ಸಮಸ್ಯೆ ಪರಿಹರಿಸಲು ವೈದ್ಯರು ತಿಣುಕಾಡಿದರು. ...ಗೋ ಅದನ್ನು ನಿಲ್ಲಿಸುವಲ್ಲಿ ಯಶಸ್ವಿಯಾದರು. ...ಇನ್ನೇನೋ ಹೊಸ ಸಮಸ್ಯೆ ಸೃಷ್ಟಿಯಾಯಿತು. ... ಮಧುಮೇಹವನ್ನು ಕೆಲವೊಮ್ಮೆ ವೈದ್ಯರು ..., ತರುತ್ತಿದ್ದರು. ಮತ್ತೆ ಕೆಲವೊಮ್ಮೆ ಅದು ...ಏರಿಹೋಗುತ್ತಿತ್ತು, ಹೀಗೆ ಅಂದು ಐದು ...ಂದೆ ಆಸ್ಪತ್ರೆಗೆ ಸೇರಿದ ವೈಶಾಲಿ ಕಾಸರವಳ್ಳಿ ಮೊನ್ನೆತನಕ ಆಸ್ಪತ್ರೆಯಿಂದ ಮನೆಗೆ, ಮನೆಯಿಂದ ಆಸ್ಪತ್ರೆಗೆ ಆಗಾಗ್ಗೆ ಹೋಗಿಬರಲೇಬೇಕಾದ ನೋವನ್ನು ಅನುಭವಿಸುತ್ತಲೇ ಇದ್ದರು.

ಹೀಗೆ ಮೂಡಲಮನೆಗಾಗಿ ಮಧುಮೇಹವನ್ನು ನಿರ್ಲಕ್ಷಿಸಿ ತನ್ನ ಕಾರ್ಯತತ್ಪರತೆಯನ್ನು ಪ್ರದರ್ಶಿಸಿದ ವೈಶಾಲಿ ಅನಾರೋಗ್ಯಕ್ಕೊಳಗಾಗಿದ್ದರು. ಮತ್ತೊಂದೆಡೆ ವೈದ್ಯರ ನಿರ್ಲಕ್ಷ್ಯತನದಿಂದಾಗಿ ಸಾವಿನ ಮನೆಯ ಕದ ತಟ್ಟುವಂತಾದರು.

ಕಳೆದ ಐದು ವರ್ಷಗಳಿಂದ ವೈಶಾಲಿಯವರ ಪತಿ ಗಿರೀಶ್ ಕಾಸರವಳ್ಳಿ, ಮಗಳು ಅನನ್ಯ ಮತ್ತು ಮಗ ಅಪೂರ್ವ ಈ ನೋವಿನ ನಡುವೆಯೂ ಏನೂ ಆಗದಂತೆ ಬಣ್ಣದ ಲೋಕದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು ಮಾತ್ರ ನಿಜಕ್ಕೂ ವಿಶೇಷವೇ ಸರಿ. ಕಳೆದ ಐದು ವರ್ಷಗಳಿಂದ ದಿನನಿತ್ಯವೂ ವೈಶಾಲಿಯವರ ಅಪಾಯಕಾರಿ ಆರೋಗ್ಯ ಸ್ಥಿತಿಯ ಬಗ್ಗೆ ಆತಂಕದಲ್ಲೇ ಇದ್ದ ಕಾಸರವಳ್ಳಿ ಕುಟುಂಬದ ಸದಸ್ಯರ ಮನೋಸ್ಥೈರ್ಯ ಮೆಚ್ಚಲೇಬೇಕಾದದ್ದು. ಉಳಿದ ಕಲಾವಿದರಂತೆ ಇದನ್ನು ದೊಡ್ಡ ರಾದ್ಧಾಂತವಾಗಿ ಅವರು ಮಾಡಲೇ ಇಲ್ಲ. ಅಥವಾ ಧನಸಹಾಯಕ್ಕಾಗಿ ಸರ್ಕಾರ ಅಥವಾ ಸಾರ್ವಜನಿಕ ಸಂಘಸಂಸ್ಥೆಗಳನ್ನು ಸಂಪರ್ಕಿಸಲೇ ಇಲ್ಲ. ಸುಮಾರು 40-50 ಲಕ್ಷಗಳಷ್ಟು ಹಣವನ್ನು ಆಕೆಯ ಚಿಕಿತ್ಸೆಗಾಗಿ ಕಾಸರವಳ್ಳಿಯವರು ಖರ್ಚು ಮಾಡಿದ್ದಾರೆ. ಈ ಎಲ್ಲಾ ನೋವಿನ ನಡುವೆಯೂ ಆಸ್ಪತ್ರೆಯ ಓಡಾಟದ ಮಧ್ಯೆಯೂ ಸ್ವತಃ ವೈಶಾಲಿ ಕಾಸರವಳ್ಳಿ ಕೂಡಾ ತನ್ನ ಟಿವಿ ಮೆಗಾಧಾರಾವಾಹಿಯ ಕಾರ್ಯಗಳಲ್ಲಿ ಮಗ್ನರಾಗಿರುತ್ತಿದ್ದರು; ಮಾತ್ರವಲ್ಲ ತನ್ನ ಪತಿ ಗಿರೀಶ್ ಕಾಸರವಳ್ಳಿಯ ಹೊಸ ಚಿತ್ರಗಳಿಗೆ ಸಹಾಯಕರಾಗಿ ಕೆಲಸ ಮಾಡುತ್ತಲೇ ಇದ್ದರು. ಇದು ವೈಶಾಲಿಯವರು ಬಣ್ಣದ ಲೋಕವನ್ನು ಮತ್ತು ಸಾವಿನ ಲೋಕವನ್ನು ಎದುರಿಸಿದ ರೀತಿ.

ತಾನೊಂದು ಸಿನಿಮಾವನ್ನು ನಿರ್ದೇಶಿಸಬೇಕು ಎಂಬ ವೈಶಾಲಿಯವರ ಕನಸು ಮಾತ್ರ ಹಾಗೇ ನನಸಾಗದೆ ಉಳಿದುಹೋಯಿತು. ಇನ್ನುಳಿದಂತೆ ತನ್ನ ಪತಿ ಗಿರೀಶ್‌ಗೆ ಪದ್ಮಶ್ರೀಯಂತಹ ರಾಷ್ಟ್ರೀಯ ಪುರಸ್ಕಾರ ಸಿಗದಿರುವ ಬಗ್ಗೆ ಅವರಿಗೊಂದಿಷ್ಟು ಬೇಸರವಿತ್ತು. ಇವೆರಡನ್ನೂ ಹೊರತುಪಡಿಸಿದರೆ ವೈಶಾಲಿ ವೈಯಕ್ತಿಕ ಮತ್ತು ವೃತ್ತಿಜೀವನದಲ್ಲಿ ಅತ್ಯಂತ ಸಂತುಷ್ಟವಾಗಿ ಬದುಕಿದರು.

ಸಿನಿಮಾ ಕ್ಷೇತ್ರದಲ್ಲಿ ಹೆಸರು ಮಾಡುವ ಮುನ್ನ ವೈಶಾಲಿ ರಂಗಭೂಮಿಯಲ್ಲಿ ತನ್ನ ಪ್ರತಿಭೆಯಿಂದ ಪ್ರೇಕ್ಷಕರ ಮತ್ತು ವಿಮರ್ಶಕರ ಮನಸ್ಸು ಗೆದ್ದಿದ್ದರು. ಇವರ ತಂದೆ ಡಾ.ವೆಂಕಟರಾವ್ ಚಿಟಗೋಪಿ ಮತ್ತು ತಾಯಿ ನಿರ್ಮಲ ಇಬ್ಬರಿಗೂ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ಗೀಳು. ತಂದೆ ಗುಬ್ಬಿ ವೀರಣ್ಣನವರ ಕಂಪೆನಿಯಲ್ಲಿ ಒಂದಿಷ್ಟು ಪಾತ್ರ ಮಾಡಿದವರು. ಆ ಸಂದರ್ಭದಲ್ಲಿ ವೈಶಾಲಿಯು ಕೂಡ ಸಣ್ಣ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು.

ಆದರೆ ಒಮ್ಮೆ ವಿದ್ಯಾಭ್ಯಾಸದ ಕಡೆಗೆ ಗಮನಹರಿಸಿದ ನಂತರ ನಾಟಕ, ಸಿನಿಮಾದಿಂದ ವೈಶಾಲಿ ದೂರವಿದ್ದರು. ವಿದ್ಯಾಭ್ಯಾಸ ಮುಗಿದ ನಂತರ ಗುಲ್ಬರ್ಗಾದಿಂದ ಬೆಂಗಳೂರಿಗೆ ಈ ಕುಟುಂಬ ಬಂದಿದ್ದೇ ಚಿತ್ರರಂಗದ ಮತ್ತು ರಂಗಭೂಮಿಯ ಆಕರ್ಷಣೆಯಿಂದ. ಹಾಗೇ ಬಂದ ವೈಶಾಲಿಯನ್ನು ಮೊದಲು ತಮ್ಮ ನಾಟಕದಲ್ಲಿ ಬಳಸಿಕೊಂಡಿದ್ದು ಬಿ.ವಿ.ಕಾರಂತರು. ಕಾರಂತರ ನಿರ್ದೇಶನದಲ್ಲಿ ರೂಪುಗೊಂಡ ಪಿರಾಂಡಲೋನ 'ನಾಟಕಕಾರನ ಶೋಧನೆಯಲ್ಲಿ ಆರು ಪಾತ್ರಗಳು' ಎಂಬ ನಾಟಕದಲ್ಲಿ ವೈಶಾಲಿ ನಟಿಸಿದ್ದರು. ಅಲ್ಲಿಂದ ಗಿರೀಶ್ ಕಾರ್ನಾಡ್‌ರ ಹಯವದನ ನಾಟಕದ ಪದ್ಮಿನಿ ಪಾತ್ರ ನಿರ್ವಹಿಸಿದರು. ಈ ಪಾತ್ರ ವೈಶಾಲಿಗೆ ದೊಡ್ಡ ಹೆಸರು ತಂದುಕೊಟ್ಟಿತು. ಅದಾದನಂತರ ಸಿ.ಆರ್. ಸಿಂಹ, ಪ್ರಸನ್ನ, ನಾಗೇಶ್, ಕಪ್ಪಣ್ಣ, ಲೋಕನಾಥ್, ಶ್ರೀನಿವಾಸ್ ಪ್ರಭು, ರಣಜಿತ್ ಕಪೂರ್... ಹೀಗೆ ಅನೇಕ ನಿರ್ದೇಶಕರ ಜೊತೆ ವೈಶಾಲಿ ರಂಗಭೂಮಿಯಲ್ಲಿ ಕಾಣಿಸಿಕೊಂಡರು.

ರಂಗಭೂಮಿಯ ಈ ಪ್ರತಿಭೆ ಸಹಜವಾಗಿ ಸಿನಿಮಾ ಜನರ ಕಣ್ಣಿಗೂ ಬಿತ್ತು. ಪ್ರೊಫೆಸರ್ ಹುಚ್ಚುರಾಯ ಚಿತ್ರದಲ್ಲಿ ದ್ವಾರಕೀಶ್‌ಗೆ ಈಕೆ ಜೋಡಿಯಾಗಿ ನಟಿಸುವ ಮುಖಾಂತರ ಚಿತ್ರರಂಗಕ್ಕೂ ಕಾಲಿಟ್ಟರು. ಮೊದಲ ಚಿತ್ರದ ಕಮಲಿ ಪಾತ್ರದಿಂದಲೇ ಆಕೆ ಚಿತ್ರರಸಿಕರ ಹೃದಯ ಗೆದ್ದರು. ಅನಂತರ ಭೂತಯ್ಯನ ಮಗ ಅಯ್ಯು, ಬಂಗಾರದ ಪಂಜರ, ಹೊಂಬಿಸಿಲು, ಫಲಿತಾಂಶ ಮೊದಲಾದ ಅಪ್ಪಟ ಕಮರ್ಷಿಯಲ್ ಚಿತ್ರಗಳಲ್ಲಿ ವೈಶಾಲಿ ಗ್ಲಾಮರ್ ಪಾತ್ರಗಳಲ್ಲಿ ಮಿಂಚಿದ್ದರು.

ಗಿರೀಶ್ ಕಾಸರವಳ್ಳಿಯವರ ಆಕ್ರಮಣ ಚಿತ್ರ ವೈಶಾಲಿಯ ವೃತ್ತಿಜೀವನ ಮತ್ತು ವೈಯಕ್ತಿಕ ಜೀವನಕ್ಕೊಂದು ಹೊಸ ತಿರುವು ನೀಡಿತ್ತು. ಈ ಚಿತ್ರದ ಪಾತ್ರಕ್ಕಾಗಿ ಆಕೆ ರಾಜ್ಯಸರ್ಕಾರದ ಶ್ರೇಷ್ಠನಟಿ ಪ್ರಶಸ್ತಿಯನ್ನು ಪಡೆದರು. ಅದರ ಜೊತೆಗೆ ಗಿರೀಶ್ ಕಾಸರವಳ್ಳಿಯವರನ್ನೇ ಪ್ರೀತಿಸಿ ಮದುವೆಯಾಗುವ ಮುಖಾಂತರ ವೈಶಾಲಿಯ ವೈಯಕ್ತಿಕ ಜೀವನ ಹೊಸ ತಿರುವು ಪಡೆಯಿತು.

ಕಾಸರವಳ್ಳಿಯವರನ್ನು ಮದುವೆಯಾದ ನಂತರ ಕೂಡಾ ಕಮರ್ಷಿಯಲ್ ಚಿತ್ರಗಳಲ್ಲಿ ನಟಿಸುವುದನ್ನು ವೈಶಾಲಿ ಮುಂದುವರೆಸುತ್ತಾ ತನ್ನತನವನ್ನು ತೋರಿಸುತ್ತಾ , ಮತ್ತೊಂದೆಡೆ ಕಾಸರವಳ್ಳಿಯವರ ಕಲಾತ್ಮಕ ಚಿತ್ರಗಳಲ್ಲೂ ತನ್ನನ್ನು ತಾನು ತೊಡಗಿಸಿಕೊಂಡು, ಅಲ್ಲೂ-ಇಲ್ಲೂ-ಎಲ್ಲೆಲ್ಲೂ ಸಲ್ಲುವ ಕಲಾವಿದೆಯಾಗಿ ಉದ್ಯಮದಲ್ಲಿ ರೂಪುಗೊಂಡರು. ಕಾಸರವಳ್ಳಿಯವರ ತಾಯಿಸಾಹೇಬ ಚಿತ್ರದ ನಾಯಕಿ ಜಯಮಾಲರ ವಸ್ತ್ರವಿನ್ಯಾಸಕ್ಕಾಗಿ ವೈಶಾಲಿ ರಾಷ್ಟ್ರಪ್ರಶಸ್ತಿಯನ್ನು ಪಡೆದು ಭಾರತೀಯ ಚಿತ್ರರಂಗದಲ್ಲೂ ಕೂಡಾ ತನ್ನ ಪ್ರತಿಭೆಯ ಝಲಕನ್ನು ತೋರಿಸಿದ್ದರು.


ಹಾಗೆ ನೋಡಿದರೆ ಎಂದೂ ಯಾವತ್ತೂ ಪತಿಯ ಜನಪ್ರಿಯತೆಯ ಆಸರೆಯಲ್ಲಿ ಈಕೆ ಬದುಕಿದವರೇ ಅಲ್ಲ. ರಂಗಭೂಮಿಯಿಂದ ಸಿನಿಮಾಕ್ಕೆ ಬಂದ ವೈಶಾಲಿ ಟಿವಿ ಚಾನೆಲ್‌ಗಳು ಉಗಮವಾದಾಗ ಯಾವುದೇ ಮುಲಾಜಿಲ್ಲದೆ ಟಿವಿಗಳಲ್ಲಿ ನಟಿಸಲು ಆರಂಭಿಸಿದರು. ಆರಂಭದಲ್ಲಿ ಟಿವಿ ಧಾರಾವಾಹಿಯ ನಟನೆಗಷ್ಟೇ ತನ್ನನ್ನು ಸೀಮಿತವಾಗಿಟ್ಟುಕೊಂಡ ವೈಶಾಲಿ ಕೊನೆಗೆ ನಿರ್ದೇಶನ ಕೂಡಾ ಕೈಗೆತ್ತಿಕೊಂಡು ರಾಜ್ಯದ ಕಲಾಭಿಮಾನಿಗಳ ಮನಸ್ಸು ಗೆದ್ದರು. ಮೂಡಲಮನೆ ಧಾರಾವಾಹಿ ವೈಶಾಲಿಯವರನ್ನು ಕರ್ನಾಟಕದಾದ್ಯಂತ ಮನೆಮಾತಾಗಿಸಿತು. ರಂಗಭೂಮಿ ಮತ್ತು ಸಿನಿಮಾಗಳಲ್ಲಿ ಸಿಗದಂತಹ ಪ್ರೀತಿ, ಜನಪ್ರಿಯತೆ ಈ ಧಾರಾವಾಹಿಯಿಂದ ಆಕೆಗೆ ದೊರಕಿತೆಂದರೂ ತಪ್ಪಾಗಲಾರದು. ಮೂಡಲಮನೆಗಿಂತಲೂ ಮೊದಲು ನೂರೊಂದು ಬಾಗಿಲು, ಗೂಡಿನಿಂದ ಗಗನಕ್ಕೆ, ಮೂಕರಾಗ ಧಾರಾವಾಹಿಗಳನ್ನು ಈಕೆ ನಿರ್ದೇಶಿಸಿದ್ದರು. ಈಗ ಸದ್ಯಕ್ಕೆ ಇವರದೇ ನಿರ್ದೇಶನದ ಮುತ್ತಿನ ತೋರಣ ಈಟಿವಿಯಲ್ಲಿ ಪ್ರಸಾರವಾಗುತ್ತಿದೆ.

ವೈಯಕ್ತಿಕವಾಗಿ ಉದ್ಯಮದ ಎಲ್ಲಾ ಜನರ ನಡುವೆ ಹಿತಮಿತವಾಗಿ ಬೆರೆಯುತ್ತಿದ್ದ ವೈಶಾಲಿ ಎಂದೂ ಉದ್ಯಮದ ರಾಜಕೀಯದಲ್ಲಿ ಸಿಲುಕಿದವರೇ ಅಲ್ಲ. ದುಂಡು ಮುಖದ, ಬೊಗಸೆ ಕಂಗಳ, ಎಂಭತ್ತರ ದಶಕದ ನಾಯಕಿ ವೈಶಾಲಿ ಆ ಕಾಲದಲ್ಲೇ ಕನ್ನಡದ ಉಳಿದ ನಾಯಕಿಯರಿಗೆ ಪೈಪೋಟಿ ನೀಡುವಷ್ಟು ಪ್ರತಿಭೆ ಮತ್ತು ಗ್ಲಾಮರ್ ಹೊಂದಿದ್ದರು. ಅವರ ಒಂದೇ ಒಂದು ಸಮಸ್ಯೆಯೆಂದರೆ ಹೈಟು. ಸ್ಪಷ್ಟವಾದ ಕನ್ನಡ ಉಚ್ಚಾರಣೆ ಆಕೆಯ ಮತ್ತೊಂದು ಪ್ಲಸ್‌ಪಾಯಿಂಟ್! ಎಷ್ಟೋ ಬಾರಿ ಪರಭಾಷಾ ತಾರೆಯರಿಗೆ ಈಕೆ ತನ್ನ ಸುಮಧುರ ಕಂಠವನ್ನು ದಾನಮಾಡಿದ್ದೂ ಇದೆ. ಆಕೆಯ ಧ್ವನಿಗೆ ಒಂದು ವಿಶೇಷವಾದ ಆಕರ್ಷಣೆಯಿದ್ದುದೇ ಇದಕ್ಕೆ ಕಾರಣವೇನೋ?

ವೈಶಾಲಿ ಕಾಸರವಳ್ಳಿಯವರ ಅಕಾಲಿಕ ನಿಧನ ರಂಗಭೂಮಿ, ಸಿನಿಮಾ ಮತ್ತು ಟಿವಿ ಕ್ಷೇತ್ರಗಳಿಗೆ ತುಂಬಲಾರದ ನಷ್ಟ ಎಂದರೆ ಖಂಡಿತವಾಗಿಯೂ ಅತಿಶಯೋಕ್ತಿಯ ಮಾತಾಗಲಾರದು. ಅವರಿಂದ ಟಿವಿ ಮತ್ತು ಸಿನಿಮಾ ರಂಗದಲ್ಲಿ ಇನ್ನಷ್ಟು ದೊಡ್ಡ ದೊಡ್ಡ ಸಾಧನೆಗಳನ್ನು ಕಲಾಭಿಮಾನಿಗಳು ನಿರೀಕ್ಷಿಸುತ್ತಿರುವಾಗಲೇ ವೈಶಾಲಿ ಪ್ರಾಣ ತೊರೆದಿರುವುದು ನಿಜಕ್ಕೂ ಅತ್ಯಂತ ನೋವಿನ ವಿಷಯ.

• ಶ್ರೆಸ್ರೈ

ಕುಳ್ಳನ ಸಂಘ




ಚಿತ್ರರಂಗದ ಕುಳ್ಳ ಎಂದೇ ಖ್ಯಾತಿ ಪಡೆದಿರುವ ದ್ವಾರಕೀಶ್ ಅವರ ಅಭಿಮಾನಿ ಬಳಗವೊಂದು ಈಗ ಹುಟ್ಟುತ್ತಿದೆ. ಇದನ್ನು ತಮಾಷೆಯೆಂದು ಕರೆಯಬೇಕೋ ಅಥವಾ ದುರಂತವೆನ್ನಬೇಕೋ ಗೊತ್ತಾಗುತ್ತಿಲ್ಲ.

ಯಾಕೆಂದರೆ ಒಂದೆರಡು ಸಿನಿಮಾ ಮಾಡಿದ ನಾಯಕ ನಟರುಗಳಿಗೆ ಈಗ ಅಭಿಮಾನಿ ಸಂಘಗಳಿರುತ್ತದೆ. ಅವರಿಗೆ ಬಿರುದು ಬಾವಲಿ ನೀಡಲು ಜನರು ಕಾಯುತ್ತಿರುತ್ತಾರೆ. ಆದರೆ ಕನ್ನಡ ಚಿತ್ರರಂಗದಲ್ಲಿ ಐವತ್ತು ವಸಂತಗಳನ್ನು ಕಲಾವಿದನಾಗಿ ಕಳೆದ ಈ ದ್ವಾರಕೀಶ್‌ಗೆ ಈಗ ಅಭಿಮಾನಿಗಳ ಸಂಘ ಹುಟ್ಟುತ್ತಿದೆಯೆಂದರೆ ಏನು ಹೇಳಬೇಕೆಂದು ಅರ್ಥವಾಗುತ್ತಿಲ್ಲ.

ಸುಮಾರು ಮುನ್ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿ ಕನ್ನಡದ ಪ್ರೇಕ್ಷಕರನ್ನು ಕಳೆದ ಐವತ್ತು ವರ್ಷಗಳಿಂದ ರಂಜಿಸುತ್ತಿರುವ ಕುಳ್ಳನಿಗೆ ಕಲಾಭಿಮಾನಿಗಳು ಏನು ನೀಡಿದ್ದಾರೆ? ಸುಮಾರು ನಲ್ವತ್ತೆಂಟು ಚಿತ್ರಗಳನ್ನು ನಿರ್ಮಿಸಿ ಅನೇಕ ನಾಯಕ-ನಾಯಕಿಯರ ವೃತ್ತಿ ಜೀವನಕ್ಕೆ ಹೊಸ ವರ್ಚಸ್ಸು ಮತ್ತುತಿರುವು ಕೊಟ್ಟ ದ್ವಾರಕೀಶ್‌ಗೆ ಈ ಉದ್ಯಮ ವಾಪಸ್ಸು ಏನು ನೀಡಿದೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ನಿಜಕ್ಕೂ ಉತ್ತರವೇ ಇಲ್ಲ.

ಈ ಹಿನ್ನೆಲೆಯಲ್ಲಿ ಈಗ ದ್ವಾರಕೀಶ್ ಅಭಿಮಾನಿಗಳ ಬಳಗ ಎಂಬ ಸಂಘ ಹುಟ್ಟುತ್ತಿರಬಹುದು. ಈ ಕುಳ್ಳನ ಮಾತುಗಳು ಆರ್ಭಟಗಳು ಸಹ್ಯವಲ್ಲದಿದ್ದರೂ ಕೂಡಾ ಆತ ಕನ್ನಡ ಚಿತ್ರರಂಗಕ್ಕೆ ನೀಡಿದ ಕೊಡುಗೆಯನ್ನು ನಾವು ಅಲ್ಲಗಳೆಯುವಂತಿಲ್ಲ, ಒಬ್ಬ ನಟನಿಗಾಗಿ ಒಂದು ಅಭಿಮಾನಿ ಸಂಘ ಹುಟ್ಟಲು ಐವತ್ತು ವರ್ಷಗಳೇ ಬೇಕಾಗಿರುವುದು ಒಂದು ರೀತಿಯಲ್ಲಿ ದ್ವಾರಕೀಶ್ ಎಷ್ಟೊಂದು ಸ್ನೇಹಿತರನ್ನು ಗಳಿಸಿದ್ದಾರೆ ಎಂಬುದನ್ನು ತೋರಿಸುತ್ತದೆ.



ಅದೇನೇ ಇರಲಿ. ಈಗ ದ್ವಾರಕೀಶ್ ಅಭಿಮಾನಿಗಳ ಬಳಗ ಹುಟ್ಟಿಕೊಂಡಿರುವ ಸಂದರ್ಭ ಅನೇಕ ಚರ್ಚೆ ಮತ್ತು ಕುತೂಹಲಕ್ಕೆ ಕಾರಣವಾಗಿದೆ. ಮೊನ್ನೆಮೊನ್ನೆಯಷ್ಟೇ ದ್ವಾರಕೀಶ್ ಆರಂಭಿಸಿದ 'ವಿಷ್ಣುವರ್ಧನ್' ಎಂಬ ಹೊಸ ಚಿತ್ರಕ್ಕೆ ಭಾರತಿ ವಿಷ್ಣುವರ್ಧನ್ ತೀವ್ರವಾದ ಆಕ್ಷೇಪವನ್ನು ವ್ಯಕ್ತಪಡಿಸಿದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ವಿಷ್ಣು ಅಭಿ ಮಾನಿಗಳು ಮತ್ತು ದ್ವಾರಕೀಶ್ ನಡುವೆ ಒಂದು ರೀತಿಯಲ್ಲಿ ಮುಸುಕಿನ ಗುದ್ದಾಟ ಆರಂಭವಾಗುವ ಸೂಚನೆ ಈಗ ಗಾಂಧಿನಗರದಲ್ಲಿ ಕಾಣಿಸುತ್ತಿದೆ. ಇಂತಹ ಸಂದರ್ಭ ಬಂದಾಗ ಪರಿಸ್ಥಿತಿಯನ್ನು ಎದುರಿಸಲು ದ್ವಾರಕೀಶ್ ಈ ಅಭಿಮಾನಿ ಸಂಘವನ್ನು ಹುಟ್ಟುಹಾಕಿದ್ದಾರೆ ಎಂಬುದು ಉದ್ಯಮದವರ ಕುಹಕದ ಮಾತು.

ಆದರೆ ತನ್ನ ವೃತ್ತಿಜೀವನದುದ್ದಕ್ಕೂ ಹಲವಾರು ಸಾಹಸ ಮತ್ತು ವಿವಾದಗಳ ಕೇಂದ್ರಬಿಂದುವಾಗಿದ್ದ ದ್ವಾರಕೀಶ್ ಇಂತಹ ಸಣ್ಣ ಕಾರಣಕ್ಕಾಗಿ ಅಭಿಮಾನಿಗಳ ಸಂಘವನ್ನು ಹುಟ್ಟುಹಾಕುವಂತಹ ವ್ಯಕ್ತಿಯಂತೂ ಖಂಡಿತ ಅಲ್ಲ. ವಿಷ್ಣುವರ್ಧನ್ ಜೀವಂತವಾಗಿದ್ದಾಗಲೇ ಅವರೊಂದಿಗೆ ಅನೇಕ ಬಾರಿ ಮನಸ್ತಾಪ ಮಾಡಿಕೊಂಡು ಬೀದಿ ರಂಪ ಮಾಡಿಕೊಂಡ ದ್ವಾರಕಿ ಅಂದು ಹೆದರಲಿಲ್ಲ ಎಂದಮೇಲೆ ಈಗ ಹೆದರುತ್ತಾರೆಯೇ? ಹಾಸ್ಯನಟನೊಬ್ಬನ ಪರವಾಗಿ ಸಂಘ ಕಾಣಿಸಿಕೊಳ್ಳುತ್ತಿರು ವುದೊಂದು ಹೊಸ ಬೆಳವಣಿಗೆ. ಈ ಕುಳ್ಳನಿಗೆ ಅಭಿಮಾನಿ ಸಂಘದ ಹುಚ್ಚು ಇದ್ದಿದ್ದರೆ ಅದ್ಯಾವತ್ತೋ ಹುಟ್ಟು ಹಾಕುತ್ತಿದ್ದರು. ಅದೇನೂ ದೊಡ್ಡ ವಿಷಯವಾಗಿರಲಿಲ್ಲ. ಈ ಎಲ್ಲಾ ಕಾರಣದಿಂದ ದ್ವಾರಕೀಶ್ ಅಭಿಮಾನಿಗಳ ಬಳಗದ ಹುಟ್ಟನ್ನು ಉದ್ಯಮದವರು ಗೇಲಿ ಮಾಡುವುದನ್ನು ಬಿಟ್ಟು ಸಕಾರಾತ್ಮಕವಾಗಿ ನೋಡಲಿ ಅಂದಹಾಗೆ ಈ ದ್ವಾರ್ಕಿ ಅಭಿಮಾನಿಗಳ ಸಂಘದವರೇನು ಮಾಡಲಿದ್ದಾರೆಂಬುದನ್ನು ನಾವು ಕಾದು ನೋಡೋಣ. ●

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 13-10-2010



ನಾಡೋಡಿಗಳ ಸಂಗಡ...

ತಮಿಳಿನಲ್ಲಿ ಬಿಡುಗಡೆಗೊಂಡು ಸೂಪರ್ ಹಿಟ್ ಆಗಿದ್ದ 'ನಾಡೋದಿಗಳ್' ಚಿತ್ರ ಇನ್ನೇನು ಸೆಟ್ಟೇರುತ್ತಿದೆ. ಈ ಚಿತ್ರವನ್ನು ತಮಿಳಿನ ಮೂಲ ನಿರ್ದೇಶಕ ಸಮುತ್ತಿರಖನಿ ಅವರೇ ಕನ್ನಡದಲ್ಲೂ ನಿರ್ದೇಶಿಸುತ್ತೇನೆ ಎಂದಿದ್ದರು. ಆದರೆ ಆತ ತಮಿಳು ಚಿತ್ರರಂಗದಲ್ಲೇ ಬ್ಯುಸಿ ಇರುವುದರಿಂದ ಆ ಅವಕಾಶ ಕೆ. ಮಾದೇಶ್ ಕೈ ಸೇರಿದೆ. ಪರಭಾಷೆಗಳಿಂದ ಸಿಡಿ ತಂದು ಅದನ್ನು ಯಥಾವತ್ತು ರೂಪಿಸುವ ಮಾದೇಶ್ ಈಗಾಗಲೇ ಬಹಳಷ್ಟು ರಿಮೇಕ್ ಚಿತ್ರಗಳನ್ನು ಮಾಡಿ 'ಜೆರಾಕ್ಸ್ ಎಕ್ಸ್‌ಪರ್ಟ್' ಆಗಿದ್ದಾರೆ.

ಪುನೀತ್ ರಾಜ್‌ಕುಮಾರ್, ಲೂಸ್ ಮಾದ, ಶ್ರೀನಗರ ಕಿಟ್ಟಿ, ವಿಶಾಲ್ ಹೆಗಡೆ ಮತ್ತು ರಾಧಿಕಾ ಪಂಡಿತ್ ಈ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಇಷ್ಟು ದಿನ ಬರೀ ನಾಯಕ ಪ್ರಧಾನ ಚಿತ್ರಗಳಲ್ಲೇ ನಟಿಸಿದ ಪುನೀತ್ ಈ ಬಾರಿ ಮಲ್ಟಿ ಸ್ಟಾರ್ ಚಿತ್ರದಲ್ಲಿ ನಟಿಸುತ್ತಿರುವುದೇ ಸದ್ಯದ ವಿಶೇಷ. ಮಿಕ್ಕಿದ್ದೆಲ್ಲಾ ಜೆರಾಕ್ಸ್ ಮಾದೇಶನ ಕೃಪೆ ಅಷ್ಟೇ..!




ಶಂಕರನಿಲ್ಲದ ಎರಡು ದಶಕ

ಕನ್ನಡ ಚಿತ್ರರಂಗದ ದೊಡ್ಡ ಆಸ್ತಿ ಶಂಕರ್‌ನಾಗ್ ಕಾಲವಾಗಿ ಇದೇ ಸೆಪ್ಟೆಂಬರ್ ಮೂವತ್ತಕ್ಕೆ ಭರ್ತಿ ಇಪ್ಪತ್ತು ವರ್ಷಗಳು ಕಳೆದಿವೆ.

ಶಂಕರನ ಅಗಲಿಕೆಯ ನಂತರ ಸಿನಿಮಾ, ಡ್ರಾಮಾಗಳಲ್ಲಿ ತೊಡಗಿಸಿಕೊಂಡಿರುವ ಆತನ ಪತ್ನಿ ಅರುಂಧತಿಗೆ ಈ ವರ್ಷ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ, ಮೊನ್ನೆಯಷ್ಟೇ ಹಾ ಚಿತ್ರದ ಅಭಿನಯಕ್ಕಾಗಿ ಕೇಂದ್ರ ಸರ್ಕಾರದ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿಯೂ ಸಿಕ್ಕಿದೆ. 'ರಂಗಶಂಕರ'ವನ್ನು ಕಟ್ಟಿಕೊಂಡು ಭಾರತೀಯ ರಂಗಭೂಮಿಯಲ್ಲೇ ವಿಭಿನ್ನ ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದಾರೆ. ಇದ್ದೊಬ್ಬ ಮಗಳಿಗೆ ಮದುವೆ ಮಾಡಿದ್ದಾರೆ. ಇನ್ನೊಂದೆಡೆ ಕನ್ನಡದ ಹೆಮ್ಮೆಯ ನಟ ಮತ್ತು ಶಂಕರನ ಅಣ್ಣ ರಾಜಕೀಯದ ರಂಪ ತೊರೆದು ಅನಂತ್ ಸಿಕ್ಕ ಪಾತ್ರಗಳಲ್ಲಿ ತನ್ನ ವಿಶಿಷ್ಟ ಅಭಿನಯದಿಂದ ಇಂದಿಗೂ ಬಿಡುವಿಲ್ಲದ ನಟರಾಗಿದ್ದಾರೆ.

ಶಂಕರ ಕಂಡ ಮೆಟ್ರೋ ಕನಸು ಈಗ ಗರ್ಭಾವಸ್ಥೆಯಲ್ಲಿದೆ. ಶಂಕರ್ ಬಳಸುತ್ತಿದ್ದ ಟೈಪ್‌ರೈಟಿಂಗ್ ಮಷೀನಿನ ಜಾಗಕ್ಕೆ ಕಂಪ್ಯೂಟರ್ ಲ್ಯಾಪ್‌ಟಾಪ್ ಬಂದಿದೆ. ಶಂಕರನ ನಿರೀಕ್ಷೆಯನ್ನೂ ಮೀರಿ ಚಿತ್ರರಂಗ ತಾಂತ್ರಿಕವಾಗಿ ಶ್ರೀಮಂತವಾಗಿದೆ. ಶಂಕರನಂತೆ ಎಲ್ಲವೂ ವೇಗವಾಗಿದೆ. ಸಿನಿಮಾ ಕ್ಷೇತ್ರ ನೂರೆಂಟು ಬದಲಾವಣೆಗಳನ್ನು ಕಂಡಿದೆ. ಆದರೆ ಎಲ್ಲೋ ಶಂಕರನ ಸೃಜನಶೀಲತೆಯ ಕೊರತೆ ಇದ್ದೇ ಇದೆ... ಹತ್ತಾರು ಧೀಮಂತ ನಟರು ಕಣ್ಮುಚ್ಚಿದ್ದಾರೆ... ಆದರೆ ಶಂಕರ್ ಅಕಾಲಿಕ ಮರಣದ ನೆನಪು ಹಾಗೂ ನೋವು ಯಾರೊಬ್ಬರಲ್ಲೂ ಅಳಿಸಿಹೋಗಲು ಸಾಧ್ಯವಾಗಿಲ್ಲ; ಎರಡು ದಶಕಗಳ ನಂತರವೂ....




ಯಂತ್ರ ಮಂತ್ರ ತಂತ್ರ!

ಎಂದಿರನ್ ಸುಡುಸುಡು ಜ್ವರ ಎಲ್ಲೆಡೆ ವ್ಯಾಪಿಸುತ್ತಿದೆ. ಅದು ಅಮೆರಿಕದ ನ್ಯೂಯಾರ್ಕನ್ನೂ ಬಿಟ್ಟಿಲ್ಲ...

ನ್ಯೂಯಾರ್ಕ್‌ನಲ್ಲಿ ಸಿನಿಮಾದ ಒಂದು ಟಿಕೆಟ್ಟಿನ ಬೆಲೆ 16 ಡಾಲರ್. ಆದರೆ ಎಂದಿರನ್‌ನ ಒಂದು ಟಿಕೆಟ್ ಈಗ 40 ಡಾಲರ್‌ಗೆ ಬಿಕರಿಯಾಗುತ್ತಿದೆ. ಕಳೆದ ಶುಕ್ರವಾರ ಈ ಚಿತ್ರದ ಟಿಕೆಟ್‌ಗಳ ಅಡ್ವಾನ್ಸ್ ಬುಕಿಂಗ್ ತೆರೆಯಲಾಗಿತ್ತು, ಅಂದು ಕೇವಲ ಎಂಟೂವರೆ ನಿಮಿಷಗಳಲ್ಲಿ ಅಷ್ಟೂ ಟಿಕೆಟ್‌ಗಳು ಸೋಲ್ಡ್ ಔಟ್ ಆದವಂತೆ.

ಬೆಂಗಳೂರಿನಲ್ಲೂ ಸಹ ಪಿವಿಆರ್‌ನಲ್ಲಿ ಎರಡು ಸಾವಿರ, ಊರ್ವಶಿಯಲ್ಲಿ ಮುನ್ನೂರು, ಕಾವೇರಿಯಲ್ಲಿ ಇನ್ನೂರು ರೂಪಾಯಿಗಳಿಗೆ ಎಂದಿರನ್ ಟಿಕೆಟು ಸೇಲ್ ಆಗುತ್ತಿವೆ.

ರಜನಿ ಎಂಬ ಯಂತ್ರದ ಮಂತ್ರ ಹೇಗೆ ವರ್ಕ್ ಔಟ್ ಆಗುತ್ತಿದೆ ನೋಡಿ...!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajaji...